

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮೇ 11 ಬುಧವಾರ 2022

ಸಂಪುಟ: 43 | ಸಂಚಿಕೆ: 25 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4





ಸ್ಥಳೀಯ ಸಂಸ್ಥೆಗಳ ಚುನಾವಣೆಗೆ
ಸುಪ್ರೀಂ ಸೂಚನೆ

ಮಧ್ಯಪ್ರದೇಶ, ಮಹಾರಾಷ್ಟ್ರಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ನಂತರ ಇಡೀ ದೇಶಕ್ಕೆ ಅನ್ವಯವಾಗುವಂತೆ ಮಹತ್ವದ ತೀರ್ಪು

3 ಹಂತದ ಪರಿಶೀಲನೆ ಇಲ್ಲದೆ ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಲಾಗದ ಕಾರಣ ಚುನಾವಣೆ ನೆನೆಗುದಿಗೆ

ಬೆಂಗಳೂರು, ಮೇ 10– ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದಂತೆ ಎಲ್ಲ ರಾಜ್ಯಗಳಿಗೂ ಅನ್ವಯ ಆಗುವಂತೆ ಸುಪ್ರೀಂಕೋರ್ಟ್ ಮಂಗಳವಾರ ಮಹತ್ವದ ತೀರ್ಪನ್ನು ಪ್ರಕಟಿಸಿದೆ.

ಮೂರು ಹಂತದ ಪರಿಶೀಲನೆ ಇಲ್ಲದೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಲು ಸಾಧ್ಯವಿಲ್ಲ. ಆದರೆ, ಸ್ಥಳೀಯ ಸಂಸ್ಥೆಗಳ ಅಧಿಕಾರ ಅವಧಿ ಪೂರ್ಣಗೊಂಡ ನಂತರ ನಿರ್ವಾತ ಸೃಷ್ಟಿಯಾಗಲು ಬಿಡದೇ ಚುನಾವಣೆ ನಡೆಸುವುದು ರಾಜ್ಯಗಳ ಸಾಂವಿಧಾನಿಕ ಹೊಣೆಗಾರಿಕೆಯಾಗಿದೆ ಎಂದು ಸುಪ್ರೀಂಕೋರ್ಟ್ ಹೇಳಿದೆ.

ಸುರೇಶ್ ಮಹಾಜನ್ ವರ್ಸಸ್ ಮಧ್ಯಪ್ರದೇಶ ಸರ್ಕಾರದ ನಡುವಿನ ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಾಧೀಶರಾದ ಎಎಂ ಖಾನ್‌ವಿಲ್ಕರ್, ಎಎಸ್ ಒಕಾ, ಸಿ.ಟಿ.ರವಿಕುಮಾರ್ ▶ 8ನೇ ಪುಟಕ್ಕೆ

ಮೀಸಲಾತಿ ಉದ್ದೇಶ, ಸ್ವರೂಪ ಬೇರೆಯಾಗಿವೆ

ಸ್ಥಳೀಯ ಸಂಸ್ಥೆಗಳಲ್ಲಿ ನೀಡಲಾಗಿರುವ ಮೀಸಲಾತಿ ಸ್ವರೂಪ ಹಾಗೂ ಉದ್ದೇಶವೇ ಬೇರೆ, ಶಿಕ್ಷಣ, ಉದ್ಯೋಗದಲ್ಲಿ ನೀಡಿರುವ ಮೀಸಲಾತಿಯೇ ಬೇರೆ ಎಂಬುದನ್ನು ಸುಪ್ರೀಂಕೋರ್ಟ್‌ನ ಸಾಂವಿಧಾನಿಕ ಪೀಠ ಈಗಾಗಲೇ ವ್ಯಾಖ್ಯಾನಿಸಿದೆ. ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವುದಕ್ಕೆ ಸಂಬಂಧಿಸಿ 3 ಹಂತದ ಪರಿಶೀಲನೆ ಪ್ರಕ್ರಿಯೆ ಪೂರ್ಣಗೊಂಡ ನಂತರ, ಭವಿಷ್ಯದಲ್ಲಿ ನಡೆಯುವ ಚುನಾವಣೆಗಳಿಗೆ ಮೀಸಲಾತಿ ಪರಿಗಣಿಸಬಹುದು. ಆದರೆ, ಸಾಂವಿಧಾನಿಕ ಹೊಣೆಗಾರಿಕೆ ದೃಷ್ಟಿಯಿಂದ ನೋಡಿದಾಗ, ಚುನಾವಣೆಗಳು ನಡೆಯಲೇಬೇಕು, ಯಾವುದೇ ಕಾರಣಕ್ಕೂ ವಿಳಂಬ ಮಾಡಬಾರದು ಎಂದು ನ್ಯಾಯಪೀಠ ಹೇಳಿದೆ.

ಮೀಸಲಾತಿ ಇಲ್ಲದೆಯೇ ಚುನಾವಣೆ ನಡೆದರೆ ಈ ಮಹತ್ತರ ಸಂಗತಿಗಳಿಗೆ ಉತ್ತರ ಕಂಡುಕೊಳ್ಳಬಹುದು

●ರಾಜಕೀಯ ಪಕ್ಷಗಳು, ಯಾವ ಮಟ್ಟದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ಸ್ಪರ್ಧಿಸಲು, ಹಿಂದುಳಿದ–ಅತಿ ಹಿಂದುಳಿದ ವರ್ಗಗಳಿಗೆ ಅವಕಾಶ ಮಾಡಿಕೊಡುತ್ತವೆ ಎಂಬುದನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ●ರಾಜಕೀಯ ಪಕ್ಷಗಳು ಹಿಂದುಳಿದ –ಅತಿ ಹಿಂದುಳಿದ ವರ್ಗಗಳ ಬಗ್ಗೆ ಇಟ್ಟುಕೊಂಡಿರುವ ನೈಜ ಒಲವು ತಿಳಿಯುತ್ತದೆ. ●ಯಾವ ಯಾವ ಜಾತಿಗಳು ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಪಡೆದಿವೆ ಎಂಬುದನ್ನು ಖಚಿತವಾಗಿ ತಿಳಿದುಕೊಳ್ಳಲು ಸಾಧ್ಯವಿದೆ. ●ತ್ರಿಸ್ತರ ಪರಿಶೀಲನೆಗೆ ಸ್ಪಷ್ಟ ಹಾಗೂ ಖಚಿತ ಮಾಹಿತಿ ಸಿಗುವ ಸಾಧ್ಯತೆಯಿದೆ. ●ಆಯೋಗವು, ಯಾವ ಯಾವ ಜಾತಿಗಳು ರಾಜಕೀಯವಾಗಿ ಹಿಂದುಳಿದಿವೆ ಎಂಬುದನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ●ಮಾನದಂಡವೊಂದು ರೂಪಿತವಾಗುತ್ತದೆ. ●ಕೇವಲ ಒಂದೇ ಒಂದು ಚುನಾವಣೆ ನಡೆಯುವುದರಿಂದ ಹಿಂದುಳಿದ–ಅತಿ ಹಿಂದುಳಿದ ವರ್ಗಗಳು ರಾಜಕೀಯವಾಗಿ ಏನನ್ನೂ ಕಳೆದುಕೊಳ್ಳುವುದಿಲ್ಲ. ●ಎಲ್ಲದಕ್ಕೂ ಮಿಗಿಲಾಗಿ ಸಂವಿಧಾನಬದ್ಧ ಪ್ರಜಾಪ್ರಭುತ್ವ ತತ್ವಗಳನ್ನು ಎತ್ತಿ ಹಿಡಿದ ಹಾಗೆ ಆಗುತ್ತದೆ! ಹಾಗೆಯೇ, ಇನ್ನೂ ಕೆಲವು ಪೂರಕ ಅಂಶಗಳನ್ನು ಪಟ್ಟಿ ಮಾಡಲೂಬಹುದು. –ಕೆ.ಎನ್.ಲಿಂಗಪ್ಪ

ಸುಪ್ರೀಂ ಆದೇಶ ಅಧ್ಯಯನಕ್ಕೆ ಸೂಚನೆ

ನವದೆಹಲಿ: ಮಧ್ಯಪ್ರದೇಶ ಸ್ಥಳೀಯ ಸಂಸ್ಥೆ ಚುನಾವಣೆ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಕಾನೂನು ಇಲಾಖೆ ಹಾಗೂ ಅಡ್ವೋಕೇಟ್ ಜನರಲ್ ಅವರಿಗೆ ಸಂಪೂರ್ಣ ಅಧ್ಯಯನ ಮಾಡುವಂತೆ ತಿಳಿಸಿದ್ದೇನೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ನವದೆಹಲಿಯಲ್ಲಿ ಮಾತನಾಡಿದ ಅವರು, ಕೋರ್ಟ್ ಆದೇಶ ಪ್ರತಿ ನಮಗೆ ಬಂದಿಲ್ಲ. ಸರ್ವೋಚ್ಚ ನ್ಯಾಯಾಲಯ ಚುನಾವಣಾ ಆಯೋಗ ಏನು ತೀರ್ಮಾನ ಮಾಡುತ್ತಾರೆ ಅದನ್ನು ಪಾಲಿಸಲಾಗುವುದು. ಸರ್ವೋಚ್ಚ ನ್ಯಾಯಾಲಯದ ಆದೇಶ ಎಲ್ಲಾ ರಾಜ್ಯಗಳು ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಅನ್ವಯವಾಗುತ್ತದೆ. ಚುನಾವಣಾ ಆಯೋಗದೊಂದಿಗೆ ಚರ್ಚೆ ಮಾಡಲಾಗುವುದು. ಅವರು ಸೂಚಿಸಿದಂತೆ ಕ್ರಮ ವಹಿಸಲಾಗುವುದು ಎಂದು ಹೇಳಿದರು.

ಸಾರ್ವಜನಿಕ ಸ್ಥಳಗಳಲ್ಲಿ ಧ್ವನಿವರ್ಧಕ ಬಳಕೆಗೆ ಮಾರ್ಗಸೂಚಿ ಬಿಡುಗಡೆ

ರಾತ್ರಿ 10ರಿಂದ ಮುಂಜಾನೆ 6ರವರೆಗೆ ನಿಷಿದ್ಧ

ಬೆಳಗ್ಗೆ 6ರಿಂದ ರಾತ್ರಿ 10ರವರೆಗೆ ಡೆಸಿಬಲ್ ನಿಗದಿ

ಬೆಂಗಳೂರು: ರಾಜ್ಯದ ಸಾರ್ವಜನಿಕ ಸ್ಥಳಗಳಲ್ಲಿ ಧ್ವನಿವರ್ಧಕಗಳನ್ನು ಬಳಸುವ ಬಗ್ಗೆ ರಾಜ್ಯ ಸರ್ಕಾರ ಮಂಗಳವಾರ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದ್ದು, ಅವುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ಬರುವಂತೆ ಕ್ರಮ ವಹಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದೆ. ಈ ಸಂಬಂಧ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಮಾರ್ಗಸೂಚಿ ಆದೇಶ ಹೊರಡಿಸಿದ್ದಾರೆ.

ಮೈಕ್ ಬಳಕೆಗೆ ಅನುಮತಿ ಕಡ್ಡಾಯ: 15 ದಿನ ಗಡುವು



ಇದಕ್ಕೂ ಮೊದಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಈ ಕುರಿತು ತೀರ್ಮಾನಕ್ಕೆ ಬರುವ ಸಲುವಾಗಿ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಡಿಜಿ ಹಾಗೂ ಐಜಿಪಿ, ಹೆಚ್ಚುವರಿ ಅಡ್ವೋಕೇಟ್ ಜನರಲ್, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಾರ್ಯದರ್ಶಿ, ಕಾನೂನು ಇಲಾಖೆಯ ಪ್ರಧಾನ ಕಾರ್ಯದರ್ಶಿಗಳೊಂದಿಗೆ ಸಭೆ ನಡೆಸಿ, ಚರ್ಚಿಸಿದ್ದರು.


ಈ ಸಂದರ್ಭದಲ್ಲಿ ಧ್ವನಿವರ್ಧಕಗಳ ಬಳಕೆ ಬಗ್ಗೆ ಸುಪ್ರೀಂಕೋರ್ಟ್ ಹೊರಡಿಸಿರುವ ಆದೇಶ, ರಾಜ್ಯ ಸರ್ಕಾರವು ಶಬ್ಧಮಾಲಿನ್ಯ (ನಿಯಂತ್ರಣ ಮತ್ತು ನಿಯಂತ್ರಣ) ರೂಪಿಸಿರುವ ನಿಯಮಗಳ ಬಗ್ಗೆ ಚರ್ಚೆ ನಡೆಸಲಾಯಿತು. ಆ ಬಳಿಕ ಕೆಲವು ಅಂಶಗಳನ್ನು ಜಾರಿಗೆ ತರಲು ಮುಖ್ಯಮಂತ್ರಿ ಬೊಮ್ಮಾಯಿ ಆದೇಶ ನೀಡಿದ್ದಾರೆ.

ಇನ್ನು ಮುಂದೆ ಮೈಕ್ ಬಳಸಲು ಧಾರ್ಮಿಕ ಕೇಂದ್ರಗಳು ಅನುಮತಿ ಪಡೆಯುವುದು ಕಡ್ಡಾಯ. ರಾತ್ರಿ 10 ಗಂಟೆ ಬಳಿಕ ನಿಯಮ ಉಲ್ಲಂಘಿಸುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಧ್ವನಿವರ್ಧಕವನ್ನು ನಿಗದಿತ ಡೆಸಿಬಲ್‌ಗಿಂತ ಹೆಚ್ಚಿಸಬಾರದು. ಕೈಗಾರಿಕಾ ಪ್ರದೇಶದಲ್ಲಿ ಹಗಲು 75–ರಾತ್ರಿ 70 ಡೆಸಿಬಲ್, ವಾಣಿಜ್ಯ ಪ್ರದೇಶಗಳಲ್ಲಿ ಹಗಲು 65–ರಾತ್ರಿ 55 ಡೆಸಿಬಲ್. ಜನವಸತಿ ಪ್ರದೇಶದಲ್ಲಿ ಹಗಲು 55–ರಾತ್ರಿ 45 ಡೆಸಿಬಲ್. ಸೈಲೆಂಟ್ ಜೋನ್‌ನಲ್ಲಿ ಹಗಲು 50–ರಾತ್ರಿ 40 ಡೆಸಿಬಲ್ ಶಬ್ಧ ಪ್ರಮಾಣ ಕಾಯ್ದುಕೊಳ್ಳಬೇಕು.

ಶಬ್ಧಮಾಲಿನ್ಯ(ನಿಯಂತ್ರಣ ಮತ್ತು ನಿಯಂತ್ರಣ) ನಿಯಮಗಳು–2000, ನಿಯಮ 3(1) ಅಡಿಯಲ್ಲಿ ಹೇಳಿರುವಂತೆ ಹಗಲಿನ ಸಮಯ ಎಂದರೆ **ಬೆಳಗ್ಗೆ 6ರಿಂದ ರಾತ್ರಿ 10ರವರೆಗೆ** ನಿಗದಿತ ಡೆಸಿಬಲ್‌ನಲ್ಲಿ ಬಳಸಬಹುದು. ಆದರೆ **ರಾತ್ರಿ 10ರಿಂದ ಬೆಳಗಿನ ಜಾವ 6ರವರೆಗೆ** ಸಾರ್ವಜನಿಕವಾಗಿ ಧ್ವನಿವರ್ಧಕ ಬಳಕೆ ಮಾಡುವಂತಿಲ್ಲ. ಉಳಿದ ಸಮಯದಲ್ಲಿ ಧ್ವನಿವರ್ಧಕ ಬಳಕೆ ಮಾಡಲು ಸಂಬಂಧಿಸಿದ ಪ್ರಾಧಿಕಾರದಿಂದ ಅನುಮತಿ ಪಡೆದಿರಬೇಕು. ಮಾರ್ಗಸೂಚಿ ಪ್ರಕಾರ ಧ್ವನಿವರ್ಧಕಗಳು ಅಥವಾ ಸಾರ್ವಜನಿಕ ವಿಳಾಸ ವ್ಯವಸ್ಥೆಯನ್ನು ಬಳಸುವ ಎಲ್ಲಾ ಬಳಕೆದಾರರು 15 ದಿನಗಳೊಳಗೆ ಗೊತ್ತುಪಡಿಸಿದ ಪ್ರಾಧಿಕಾರದಿಂದ ಲಿಖಿತ ಅನುಮತಿ ಪಡೆಯಬೇಕು. ಪಡೆಯದವರು ಸ್ವಯಂ ಪ್ರೇರಣೆಯಿಂದ ತೆಗೆದುಹಾಕಬೇಕು ಅಥವಾ ಗೊತ್ತುಪಡಿಸಿದ ಪ್ರಾಧಿಕಾರವು ತೆಗೆದುಹಾಕಲು ಕ್ರಮ ತೆಗೆದುಕೊಳ್ಳಬೇಕು.

ಅನುಮತಿ ನೀಡುವ ಪ್ರಾಧಿಕಾರಗಳು: ಎಲ್ಲ ಪೊಲೀಸ್ ಕಮಿಷನರೇಟ್ ಪ್ರದೇಶಗಳಲ್ಲಿ ಸಹಾಯಕ ಪೊಲೀಸ್ ▶ 8ನೇ ಪುಟಕ್ಕೆ

ನಮ್ಮ ನಿರ್ದೇಶನ ಪಾಲಿಸಿ...: ಸಿಎಂಗೆ ವರಿಷ್ಠರ ಸಲಹೆ



ಬೆಂಗಳೂರು, ಮೇ10(ಕೆಎಂಶಿ)–ನಮ್ಮ ನಿರ್ದೇಶನವನ್ನು ಪಾಲನೆ ಮಾಡಿ ಎಂದಷ್ಟೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಬಿಜೆಪಿ ವರಿಷ್ಠರು ಹೇಳಿದ್ದಾರೆ. ಸರ್ಕಾರಿ ಕಾರ್ಯಕ್ರಮದಲ್ಲಿ ಭಾಗವಹಿಸಲೆಂದು ದೆಹಲಿಗೆ ತೆರಳಿದ್ದ ಸಿಎಂಗೆ ಕೇಂದ್ರ ಗೃಹ ಸಚಿವ ಅಮಿತ್ ಷಾ, ತಾವು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಅವರನ್ನು ಭೇಟಿಯಾಗಲು ಸಾಧ್ಯವಾಗಲಿಲ್ಲ. ಆದರೆ ವರಿಷ್ಠರು ಸೂಚಿಸಿದ ವ್ಯಕ್ತಿಯೊಬ್ಬರನ್ನು ಭೇಟಿಯಾಗಿ, ಇತರೆ ಸರ್ಕಾರಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ.

ಅಮಿತ್ ಷಾ ಮತ್ತು ನಡ್ಡಾ ಅವರನ್ನು ಭೇಟಿ ಮಾಡಲೆಂದೇ ನಗರಕ್ಕೆ ಹಿಂತಿರುಗುವ ಕಾರ್ಯಕ್ರಮವನ್ನು ಅಂತಿಮಗೊಳಿಸಿಲ್ಲ. ಅಷ್ಟೇ ಅಲ್ಲ ನಾಳೆ ನಡೆಯಬೇಕಿದ್ದ ಸಂಪುಟ ಸಭೆಯನ್ನು ಮಧ್ಯಾಹ್ನಕ್ಕೆ ಮುಂದೂಡಿದ್ದಾರೆ. ಮುಖ್ಯಮಂತ್ರಿಯವರು ತಮ್ಮ ದೆಹಲಿ ಭೇಟಿ ಸಂದರ್ಭದಲ್ಲಿ ▶ 8ನೇ ಪುಟಕ್ಕೆ

ಮೇ ಮೂರನೇ ವಾರ SSLC ಫಲಿತಾಂಶ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಮೇ ಮೂರನೇ ವಾರ ಪ್ರಕಟಿಸಲಾಗುವುದು ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಮೌಲ್ಯಮಾಪನ ಮುಕ್ತಾಯವಾಗಿದ್ದು, ಫಲಿತಾಂಶದ ತಯಾರಿ ಮಾಡಲಾಗುತ್ತಿದೆ. 3ನೇ ವಾರ ಫಲಿತಾಂಶ ಪ್ರಕಟಿಸುತ್ತೇವೆ ಎಂದರು.

ಪೊಲೀಸ್ ಕಣ್ಗಾವಲಲ್ಲಿ ಮೇ 21, 22ರಂದು ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಪರೀಕ್ಷೆ

●ಪಿಎಸ್‌ಐ, ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆ ಅಕ್ರಮದಿಂದ ಎಚ್ಚೆತ್ತ ಸರ್ಕಾರ ●ಮೂರು ಹಂತದಲ್ಲಿ ತಪಾಸಣೆ, ಪ್ರತಿ ಕೊಠಡಿಯಲ್ಲಿ ಸಿಸಿ ಕ್ಯಾಮರಾ ●ಕೆಲವು ಕೇಂದ್ರದಲ್ಲಿ ಲೋಹ ಶೋಧಕ ದ್ವಾರ ವ್ಯವಸ್ಥೆ ●435 ಪರೀಕ್ಷಾ ಕೇಂದ್ರಗಳಲ್ಲಿ 1.06 ಲಕ್ಷ ಮಂದಿ ಪರೀಕ್ಷೆ ಬರೆಯಲಿದ್ದಾರೆ



ಬೆಂಗಳೂರು, ಮೇ10(ಕೆಎಂಶಿ) –ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ 15 ಸಾವಿರ ಶಿಕ್ಷಕರ ನೇಮಕಾತಿ ಪರೀಕ್ಷೆಯು, ಪೊಲೀಸ್ ಕಣ್ಗಾವಲಿನಲ್ಲಿ ನಡೆಯಲಿದೆ.

ಮೇ 21 ಮತ್ತು 22ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿದ್ದು, ರಾಜ್ಯಾದ್ಯಂತ 435 ಕೇಂದ್ರಗಳಲ್ಲಿ 1.06 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ನಡೆದ ಭಾರೀ ಭ್ರಷ್ಟಾಚಾರ ಮತ್ತು ಹಗರಣದಿಂದ ಎಚ್ಚೆತ್ತ ಸರ್ಕಾರ ಈ ಪರೀಕ್ಷೆಯನ್ನು ಪೊಲೀಸ್ ಕಣ್ಗಾವಲಿನಲ್ಲಿ ನಡೆಸಲು ತೀರ್ಮಾನಿಸಿದೆ. ಪರೀಕ್ಷೆಯನ್ನು ಕಟ್ಟುನಿಟ್ಟಾಗಿ ನಡೆಸುವ ಉದ್ದೇಶದಿಂದ ಶಿಕ್ಷಣ ಇಲಾಖೆ ಅಧಿಕಾರಿಗಳು ಪೊಲೀಸ್ ಹಿರಿಯ ಅಧಿಕಾರಿಗಳೊಟ್ಟಿಗೆ ಸಮಾಲೋಚಿಸಿ, ಕೆಲವು ಕಠಿಣ ತೀರ್ಮಾನ ಕೈಗೊಂಡಿದ್ದಾರೆ. ಸಭೆ ನಂತರ ಈ ವಿಷಯ ತಿಳಿಸಿದ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಪರೀಕ್ಷಾ ಕೊಠಡಿಗಳಿಗೂ ಸಿಸಿಟಿವಿ ಕಣ್ಗಾವಲಿನಲ್ಲಿ ಪರೀಕ್ಷೆ ನಡೆಯಲಿದೆ. ನಿರಂತರವಾಗಿ ದೃಶ್ಯಾವಳಿಗಳನ್ನು ವೀಕ್ಷಣೆ ಮಾಡಲು ಅಧಿಕಾರಿಗಳ ತಂಡವನ್ನು ನೇಮಿಸಲಾಗುವುದು ಎಂದರು. ಪರೀಕ್ಷಾ ಕೇಂದ್ರಗಳಿಗೆ ಮೊಬೈಲ್, ಕೈಗಡಿಯಾರ ಹಾಗೂ ಯಾವುದೇ ರೀತಿಯ ಎಲೆಕ್ಟ್ರಾನಿಕ್ ಸಾಧನ ತರಲು ಅವಕಾಶವಿಲ್ಲ. ಕೆಲವು ಪರೀಕ್ಷಾ ಕೇಂದ್ರಗಳಲ್ಲಿ ಲೋಹಶೋಧಕ ಅಳವಡಿಸಲಾಗುವುದು. ಅಭ್ಯರ್ಥಿಗಳು 1 ಗಂಟೆ ಮುನ್ನವೇ ಕೊಠಡಿಗಳಿಗೆ ತೆರಳಬೇಕು. ಕೇಂದ್ರ ಪ್ರವೇಶಿಸುವ ಮುನ್ನ 3 ಹಂತದಲ್ಲಿ ತಪಾಸಣೆ ನಡೆಯಲಿದೆ ಎಂದರು.

ವಿಧಾನಸಭೆಯಿಂದ ಪರಿಷತ್ ಚುನಾವಣೆ

ತೆರವಾಗುವ 7 ಸ್ಥಾನಕ್ಕೆ ಜೂ.3ರಂದು ಮತದಾನ

ಬೆಂಗಳೂರು, ಮೇ10 (ಕೆಎಂಶಿ) –ವಿಧಾನಸಭೆಯಿಂದ ವಿಧಾನಪರಿಷತ್‌ನ 7 ಸದಸ್ಯ ಸ್ಥಾನಗಳಿಗೆ ನಡೆಯುವ ದ್ವೈವಾರ್ಷಿಕ ಚುನಾವಣಾ ವೇಳಾಪಟ್ಟಿ ಪ್ರಕಟವಾಗಿದ್ದು, ಜೂ.3ರಂದು ಮತದಾನ ನಡೆಯಲಿದೆ. ಜೂ.14ರಂದು ನಿವೃತ್ತಿಯಾಗಲಿರುವ ಪರಿಷತ್‌ನ 7 ಸದಸ್ಯ ಸ್ಥಾನಗಳಿಗೆ ಭಾರತದ ಚುನಾವಣಾ ಆಯೋಗ ಚುನಾವಣಾ ವೇಳಾಪಟ್ಟಿ ಪ್ರಕಟಿಸಿದೆ.

ಪರಿಷತ್ ಸದಸ್ಯರಾದ ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ ಸಂಗಪ್ಪ ಸವದಿ, ರಾಮಪ್ಪ ತಿಮ್ಮಾಪುರ್, ಅಲ್ಲಂ ವೀರಭದ್ರಪ್ಪ, ಎಚ್.ಎಂ.ರಮೇಶ್ ಗೌಡ, ಎಸ್.ವೀಣಾ ಅಚ್ಚಯ್ಯ, ಕೆ.ವಿ.ನಾರಾಯಣಸ್ವಾಮಿ ಹಾಗೂ ಲೆಹರ್ ಸಿಂಗ್ ಶಿರೋಯಾ ಅವರು ಜೂ.14ರಂದು ನಿವೃತ್ತಿಯಾಗುತ್ತಿದ್ದಾರೆ.

ನಿವೃತ್ತಿಯಿಂದ ತೆರವಾಗುವ ಸ್ಥಾನಗಳಿಗೆ ವೇಳಾಪಟ್ಟಿ ಪ್ರಕಟವಾಗಿದ್ದು, ಮೇ 17ರಂದು ಚುನಾವಣಾ ಅಧಿಸೂಚನೆ ಪ್ರಕಟವಾಗಲಿದೆ. ಅಂದಿನಿಂದಲೇ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಲಿದ್ದು, ನಾಮಪತ್ರ ಸಲ್ಲಿಸಲು ಮೇ 24 ಕಡೇ ದಿನವಾಗಿದೆ. ಮೇ 25ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ಉಮೇದುವಾರಿಕೆಯನ್ನು ಹಿಂಪಡೆಯಲು ಮೇ 27ರವರೆಗೂ ಕಾಲಾವಕಾಶವಿದೆ. ಜೂ.3ರಂದು ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಮತದಾನ ನಡೆಯಲಿದ್ದು, ಅಂದು ಸಂಜೆ 5 ಗಂಟೆ ನಂತರ ಮತ ಎಣಿಕೆ ನಡೆದು ಚುನಾವಣಾ ಫಲಿತಾಂಶ ಪ್ರಕಟವಾಗಲಿದೆ. ಜೂ.7ರ ಒಳಗೆ ಚುನಾವಣೆ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ▶ 8ನೇ ಪುಟಕ್ಕೆ

ಬೈಕ್‌ಗೆ ಕಾರು ಡಿಕ್ಕಿ: ಸ್ಥಳದಲ್ಲಿಯೇ ತಂದೆ–ಮಗ ಸಾವು

●ಪತ್ನಿ, ಮತ್ತೊಬ್ಬ ಪುತ್ರನಿಗೆ ಗಂಭೀರ ಗಾಯ ●ಬೇಗೂರು ಸಮೀಪದ ಹಿರಿಕಾಟಿ ಗೇಟ್ ಬಳಿ ದುರ್ಘಟನೆ

ಬೇಗೂರು, ಮೇ 10(ಕಿರಣ್)–ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ತಂದೆ, ಮಗ ಸಾವನ್ನಪ್ಪಿದ್ದು, ಪತ್ನಿ ಹಾಗೂ ಮತ್ತೊಬ್ಬ ಪುತ್ರ ಗಂಭೀರವಾಗಿ ಗಾಯಗೊಂಡಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಬೇಗೂರು ಹೋಬಳಿ ಸಮೀಪದ ಹಿರಿಕಾಟಿ ಗೇಟ್ ಬಳಿ ಮಂಗಳವಾರ ನಡೆದಿದೆ.

ನಂಜನಗೂಡು ಪಟ್ಟಣದ ಶಿವಕುಮಾರ್ (35), ಅವರ ಪುತ್ರ ದರ್ಶನ್(6) ಸಾವನ್ನಪ್ಪಿದ್ದು, ಶಿವಕುಮಾರ್ ಪತ್ನಿ ಚೈತ್ರಾ (28) ಹಾಗೂ ಮತ್ತೊಬ್ಬ ಪುತ್ರ ಗಗನ್ (5) ತೀವ್ರವಾಗಿ ಗಾಯಗೊಂಡು ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ▶ 8ನೇ ಪುಟಕ್ಕೆ

ಮೈಸೂರು ವಿಜಯನಗರ ಎರಡನೇ ಹಂತದಲ್ಲಿ ಅಕ್ರಮ ಡಿ-ನೋಟಿಫೈ ಆಗಿದ್ದ ಕೋಟ್ಯಾಂತರ ರೂ. ಬೆಲೆಬಾಳುವ

1.15 ಎಕರೆ ಭೂಮಿ ಮುಡಾ ವಶಕ್ಕೆ

ಮುಡಾ ಹಿಂದಿನ ಆಯುಕ್ತ ಡಾ. ಡಿ.ಬಿ.ನಟೇಶ್ ಆದೇಶ



ಮೈಸೂರಿನ ವಿಜಯನಗರ 2ನೇ ಹಂತದ ಹಿನಕಲ್ ಸರ್ವೆ ನಂಬರ್ 105ರ ಭೂಮಿ.

●ಎಸ್.ಟಿ.ರವಿಕುಮಾರ್

ಮೈಸೂರು, ಮೇ 10–ಇತ್ತೀಚಿನ ದಿನಗಳಲ್ಲಿ ಭೂಮಿ ಬೆಲೆ ಗಗನಕ್ಕೇರುತ್ತಿದೆ. ಇದೇ ವೇಳೆ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಸರ್ಕಾರಿ ಭೂಮಿ ಕಬಳಿಸುವ ದಂಧೆಯೂ ಹೆಚ್ಚಾಗುತ್ತಿದೆ. ವಿಶೇಷವಾಗಿ ಮೈಸೂರು ನಗರ ಮತ್ತು ಇದಕ್ಕೆ ಹೊಂದಿಕೊಂಡಂತಿರುವ ಖಾಲಿ ಭೂಮಿ, ನಿವೇಶನಗಳು ಹಾಗೂ ಅದರಲ್ಲೂ ಸರ್ಕಾರಿ ಜಾಗದ ಮೇಲೆ ಕಣ್ಣಿಟ್ಟಿರುವ ಭೂಗಳ್ಳರು ಕೋಟ್ಯಾಂತರ ರೂ. ಬೆಲೆಬಾಳುವ ಆಸ್ತಿ ಕಬಳಿಸಲು ಹೊಂಚು ಹಾಕುತ್ತಿದ್ದಾರೆ. ಇತ್ತೀಚೆಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ಭಾರೀ ಬೆಲೆಬಾಳುವಂತಹ ಆಸ್ತಿಗಳ ಕಡತಗಳಲ್ಲಿನ ಪುಟಗಳನ್ನೇ ಹರಿದು ಎಗರಿಸಿ, ನಕಲಿ ದಾಖಲೆ ಸೃಷ್ಟಿಸಿ, ಅವುಗಳಲ್ಲಿ ಸೇರಿಸಿ ಭಾರೀ ಅವ್ಯವಹಾರ ನಡೆಸಿರುವುದು ಬಯಲಾಗಿದೆ. ಅದರ ಬೆನ್ನಲ್ಲೇ ವಸತಿ ಬಡಾವಣೆಗೆಂದು ವ್ಯವಸ್ಥಿತವಾಗಿ ಅಧಿಸೂಚನೆ ಹೊರಡಿಸಿ, ಮಾಲೀಕರಿಗೆ ಪರಿಹಾರ ಕಲ್ಪಿಸಲಾಗಿರುವ ಮೈಸೂರಿನ ವಿಜಯನಗರ 2ನೇ ಹಂತ ▶ 8ನೇ ಪುಟಕ್ಕೆ

ಆಯುಕ್ತರೊಂದಿಗೆ ಚರ್ಚಿಸಿ ಕ್ರಮಕ್ಕೆ ತಹಸೀಲ್ದಾರ್‌ಗೆ ಪತ್ರ ಬರೆಯುತ್ತೇವೆ

ಮೈಸೂರು: ಮುಡಾ ಈ ಹಿಂದಿನ ಆಯುಕ್ತ ಡಾ.ಡಿ.ಬಿ.ನಟೇಶ್ ಅವರು ಮಾಡಿರುವ ಆದೇಶದ ಕಡತವನ್ನು ಹಾಲಿ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಅವರಿಗೆ ತೋರಿಸಿ, ಅವರೊಂದಿಗೆ ಚರ್ಚಿಸಿ ತಹಸೀಲ್ದಾರರಿಗೆ ಪತ್ರ ಬರೆಯುತ್ತೇನೆ ಎಂದು ಮುಡಾ ವಿಶೇಷ ಭೂಸ್ವಾಧೀನಾಧಿಕಾರಿ ಹರ್ಷವರ್ಧನ್ ತಿಳಿಸಿದ್ದಾರೆ.

ಭೂಸ್ವಾಧೀನವಾಗಿ ಅವಾರ್ಡ್ ಆಗಿದ್ದಾಗ್ಯೂ ಹಿಂದಿನ ಭೂಸ್ವಾಧೀನಾಧಿಕಾರಿಗಳು ಹೇಗೆ ಡಿ–ನೋಟಿಫೈ ಮಾಡಿದ್ದಾರೆಂಬುದು ಗೊತ್ತಿಲ್ಲ. ಭೂಸ್ವಾಧೀನದಿಂದ ಕೈಬಿಡಲು ಅಧಿಕಾರವಿಲ್ಲದಿದ್ದರೂ ಪ್ರಕ್ರಿಯೆ ನಡೆಸಿ ಖಾಸಗಿ ವ್ಯಕ್ತಿಗಳ ಹೆಸರಿಗೆ ಭಾರೀ ಬೆಲೆ ಬಾಳುವ ಆಸ್ತಿಯನ್ನು ಖಾತೆ ಮಾಡಿಕೊಟ್ಟಿರುವ ಬಗ್ಗೆ ವರದಿ ಪ್ರಕಟಗೊಂಡ ಹಿನ್ನೆಲೆಯಲ್ಲಿ ಇದೀಗ ಖಾತೆ ರದ್ದುಪಡಿಸುವಂತೆ ಆಯುಕ್ತರು ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆಯಲು ಆದೇಶಿಸಿದ್ದಾರೆ. ಅದರನ್ವಯ ಪ್ರಸ್ತುತ ಆಯುಕ್ತರ ಜೊತೆ ಚರ್ಚಿಸಿ ತಹಸೀಲ್ದಾರ್ ಅವರಿಗೆ ಪತ್ರ ಬರೆಯುತ್ತೇವೆ ಎಂದು ಹರ್ಷವರ್ಧನ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ರಾಜ್ಯದಲ್ಲಿ 15 ಇಲಾಖೆಗಳ ವಿವಿಧ ಹುದ್ದೆಗಳು ಹರಾಜು; ಸರ್ಕಾರಿ ಸವಾಲ್...!?

ಬಿಜೆಪಿ ಸರ್ಕಾರ ಭಾರೀ ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ಆರೋಪಿಸಿ ಮೈಸೂರಲ್ಲಿ ಕಾಂಗ್ರೆಸ್‌ನಿಂದ ವಿನೂತನ ಪ್ರತಿಭಟನೆ

ಮೈಸೂರು,ಮೇ 10(ಪಿಎಂ)– ರಾಜ್ಯ ಬಿಜೆಪಿ ಸರ್ಕಾರ ಭಾರೀ ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ಆರೋಪಿಸಿ ಕಾಂಗ್ರೆಸ್ ವತಿಯಿಂದ ವಿವಿಧ ಇಲಾಖೆಗಳ ಉನ್ನತ ಹುದ್ದೆಗಳ ಅಣಕು ಹರಾಜು ಪ್ರಕ್ರಿಯೆ ಮೂಲಕ ಮಂಗಳವಾರ ವಿನೂತನ ರೀತಿಯ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಕಾಂಗ್ರೆಸ್ ಭವನದ ಎದುರು ನಡೆದ ಈ ವಿಭಿನ್ನ ಪ್ರತಿಭಟನೆಯಲ್ಲಿ ಕಿರು ಬೀದಿನಾಟಕದ ಮಾದರಿಯಲ್ಲಿ ಅಣಕು ಹರಾಜು ಪ್ರಕ್ರಿಯೆ ನಡೆಸಿ, ಸರ್ಕಾರದ ವಿವಿಧ ಹುದ್ದೆಗಳನ್ನು ಬಿಜೆಪಿ ಸರ್ಕಾರ ಮಾರಾಟ ಮಾಡಿ, ಹಣ ಲೂಟಿ ಮಾಡುತ್ತಿದೆ ಎಂದು ಆರೋಪಿಸಿ, ಆಕ್ರೋಶ ವ್ಯಕ್ತಪಡಿಸಿದರು.



ಮೈಸೂರಿನ ಕಾಂಗ್ರೆಸ್ ಭವನದ ಆವರಣದಲ್ಲಿ ಸರ್ಕಾರಿ ಹುದ್ದೆಗಳ ಅಣಕು ಹರಾಜು ಪ್ರಕ್ರಿಯೆ ನಡೆಸುವ ಮೂಲಕ ವಿಭಿನ್ನವಾಗಿ ಪ್ರತಿಭಟನೆ ನಡೆಸಲಾಯಿತು.

ಅಣಕು ಹರಾಜು ಪ್ರಕ್ರಿಯೆ ಆರಂಭಿಸಿದ ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ಮುಖ್ಯಮಂತ್ರಿಗಳ ಹಾದಿಯಾಗಿ ಐವರು ಮಂತ್ರಿಗಳು ಇಲ್ಲಿ ಕುಳಿತಿದ್ದಾರೆ (ಮುಖ್ಯಮಂತ್ರಿ ಸೇರಿದಂತೆ ವಿವಿಧ ಮಂತ್ರಿಗಳ ಮುಖವಾಡ ಧರಿಸಿ ಕುಳಿತಿದ್ದ ಕಾಂಗ್ರೆಸ್ ಮುಖಂಡರು). ಗೃಹ ಸಚಿವರು, ಉನ್ನತ ಶಿಕ್ಷಣ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು, ಆರೋಗ್ಯ ಸಚಿವರು ಇಲ್ಲಿದ್ದಾರೆ. ಅವರಿಗೆ ಹಣ ತಲುಪಿಸಬೇಕು ಎಂದು ಸರ್ಕಾರದ ಪ್ರತಿನಿಧಿಯಂತೆ ಮೊದಲಿಸಿದರು.

ಸುಮಾರು 545 ಸಬ್‌ಇನ್ಸ್‌ಪೆಕ್ಟರ್ ಹುದ್ದೆಗಳಲ್ಲಿ ತಲಾ 80 ಲಕ್ಷದವರೆಗೆ ಬಿಕರಿಯಾಗಿದೆ. 1,200 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ತಲಾ 50 ಲಕ್ಷ ರೂ.ನಿಂದ ಒಂದೂವರೆ ಕೋಟಿ ರೂ.ವರೆಗೆ ಬಿಕರಿ ಮಾಡಿದ್ದೇವೆ. 1,200 ಸಹಾಯಕ ಇಂಜಿನಿಯರ್ ಹುದ್ದೆಗಳು, 660 ಸಹಾಯಕ ಇಂಜಿನಿಯರ್ ಹುದ್ದೆಗಳು ಸೇರಿದಂತೆ ಇತರೆ ಹುದ್ದೆಗಳನ್ನು ಮಾರಾಟ ಮಾಡಿ, 850 ಕೋಟಿ ರೂ. ಸಂಗ್ರಹ ಆಗಿದ್ದರೂ ಕೇಂದ್ರದ ವರಿಷ್ಠರಿಗೆ ಕೇವಲ ಶೇ.25ರಷ್ಟು ಹಣ ತಲುಪಿಸಲಾಗಿದೆ. ಆದ್ದರಿಂದ ಇನ್ನೂ ಹೆಚ್ಚು ಹಣ ಸಂಗ್ರಹಿಸಲು ಇಡೀ ರಾಜ್ಯದಲ್ಲಿರುವ 15 ಇಲಾಖೆಗಳ ಪ್ರಮುಖ ಹುದ್ದೆಗಳನ್ನು ಹರಾಜು ಮಾಡುತ್ತಿದ್ದೇವೆ ಎಂದು ಅಣಕು ಮಾಡಿದರು. ಬಳಿಕ ಹರಾಜು ಕೂಗಿ ಹಣ ಪಡೆದಾಗ, ಮಂತ್ರಿಗಳು ಹಣ ವಶಕ್ಕೆ ಪಡೆಯಲು ಪೈಪೋಟಿ ನಡೆಸುವಂತೆ ಸನ್ನಿವೇಶ ಪ್ರದರ್ಶಿಸಲಾಯಿತು. ನಂತರ ಅಧಿಕಾರಿಗಳ ವರ್ಗದಲ್ಲಿನ ವೀಕ್ಷಕರಾಗಿ ಅಣಕು ಮಾಡಿ ಮಾತನಾಡಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ನಮ್ಮ ಬಿಜೆಪಿ ಸರ್ಕಾರ ಹಗರಣಗಳ ಮೂಲಕ ಕೆಟ್ಟ ಹೆಸರು ಪಡೆದಿದೆ. ಹಾಗಾಗಿ ಮುಂದಿನ ಚುನಾವಣೆಯಲ್ಲಿ ಮತ ಖರೀದಿಸಲು ಹಣ ಬೇಕಾಗಿದೆ ಎಂದರು. ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ ಅವರು ಅಧಿಕಾರಿ ವರ್ಗದಲ್ಲಿನ ವೀಕ್ಷಕರಾಗಿ ಅಣಕು ಮಾಡಿದರು. ಬಿಡ್ ಕೂಗಲು ಬಂದವರಾಗಿ ಪಕ್ಷದ ಮುಖಂಡರು, ಕಾರ್ಯಕರ್ತರು ಅಣಕು ಮಾಡಿದರು.

ಶೃಂಗೇರಿ ಸನ್ನಿಧಾನಂಗಳ ಸಾನ್ನಿಧ್ಯದಲ್ಲಿ 'ಮೈಸೂರು ಮಿತ್ರ'



ಶೃಂಗೇರಿ ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿದಾನಂಗಳ ಉತ್ತರಾಧಿಕಾರಿಗಳಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀಸ್ವಾಮಿಗಳ ವಿಜಯಯಾತ್ರೆ ಅಂಗವಾಗಿ 'ಮೈಸೂರು ಮಿತ್ರ'ನಲ್ಲಿ ಪ್ರಕಟವಾದ ವಿಶೇಷ ಲೇಖನ ಭಾಗವನ್ನು ವಿಶೇಷ ಫ್ರೇಮ್ ಹಾಕಿಸಿ, ಮೈಸೂರಲ್ಲಿ ನೆಲೆಸಿರುವ ಸನ್ನಿಧಾನಂಗಳಿಗೆ ಲೇಖನದ ಕರ್ತೃ ನಂ. ಶ್ರೀಕಂಠಕುಮಾರ್ ಅವರು ಸಮರ್ಪಿಸಿದರು.

ಬೆಲೆ ಏರಿಕೆ ಖಂಡಿಸಿ ಮಹಿಳಾ ಕಾಂಗ್ರೆಸ್ ಪ್ರತಿಭಟನೆ



ಮೈಸೂರಿನ ಕಾಂಗ್ರೆಸ್ ಭವನದ ಎದುರು ಬೆಲೆ ಏರಿಕೆ ಖಂಡಿಸಿ ಮಹಿಳಾ ಕಾಂಗ್ರೆಸ್ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಮೇ 10(ಪಿಎಂ)–ಅಡುಗೆ ಅನಿಲ ಸಿಲಿಂಡರ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ನಿಯಂತ್ರಿಸದೆ ಕೇಂದ್ರ ಬಿಜೆಪಿ ಸರ್ಕಾರ ಸಾಮಾನ್ಯ ಜನತೆ ಮೇಲೆ ಗದಾಪ್ರಹಾರ ನಡೆಸುತ್ತಿದೆ ಎಂದು ಆರೋಪಿಸಿ ಮಹಿಳಾ ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಾ.ಪುಷ್ಪಾ ಅಮರನಾಥ್ ನೇತೃತ್ವದಲ್ಲಿ ನಗರ ಹಾಗೂ ಗ್ರಾಮಾಂತರ ಮಹಿಳಾ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಕಾಂಗ್ರೆಸ್ ಭವನದ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಖಾಲಿ ಸಿಲಿಂಡರ್ ಪ್ರದರ್ಶಿಸಿ, ಸೌದೆ ಒಲೆಯಲ್ಲಿ ಅಡುಗೆ ಮಾಡುವಂತೆ ಅಣಕು ಮಾಡಿ, ಆಕ್ರೋಶ ವ್ಯಕ್ತಪಡಿಸಿದರು. ಪ್ರಧಾನಿ ಮೋದಿಯವರ ಅಚ್ಛೇ ದಿನದ ಪರಿಣಾಮ ಗೃಹ ಬಳಕೆ ಸಿಲಿಂಡರ್ ಬೆಲೆ ಸಾವಿರ ರೂ. ಗಡಿ ದಾಟಿದೆ. ಕೇಂದ್ರದ ಉಜ್ವಲ ಯೋಜನೆ ಮೂಲಕ ಗ್ಯಾಸ್ ಸಂಪರ್ಕ ಪಡೆದಿದ್ದ ಬಡವರು, ಗ್ಯಾಸ್ ಬೆಲೆಯೇರಿಕೆಯ ಶಾಕ್‌ಗೆ ತತ್ತರಿಸಿ ಹೋಗಿದ್ದಾರೆ ಎಂದು ಡಾ.ಪುಷ್ಪಾ ಅಮರ್‌ನಾಥ್ ಕಿಡಿಕಾರಿದರು.

ಹೊಗೆ ರಹಿತ ಅಡುಗೆ ಮನೆ ಉಜ್ವಲ ಯೋಜನೆಯ ಮೂಲ ಉದ್ದೇಶ. ಆದರೆ ಸಿಲಿಂಡರ್ ಬೆಲೆ ಏರಿಸಿದರೆ ಬಡವರಿಗೆ ಕೊಳ್ಳುವ ಶಕ್ತಿ ಎಲ್ಲಿದೆ? ಈಗ ಅವರು ಅಡುಗೆಗೆ ಸೌದೆಯನ್ನೇ ಬಳಸಬೇಕು. ಹಾಗಾದರೆ ಉಜ್ವಲ ಯೋಜನೆ ಸಾರ್ಥಕತೆಯೇನು? ಎಂದು ಪ್ರಶ್ನಿಸಿದರು. ಈ ವೇಳೆ ಪುಷ್ಪಾ ಅಮರನಾಥ್ ಖಾಲಿ ಸಿಲಿಂಡರ್ ಎತ್ತಿ ಹಿಡಿದು, ಪ್ರದರ್ಶಿಸಿದ್ದು ಬೆಲೆ ಏರಿಕೆ ವಿರುದ್ಧ ಮಹಿಳೆಯರ ಆಕ್ರೋಶ ಬಿಂಬಿಸುವಂತಿತ್ತು. ಬೆಲೆಯೇರಿಕೆ ಕೇವಲ ಗ್ಯಾಸ್‌ಗೆ ಮಾತ್ರ ಸೀಮಿತವಾಗಿಲ್ಲ. ಪ್ರತಿಯೊಂದು ವಸ್ತುವಿನ ಬೆಲೆಯೂ ಕೈಗೆಟುಕದಂತಾಗಿದೆ ಎಂದು ಕಿಡಿಕಾರಿದರು. ಮಹಿಳಾ ಕಾಂಗ್ರೆಸ್ ನಗರಾಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ರಾಧಾಮಣಿ, ಪುಷ್ಪವಲ್ಲಿ, ಸುಶೀಲ ಮರೀಗೌಡ, ಗಾಯಿತ್ರಿ ನಾರಾಯಣ, ಡಾ.ಸುಜಾತ, ಲತಾ ಮೋಹನ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಗ್ರಾಹಕ ಪಂಚಾಯತ್‌ನಿಂದ ಮೇ 15, ಅಭ್ಯಾಸ ವರ್ಗ

ಮೈಸೂರು, ಮೇ 10– ಅಖಿಲ ಭಾರತೀಯ ಗ್ರಾಹಕ ಪಂಚಾಯತ್, ಮೈಸೂರು ಜಿಲ್ಲಾ ವತಿಯಿಂದ ಅಭ್ಯಾಸ ವರ್ಗವನ್ನು ಮೇ 15ರಂದು ಮೈಸೂರಿನ ಗೋಪಾಲ ಸ್ವಾಮಿ ಶಿಶುವಿಹಾರದಲ್ಲಿ ಬೆಳಗ್ಗೆ 10.30 ರಿಂದ 4.30ರವರೆಗೆ ಆಯೋಜಿಸಲಾಗಿದೆ. ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಸಮಾಜದಲ್ಲಿ ಗ್ರಾಹಕರ ಹಿತಕ್ಕಾಗಿ ರಾಷ್ಟ್ರ ಹಿತಕ್ಕಾಗಿ ಕಾರ್ಯನಿರ್ವಹಿಸುತ್ತಿರುವ ಸಂಘಟನೆಯಾಗಿದೆ. ಶೋಷಣೆಗೆ ಒಳಗಾದಂತಹ ಗ್ರಾಹಕರ ಪರವಾಗಿ ನಿಂತು, ಗ್ರಾಹಕರ ಸಮಸ್ಯೆಗಳನ್ನು ಆಲಿಸುವ ಹಾಗೂ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸೂಕ್ತವಾದ ಮಾರ್ಗದರ್ಶನವನ್ನು ನೀಡುತ್ತಿದೆ. ಸಮಾಜ ಹಿತಕ್ಕಾಗಿ ಗ್ರಾಹಕರ ಒಳಿತಿಗಾಗಿ ಸ್ವಯಂ ಸೇವಕರಾಗಿ ಕಾರ್ಯನಿರ್ವಹಿಸಲು ಇಚ್ಛಿಸುವಂತಹವರು, ಅಭ್ಯಾಸ ವರ್ಗದಲ್ಲಿ ಭಾಗವಹಿಸಿ ಸಂಘಟನೆಯ ಅಡಿಯಲ್ಲಿ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಬಹುದಾಗಿದೆ. ಆಸಕ್ತರು ಮೊ.7483808924 ಕರೆ ಮಾಡಿ ಹೆಸರು ನೋಂದಾಯಿಸಿಕೊಳ್ಳಬಹುದಾಗಿದೆ.

ನೇಮಕ



ಮೈಸೂರು, ಮೇ 10 –ರಾಜ್ಯ ಅತೀ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಜಿಲ್ಲಾ ಘಟಕದ ಅಧ್ಯಕ್ಷರನ್ನಾಗಿ ನಗರ ಪಾಲಿಕೆ ಮಾಜಿ ಸದಸ್ಯ ಡಿ.ನಾಗಭೂಷಣ್ ಅವರನ್ನು ನೇಮಕ ಮಾಡಲಾಗಿದೆ.

ಗಣಪತಿ ಸಚ್ಚಿದಾನಂದ ಶ್ರೀಗಳ 80ನೇ ಜನ್ಮ ದಿನಾಚರಣೆ: ಆಂಧ್ರ ಸಿಎಂಗೆ ಆಹ್ವಾನ



ಮೈಸೂರಿನ ಅವಧೂತ ದತ್ತ ಪೀಠಾಧಿಪತಿ ಶ್ರೀ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 80ನೇ ಜನ್ಮದಿನಾಚರಣೆ ಕಾರ್ಯಕ್ರಮಕ್ಕೆ ದತ್ತಪೀಠದ ಪ್ರತಿನಿಧಿಗಳು, ಆಂಧ್ರ ಪ್ರದೇಶದ ಮುಖ್ಯಮಂತ್ರಿ ವೈ.ಎಸ್.ಜಗನ್ಮೋಹನ ರೆಡ್ಡಿ ಅವರನ್ನು ಆಹ್ವಾನಿಸಿದರು. ದತ್ತಪೀಠದ ಕಾರ್ಯನಿರ್ವಾಹಕ ಟ್ರಸ್ಟಿ ಎಚ್.ವಿ.ಪ್ರಸಾದ್, ಟ್ರಸ್ಟಿ ಟಿ.ರಮೇಶ್ ಮತ್ತು ಟಿಟಿಡಿ ಅಧ್ಯಕ್ಷ ವೈ.ವಿ.ಸುಬ್ಬಾರೆಡ್ಡಿ ಮುಖ್ಯಮಂತ್ರಿಗೆ ಆಹ್ವಾನ ಪತ್ರಿಕೆಯನ್ನು ಸಲ್ಲಿಸಿದರು.



ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರವಾಗಿ ಪೊಲೀಸ್ ಅಧೀಕ್ಷಕರ ಕಚೇರಿಯಲ್ಲಿ ಮುಖಂಡರಾದ ಯಶಸ್ವಿನಿ ಸೋಮಶೇಖರ್, ಬಿಜೆಪಿ ಮಾಜಿ ಅಧ್ಯಕ್ಷ ಶಿವಕುಮಾರ್, ಶ್ರೀ ಲಕ್ಷ್ಮೀ ವಿವಿಧೋದ್ದೇಶ ಸಹಕಾರ ಸಂಘ ಉಪಾಧ್ಯಕ್ಷ ಶಿವರಾಜ್, ಕೃಷ್ಣಕುಮಾರ್ ಮತಯಾಚಿಸಿದರು.

ಮೈಸೂರು, ಮಂಡ್ಯ, ಚಾ.ನಗರ, ಕೊಡಗಲ್ಲಿ ಮುಂದಿನ 5 ದಿನ ಮಳೆ



ಮೈಸೂರು, ಮೇ 10(ಆರ್‌ಕೆಬಿ)– ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ ಕಳೆದ ಹಲವು ದಿನಗಳಿಂದ ಭಾರೀ ಗಾಳಿ, ಸಿಡಿಲು, ಗುಡುಗು, ಮಿಂಚಿನೊಂದಿಗೆ ಸುರಿದ ಮಳೆ, ಮುಂದಿನ ಐದು ದಿನಗಳವರೆಗೂ ಮುಂದುವರಿಯಲಿದೆ. ಮೇ 11ರಿಂದ 15ರವರೆಗೆ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಜಿಲ್ಲೆಗಳಲ್ಲಿ ಸಾಧಾರಣ ಮಳೆ ಬೀಳಲಿದೆ. ನಾಳೆಯಿಂದ (ಮೇ 11) ಐದು ದಿನಗಳವರೆಗೆ ಮೈಸೂರು ಜಿಲ್ಲೆಯಲ್ಲಿ ಮೇ 11ರಂದು 23 ಮಿ.ಮೀ., 12ರಂದು 10 ಮಿ.ಮೀ., 13ರಂದು 0, 14ರಂದು 3 ಮತ್ತು 15ರಂದು 2 ಮಿ.ಮೀ. ಮಳೆಯಾಗಲಿದೆ. ಇದೇ ಅವಧಿಯಲ್ಲಿ ಕೊಡಗು ಜಿಲ್ಲೆಯಲ್ಲಿ ಕ್ರಮವಾಗಿ 9, 8, 3, 4 ಮತ್ತು 2 ಮಿ.ಮೀ. ಮಳೆಯಾಗುವ ಸಾಧ್ಯತೆ ಇದೆ. ಚಾಮರಾಜನಗರ ಜಿಲ್ಲೆಯಲ್ಲಿ ಕ್ರಮವಾಗಿ 23, 14, 0, 5 ಮತ್ತು 4 ಮಿ.ಮೀ. ಮಳೆಯಾಗಲಿದೆ. ಮಂಡ್ಯ ಜಿಲ್ಲೆಯಲ್ಲಿಯೂ ಕ್ರಮವಾಗಿ 20, 10, 0, 4 ಮತ್ತು 2 ಮಿ.ಮೀ. ಮಳೆಯಾಗುವ ಸಾಧ್ಯತೆ ಇದೆ ಎಂದು ನಾಗನಹಳ್ಳಿ ಹವಾಮಾನ ಕ್ಷೇತ್ರ ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಈ 5 ದಿನಗಳ ಅವಧಿಯಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನ 33ರಿಂದ 34 ಡಿಗ್ರಿ ಸೆಲ್ಸಿಯಸ್, ಕನಿಷ್ಠ 21 ಡಿಗ್ರಿ ಸೆಲ್ಸಿಯಸ್‌ನಷ್ಟು ಹಾಗೂ ಕೊಡಗು ಜಿಲ್ಲೆಯಲ್ಲಿ ಗರಿಷ್ಠ 26ರಿಂದ 28 ಡಿಗ್ರಿ ಸೆಲ್ಸಿಯಸ್, ಕನಿಷ್ಠ 18–19 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗುವ ಸಾಧ್ಯತೆ ಇದೆ ಎಂದು ತಿಳಿಸಲಾಗಿದೆ.



ಮೇ.16ರಂದು ಮೈಸೂರಿನ ಕುಂಬಾರಕೊಪ್ಪಲಿನಲ್ಲಿ ನಡೆಯಲಿರುವ ಶ್ರೀ ಮಹದೇಶ್ವರ ಕೋಟಿ ಜಪ ಯಜ್ಞ ಕಾರ್ಯಕ್ರಮಕ್ಕೆ ಮಹದೇಶ್ವರಬೆಟ್ಟದ ಸಾಲೂರು ಮಠದ ಮಠಾಧೀಶರಾದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಅವರನ್ನು ಶ್ರೀ ಮಹದೇಶ್ವರ ಜಯಂತ್ಯುತ್ಸವದ ನೂತನ ಸಮಿತಿ ಕಾರ್ಯಾಧ್ಯಕ್ಷರೂ ಆದ ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಶಿವಮೂರ್ತಿ ಕಾನ್ಯ, ಉಪಾಧ್ಯಕ್ಷರಾದ ಯು.ಎಂ.ಪ್ರಭುಸ್ವಾಮಿ, ಕಾರ್ಯದರ್ಶಿ ಮಹದೇವಸ್ವಾಮಿ ಆಹ್ವಾನಿಸಿದರು. ಈ ವೇಳೆ ಚಾಮರಾಜ ಕ್ಷೇತ್ರದ ಬಿಜೆಪಿ ಉಪಾಧ್ಯಕ್ಷ ಕುಮಾರ್‌ಗೌಡ, ರೈತ ಸಂಘದ ಬೆಳಗೊಳ ಸುಬ್ರಹ್ಮಣ್ಯ ಇನ್ನಿತರರು ಉಪಸ್ಥಿತರಿದ್ದರು.

ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಅಬ್ದುಲ್ ಅಜೀಮ್ ಜಿಲ್ಲಾ ಪ್ರವಾಸ



ಮೈಸೂರು, ಮೇ 10–ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಅಬ್ದುಲ್ ಅಜೀಮ್ ಮತ್ತು ಕಾರ್ಯದರ್ಶಿ ಮಹಮ್ಮದ್ ನಜೀರ್, ಮೇ 17ರಂದು ಜಿಲ್ಲಾ ಪ್ರವಾಸ ಹಮ್ಮಿಕೊಂಡಿದ್ದಾರೆ. ಅಂದು ಬೆಳಗ್ಗೆ 11 ಗಂಟೆಗೆ ಅಲ್ಪಸಂಖ್ಯಾತ ಸಮುದಾಯದ ಮುಖಂಡರು ಹಾಗೂ ಪ್ರತಿನಿಧಿಗಳೊಂದಿಗೆ ಕೋಮು ಸೌಹಾರ್ದತೆ ಕುರಿತು ಜಿಲ್ಲಾ ಪಂಚಾಯಿತಿ ಆವರಣದಲ್ಲಿ ಸಭೆ ನಡೆಸುವರು.

ಮಧ್ಯಾಹ್ನ 1.15ರಿಂದ 2.15ರವರೆಗೆ ಮುಸ್ಲಿಂ ಅನಾಥಾಶ್ರಮ, ಅಲ್ಪಸಂಖ್ಯಾತ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಭೇಟಿ ನೀಡುವರು. 3.30ರಿಂದ 4.30ರವರೆಗೆ ಪ್ರಧಾನ ಮಂತ್ರಿಗಳ 15 ಅಂಶಗಳ ಕ್ರಮ ಹಾಗೂ ಅಲ್ಪಸಂಖ್ಯಾತರಿಗೆ ವಿವಿಧ ಫಲಾನುಭವಿ ಆಧಾರಿತ ಯೋಜನೆಗಳಲ್ಲಿ ಕಲ್ಪಿಸುತ್ತಿರುವ ಪ್ರಯೋಜನಗಳ ಪ್ರಗತಿಯ ಬಗ್ಗೆ ಡಿಸಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸುವರು. ಸಂಜೆ 4.30ರಿಂದ 5.15ರವರೆಗೆ ಡಿಸಿ ಕಚೇರಿಯಲ್ಲಿ ಪೊಲೀಸ್ ಆಯುಕ್ತರು, ಪೊಲೀಸ್ ವರಿಷ್ಠಾಧಿಕಾರಿ ಮತ್ತು ನಗರ ವ್ಯಾಪ್ತಿಯ ಪೊಲೀಸ್ ಅಧಿಕಾರಿಗಳೊಂದಿಗೆ ಕೋಮು ಸೌಹಾರ್ದತೆ ಕುರಿತು ಸಭೆ ನಡೆಸುವರು. ಹಾಗೂ 5.15 ಗಂಟೆಗೆ ಪತ್ರಿಕಾಗೋಷ್ಠಿಯನ್ನು ನಡೆಸುವರು.

ಭಾರತೀಯ ಶಿಕ್ಷಣ, ಮೌಲ್ಯ ಪರಂಪರೆ ಬೆಳೆಸುತ್ತಿರುವ ಜೆಎಸ್‌ಎಸ್

ಮೈಸೂರು, ಮೇ 10–ನಮ್ಮ ಹಿರಿಯರು ಬದುಕಿನ ಹಲವು ಮೌಲ್ಯ ಪರಂಪರೆಯನ್ನು ಕಟ್ಟಿ, ನೋವು ನಲಿವುಗಳ ಬಗ್ಗೆ ತಿಳಿಸಿ ನಮಗೆ ದಾರಿದೀಪವಾಗಿದ್ದಾರೆ. ಇನ್ನು ಮುಂದೆ ಇದನ್ನು ಬೆಳೆಸುವ ಜವಾಬ್ದಾರಿಯನ್ನು ನಾವು ಅರಿಯಬೇಕು. ಈ ನಿಟ್ಟಿನಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಭಾರತೀಯ ಶಿಕ್ಷಣ ಮತ್ತು ಮೌಲ್ಯ ಪರಂಪರೆಯನ್ನು ಜಾಗೃತವಾಗಿ ಬೆಳೆಸುತ್ತಿವೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ಆರ್. ಶಿವಪ್ಪ ಅಭಿಪ್ರಾಯಪಟ್ಟರು.



ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಸ್ನಾತಕೋತ್ತರ ವಿಭಾಗದ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಉದ್ಘಾಟನೆ ನೆರವೇರಿಸಿ, ಮಾತನಾಡಿದರು. ವಿದ್ಯಾರ್ಥಿಗಳಿಗೆ ಕಾಲೇಜಿನ ದಿನಗಳು ಮೌಲ್ಯವಾದವು. ಮೌಲ್ಯಯುತವಾದ ಶಿಕ್ಷಣವನ್ನು ಪಡೆಯುವುದರ ಜೊತೆಗೆ ಸಾಂಸ್ಕೃತಿಕ ಮತ್ತು ಕ್ರೀಡಾ ಕ್ಷೇತ್ರದಲ್ಲಿಯೂ ತೊಡಗಿಸಿಕೊಳ್ಳಬೇಕಾಗಿರುವುದು ಬಹಳ ಮುಖ್ಯ. ಭಾರತದಲ್ಲಿ ಶೇ.3ರಷ್ಟು ಮಾತ್ರ ಯುವ ಸಮುದಾಯ ಸ್ನಾತಕೋತ್ತರ ಶಿಕ್ಷಣದಲ್ಲಿ ಇದ್ದಾರೆ. ಇದರಲ್ಲಿ ನೀವು ಈಗ ಭಾಗಿಯಾಗಿರುವುದು ಸಂತೋಷ ಪಡಬೇಕಾದ ಸಂಗತಿ. ಈ ಹಂತದಲ್ಲಿಯೇ ವಿದ್ಯಾರ್ಥಿಗಳೆಲ್ಲರೂ ದೊಡ್ಡ ಕನಸನ್ನು ಕಂಡು, ಗುರು ಹಿರಿಯರು, ತಂದೆ ತಾಯಿಗಳು ಮತ್ತು ಸಮಾಜ ಮೆಚ್ಚುವಂತೆ ಬೆಳೆಯಬೇಕು. ಇಂದಿನ ಸಮಾಜದಲ್ಲಿ ಅವರವರ ಸವಾಲು ಸಮಸ್ಯೆಗಳನ್ನು ಅವರವರೇ ಎದುರಿಸಬೇಕಾದ ಅನಿವಾರ್ಯತೆ ಇದೆ. ಇದನ್ನು ಎದುರಿಸಲು ವಿದ್ಯಾರ್ಥಿಗಳಲ್ಲಿ ಛಲ, ಶ್ರಮ, ಉತ್ತಮವಾದ ಗುರಿ, ಆತ್ಮವಿಶ್ವಾಸ ಇರಬೇಕು ಎಂದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ.ಸಾಂಬಶಿವಯ್ಯ ಮಾತನಾಡಿ, ಕಾಲೇಜುಗಳು ಕೇವಲ ಪಠ್ಯ ವಿಷಯಗಳನ್ನು ಕಲಿಸುವ ಕಾರ್ಖಾನೆಗಳಾಗದೆ ಪರಿಪೂರ್ಣ ವ್ಯಕ್ತಿತ್ವ ರೂಪಿಸುವ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರಗಳಾಗಬೇಕು. ವಿದ್ಯಾರ್ಥಿಗಳಲ್ಲಿರುವ ಸುಪ್ತಪ್ರತಿಭೆ ಅರಳಲು ಮತ್ತು ಸೃಜನಶೀಲತೆ ಬೆಳೆಯಲು ಅವಕಾಶಗಳನ್ನು ಒದಗಿಸಬೇಕು. ಆ ಮೂಲಕ ವ್ಯಕ್ತಿತ್ವ ವಿಕಸನವಾಗಬೇಕು. ಅದಕ್ಕಾಗಿ ಕಾಲೇಜುಗಳಲ್ಲಿ ಸಾಂಸ್ಕೃತಿಕ ವೇದಿಕೆಗಳು, ಕ್ರೀಡಾ ಚಟುವಟಿಕೆಗಳು, ಎನ್.ಸಿ.ಸಿ., ಎನ್‌ಎಸ್‌ಎಸ್, ಸ್ಕೌಟ್ಸ್, ರೆಡ್ ಕ್ರಾಸ್ ಅಸ್ತಿತ್ವಕ್ಕೆ ಬಂದಿವೆ. ಇವುಗಳ ಉಪಯೋಗವನ್ನು ವಿದ್ಯಾರ್ಥಿಗಳು ಪೂರ್ಣ ಪ್ರಮಾಣದಲ್ಲಿ ಪಡೆದುಕೊಳ್ಳಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಮಹಾರಾಣಿ ವಾಣಿಜ್ಯ ಕಾಲೇಜಿನ ಕನ್ನಡ ಅಧ್ಯಾಪಕ ಪ್ರೊ.ಮೈಸೂರು ಕೃಷ್ಣಮೂರ್ತಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಪ್ರೊ. ಎಂ.ಪಿ.ವಿಜಯೇಂದ್ರಕುಮಾರ್, ಸಾಂಸ್ಕೃತಿಕ ವೇದಿಕೆ ಸಂಚಾಲಕ ಡಾ.ಎಂ.ಪಿ.ಸೋಮಶೇಖರ್, ಕ್ರೀಡಾ ವೇದಿಕೆ ಸಂಚಾಲಕ ಎಂ.ಕಾರ್ತಿಕ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.05.2022 ಬುಧವಾರ, ಮಳೆ ನಕ್ಷತ್ರ : ಕೃತಿಕ 11.05.2022 ರಿಂದ 24.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ
ತಿಥಿ: ದಶಮಿ, ನಕ್ಷತ್ರ: ಪೂಫ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್ :** ಬ್ರಹ್ಮ ರಥೋತ್ಸವ, ಬೆಳಗ್ಗೆ 6ಕ್ಕೆ ರಥಾಂಗ ಹೋಮ, ರಥಸ್ನಪನ, ಯಾತ್ರಾದಾನ, ಮಂಟಪೋತ್ಸವ, ಬೆಳಗ್ಗೆ 7.15 ರಿಂದ ದಿವ್ಯಾರಥಾರೋಹಣ, ಗೋಕುಲಂ 3ನೇ ಹಂತದ ರಸ್ತೆಗಳಲ್ಲಿ ರಥೋತ್ಸವ, ಸಂಜೆ 6ಕ್ಕೆ ಚತುಸ್ಥಾನಾರ್ಚನೆ, ನಿತ್ಯಹೋಮ, ಶಾಂತ್ಯೋತ್ಸವ, ಸ್ಥಳ: ಟ್ರಸ್ಟ್ ಆವರಣ, ಗೋಕುಲಂ 3ನೇ ಹಂತ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು:** ರಸಾಯನ ಶಾಸ್ತ್ರ ವಿಭಾಗದಿಂದ ವಸ್ತು ವಿಜ್ಞಾನ ವಿಷಯದಲ್ಲಿ 2 ದಿನಗಳ ಸಮ್ಮೇಳನ, ಉದ್ಘಾಟನೆ: ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್. ರಂಗಪ್ಪ, ಅಧ್ಯಕ್ಷತೆ: ಕಾಲೇಜಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಪ್ರೊ.ಬಿ.ವಿ.ಸಾಂಬಶಿವಯ್ಯ, ಉಪಸ್ಥಿತಿ: ಪ್ರಾಂಶುಪಾಲ ಪ್ರೊ.ವಿಜಯೇಂದ್ರಕುಮಾರ್, ಸ್ಥಳ: ಕಾಲೇಜಿನ ಸಭಾಂಗಣ, ಸಮಯ: ಬೆಳಗ್ಗೆ 10.30ಕ್ಕೆ

■ **ಬ್ಯಾಂಕ್ ನೋಟ್ ಪೇಪರ್ ಮಿಲ್ ಇಂಡಿಯಾ:** ಸಿಎಸ್‌ಆರ್ ನಿಧಿ ಯೋಜನೆಯಡಿಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳ ವಿತರಣಾ ಸಮಾರಂಭ, ಉದ್ಘಾಟನೆ : ಬಿಎನ್‌ಪಿಎಂ ಮ್ಯಾನೇಜಿಂಗ್ ಡೈರೆಕ್ಟರ್ ಕೆ.ಜಿ. ವಿಶ್ವನಾಥನ್, ಅಧ್ಯಕ್ಷತೆ: ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ, ಮುಖ್ಯ ಅತಿಥಿಗಳು : ಪದವಿಪೂರ್ವ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಸಿ. ಮಂಜುನಾಥ್ ಪ್ರಸನ್ನ, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಡಿ.ಕೆ. ಶ್ರೀನಿವಾಸಮೂರ್ತಿ, ಬಿಎನ್‌ಪಿಎಂ ಜನರಲ್ ಮ್ಯಾನೇಜರ್ ಧರಣಿಕುಮಾರ್, ಸ್ಥಳ: ಮಹಾರಾಣಿ ಸರ್ಕಾರಿ ಪದವಿಪೂರ್ವ ಕಾಲೇಜು, ಎನ್.ಎಸ್. ರಸ್ತೆ, ಬೆಳಗ್ಗೆ 11ಕ್ಕೆ.

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ :** ಗಾನಸಿರಿ–ವೇದಾಂತ ಲಹರಿ ಭಾಗ–9 ನವೋತ್ಸವ, ಶ್ರೀನಿವಾಸ ಕಲ್ಯಾಣ ವೈಭವ ಕಾರ್ಯಕ್ರಮ, ವಿದುಷಿ ಶುಭಾ ಸಂತೋಷ್ ಅವರಿಂದ ಸಂಗೀತ ಕಾರ್ಯಕ್ರಮ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5 ರಿಂದ

■ **ಶ್ರೀ ಶೃಂಗೇರಿ ಜಗದ್ಗುರು ಸ್ವಾಗತ ಸಮಿತಿ, ಅಭಿನವ ಶಂಕರಾಲಯ :** ಪರಮಪೂಜ್ಯ ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ವಿಜಯಯಾತ್ರೆ, ಬೆಳಗ್ಗೆ 9.30 ರಿಂದ ಭಕ್ತಾದಿಗಳಿಗೆ ಶ್ರೀ ಶ್ರೀಗಳವರ ದರ್ಶನ–ಮಂತ್ರಾಕ್ಷತೆ, ಮಧ್ಯಾಹ್ನ ಚಾಮರಾಜನಗರ ಜಿಲ್ಲೆಯ ಹೆಬ್ಬಸೂರಿಗೆ ಪ್ರಯಾಣ, ಸಂಜೆ 5 ಗಂಟೆಗೆ ಹೆಬ್ಬಸೂರಿನ ಶ್ರೀ ಶಂಕರ ಮಠದಲ್ಲಿ ದೂಳೀ ಪಾದಪೂಜೆ, ಶ್ರೀ ಶ್ರೀ ಜಗದ್ಗುರುಗಳವರಿಂದ ಅನುಗ್ರಹ ಭಾಷಣ ಶ್ರೀ ಶಂಕರಮಠದಲ್ಲಿ ಶ್ರೀಗಳವರಿಂದ ಶ್ರೀ ಚಂದ್ರಮೌಳೇಶ್ವರ ಪೂಜೆ, ಭಕ್ತಾದಿಗಳಿಂದ ಪಾದಪೂಜೆ, ಸ್ಥಳ: ಶ್ರೀ ವಿದ್ಯಾಶಂಕರ ನಿಲಯ ಕಲ್ಯಾಣ ಮಂಟಪದ ಆವರಣ.


■ **ಮೈಸೂರು ಉತ್ಸವ :** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ

■ **ಸಂಚಲನ ಮೈಸೂರು :** ಸಂಚಲನ ರಂಗೋತ್ಸವ, ಉಪಸ್ಥಿತರು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಹೆಚ್. ಚನ್ನಪ್ಪ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಭಿನಂದನೆ: ಅತಿಥಿ ಉಪನ್ಯಾಸಕ ಡಾ. ಪ್ರಭುರಾಜ, ಬಳ್ಳಾರಿ ಜಿಲ್ಲೆಯ ಸಿರಿಗೇರಿ ಧಾತ್ರಿ ರಂಗ ಸಂಸ್ಥೆಯಿಂದ ಜೋಗಿರವರ ವಿಶ್ವಾಮಿತ್ರ ಮೇನಕೆ ಡ್ಯಾನ್ಸ್ ಮಾಡೋದು ಏನಕೆ? ನಾಟಕ ಪ್ರದರ್ಶನ, ನಿರ್ದೇಶನ : ಮಂಜು ಸಿರಿಗೇರಿ, ಸ್ಥಳ:ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 6.30ಕ್ಕೆ.

■ **ಬ್ರಹ್ಮವಿದ್ಯಾ, ರಸಋಷಿ ಸಂಶೋಧನಾ ಕೇಂದ್ರ, ವೀಣಾ ವಿಶ್ವೇಶ್ವರನ್ ಅಂತಾರಾಷ್ಟ್ರೀಯ ಪ್ರತಿಷ್ಠಾನ, ಅಮೆರಿಕಾ :** ಭಾರತೀಯ ಸಂಗೀತಶಾಸ್ತ್ರ ದಿನಾಚರಣೆ, ಕರ್ನಾಟಕದ ಮೇರು ವಾಗ್ಗೇಯಕಾರ ಡಾ. ರಾ. ವಿಶ್ವೇಶ್ವರನ್‌ರವರ ಸಂಗೀತ ಕೃತಿಗಳನ್ನು ಆಧರಿಸಿದ ವಿಶೇಷ ಸಂಗೀತ ಕಾರ್ಯಕ್ರಮಗಳು, ಸಂಜೆ 6 ರಿಂದ ಗಾಯನ ಕಛೇರಿ, ಸಂಜೆ 7 ರಿಂದ ಸಂಗೀತ ವಿದ್ವಾನ್ ಡಾ. ಕೆ. ವರದರಂಗನ್ ಮತ್ತು ಸಂಗಡಿಗರಿಂದ ಗಾಯನ ಕಛೇರಿ, ಯುವ ವಿದುಷಿ ಹೆಚ್.ಎನ್. ಪೃಥ್ವೀ ಭಾಸ್ಕರ್ (ವಯೋಲಿನ್), ವಿದ್ವಾನ್ ಜಿ.ಎಸ್. ರಾಮಾನುಜಂ (ಮೃದಂಗ), ಶ್ರೇಷ್ಠ ಹಿರಿಯ ವೀಣಾವಾದಕ, ವಾಗ್ಗೇಯಕಾರ ಡಾ. ರಾ. ವಿಶ್ವೇಶ್ವರನ್ ಅವರಿಂದ ವೀಣಾವಾದನ, ವಿದ್ವಾನ್ ಹೆಚ್.ಎನ್. ಭಾಸ್ಕರ್ (ವಯೋಲಿನ್), ವಿದ್ವಾನ್ ತುಮಕೂರು ಬಿ. ರವಿಶಂಕರ್ (ಮೃದಂಗ), ಯುವ ವಿದ್ವಾನ್ ವೈ.ಪಿ. ವಿಕ್ರಮ್ ಭಾರದ್ವಾಜ್ (ಮೋರ್ಚಿಂಗ್), ಸ್ಥಳ: ಶ್ರೀ ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ.

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಅಸೋಸಿಯೇಟ್ ಪ್ರೊಫೆಸರ್ ಡಾ.ಮೋಹನ ಕೃಷ್ಣರಿಂದ ಉಪನ್ಯಾಸ ಕಾರ್ಯಕ್ರಮ, ಅಧ್ಯಕ್ಷತೆ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಪ್ರಭಾಕರ, ಸ್ಥಳ: ಎಸ್.ಪಿ.ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಸಾಹತು ಕಾಲದ ಕಾನೂನುಗಳು–ಬಾನುಲಿ ಸರಣಿ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಟಿ.ಎಸ್. ಸ್ನೇಹಾ, ಬಿ. ಶ್ರೀರಾಂ ಭಟ್, ಕೆ. ಶ್ರೇಯಾ, ವ್ಯಾಖ್ಯಾನ– ಡಾ.ಬಿ.ವಿ. ವಸಂತಕುಮಾರ್, 7.15 ಪ್ರಾಯೋಜಿತ ಕಾರ್ಯಕ್ರಮ 'ಕೌಶಲ್ಯ ಕರ್ನಾಟಕ'. ಪ್ರಾಯೋಜಕರು ರಾಜ್ಯ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, 9.00 ಸ್ವಾತಂತ್ರ್ಯ ಅಮೃತ ಮಹೋತ್ಸವದ ವಿಶೇಷ ಕಾರ್ಯಕ್ರಮ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳವಳಿಯ ಪಯಣ –ಬಾನುಲಿ ಸರಣಿ, 10.00 ಉಸ್ತಾದ್ ಬಡೇ ಗುಲಾಂ ಅಲಿ ಖಾನ್ – ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ–ಪಿ.ಸುರಭಿ, 12.45 ಜನಪದ ಸಂಗೀತ–ಮಹದೇವಮ್ಮ ಮತ್ತು ತಂಡ, 1.20 ಭಾವಗೀತೆ–ಜಿ. ಪುಷ್ಪಲತಾ, 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ. ಪರಿಕಲ್ಪನೆ ಮತ್ತು ಪ್ರಸ್ತುತಿ–ಎಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ–ಎಸ್.ಸುಬ್ರಹ್ಮಣ್ಯ, 4.00 ಮಹಿಳಾರಂಗ–ಸ್ತ್ರೀ ಚೇತನ, ಲೇಖಕಿ ಉಷಾನರಸಿಂಹನ್ ಅವರೊಂದಿಗೆ ಸಂವಾದ, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪಿ.ಸಿ. ಮಳಿಮಠ್ ಮತ್ತು ಕೆ.ಬಿ.ಮೀನಾ, 6.50 ಕೃಷಿರಂಗ–ಕಿಸಾನ್ ವಾಣಿ–ದಾಳಿಂಬೆ ಕೃಷಿಗೆ ಇರುವ ಅವಕಾಶಗಳು ಕುರಿತು ಡಾ.ಜಿ. ಮಂಜುನಾಥ್ ಅವರೊಡನೆ ಸಂದರ್ಶನ, 9.05 ಕ್ಷಿತಿಜ-Literacy ಗುರು, ಸಾಹಿತ್ಯ ದಿಗ್ಗಜರೊಂದಿಗೆ ಸಂವಾದ, 10.30 ಹಳ್ಳಿ ಹಾಡು, ಪ್ರಸ್ತುತಿ– ಅಬ್ದುಲ್ ರಶೀದ್

ನಟ ದಿ. ಎಂ.ಪಿ.ಶಂಕರ್ ಪತ್ನಿ ಮಂಜುಳಾ ಶಂಕರ್ ವಿಧಿವಶ

ಮೈಸೂರು, ಮೇ 10– ಕನ್ನಡ ಸಿನಿಮಾ ರಂಗದ ಖ್ಯಾತ ಪೋಷಕ ನಟ, ನಿರ್ಮಾಪಕ ದಿ.ಎಂ.ಪಿ ಶಂಕರ್ ಪತ್ನಿ ಮಂಜುಳಾ ಶಂಕರ್ ಇಂದು ಮೈಸೂರಿನಲ್ಲಿ



ನಿಧನರಾಗಿದ್ದಾರೆ. ಅವರಿಗೆ 75 ವರ್ಷ ವಯಸ್ಸಾಗಿತ್ತು. ಹೃದಯ ಸಂಬಂಧ ಕಾಯಿಲೆಯಿಂದ ಬಳಲುತ್ತಿದ್ದ ಅವರು, ಹೃದಯಾಘಾತದಿಂದ ನಿಧನರಾಗಿದ್ದಾರೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ. ಕೆಲವು ದಿನಗಳ ಹಿಂದೆಯಷ್ಟೇ ಅವರನ್ನು ಅನಾರೋಗ್ಯದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಹೃದಯ ಸಂಬಂಧಿ ಕಾಯಿಲೆ ಕಾರಣದಿಂದಾಗಿ ಆಂಜಿಯೋಗ್ರಾಮ್ ಕೂಡ ಮಾಡಲಾಗಿತ್ತು. ಇಂದು ದಿಢೀರ್ ಮತ್ತೆ ಹೃದಯಾಘಾತಕ್ಕೀಡಾಗಿ ಇಹಲೋಕ ತ್ಯಜಿಸಿದ್ದಾರೆ. ಮೈಸೂರಿನ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ಅವರ ಅಂತ್ಯಕ್ರಿಯೆ ನಡೆಯಿತು ಎಂದು ಮೂಲಗಳು ತಿಳಿಸಿವೆ.

ಎಂ.ಪಿ.ಶಂಕರ್ ಅವರು ನಟನೆಯ ಜೊತೆಗೆ ನಿರ್ಮಾಣ ಕಾರ್ಯದಲ್ಲೂ ಬ್ಯುಸಿಯಾಗಿದ್ದಾಗ ಅವರಿಗೆ ಸಾಥ್ ನೀಡಿದವರು ಮಂಜುಳ. ಶೂಟಿಂಗ್ ಸ್ಪಾಟ್‌ನಲ್ಲೂ ಶಂಕರ್ ಅವರ ಜತೆ ಮಂಜುಳಾ ಅವರು ಇರುತ್ತಿದ್ದರು. ಶಂಕರ್ ಸಿನಿಮಾವನ್ನು ನೋಡಿಕೊಳ್ಳುತ್ತಿದ್ದರೆ, ಕುಟುಂಬದ ಜವಾಬ್ದಾರಿಯನ್ನು ಮಂಜುಳಾ ಅವರು ಹೊತ್ತಿದ್ದರು. ಕನ್ನಡದ ಹೆಸರಾಂತ ನಟ ಶಂಕರ್ ಅವರು, ಸಾಕಷ್ಟು ಚಿತ್ರಗಳಲ್ಲಿ ನಟಿಸಿದ್ದಾರೆ. ಅದರಲ್ಲೂ ವೀರಬಾಹು ಪಾತ್ರದ ಮೂಲಕ ಅಸಂಖ್ಯಾತ ಅಭಿಮಾನಿಗಳ ಹೃದಯದಲ್ಲಿದ್ದರು. ಡಾ.ರಾಜ್ ಕುಮಾರ್ ನಟನೆಯ ಗಂಧದ ಗುಡಿ ಚಿತ್ರದ ನಿರ್ಮಾಪಕರೂ ಸಹ ಎಂ.ಪಿ.ಶಂಕರ್ ಎನ್ನುವುದು ವಿಶೇಷ.

ಖ್ಯಾತ ಸಂಗೀತಗಾರ, ಸಂತೂರ್ ವಾದಕ ಪಂಡಿತ್ ಶಿವಕುಮಾರ್ ಶರ್ಮಾ ನಿಧನ

ಮುಂಬೈ, ಮೇ 10– ಖ್ಯಾತ ಸಂತೂರ್ ವಾದಕ, ಪದ್ಮ ವಿಭೂಷಣ ಪಂಡಿತ್ ಶಿವಕುಮಾರ್ ಶರ್ಮಾ ವಿಧಿವಶರಾದರು. ಕಿಡ್ನಿ ಸಮಸ್ಯೆಯ ಕಾರಣ



ಕಳೆದ ಆರು ತಿಂಗಳಿನಿಂದ ಅವರು ಡಯಾಲಿಸಿಸ್ ಚಿಕಿತ್ಸೆಗೊಳಗಾಗಿದ್ದರು. 84 ವರ್ಷದ ಪಂಡಿತ್ ಶಿವಕುಮಾರ್ ಶರ್ಮಾ ಮಂಗಳವಾರ ಹೃದಯಾಘಾತದಿಂದ ವಿಧಿವಶರಾದರು. ಖ್ಯಾತ ಸಂತೂರ್ ವಾದಕರಾಗಿದ್ದ ಶಿವಕುಮಾರ್ ಶರ್ಮಾ ಸಂಗೀತ ನಿರ್ದೇಶಕರು ಸಹ ಆಗಿದ್ದರು.

ಜಮ್ಮುವಿನಲ್ಲಿ ಜನಿಸಿದ ಪಂಡಿತ್ ಶಿವಕುಮಾರ್ ಶರ್ಮಾ ಅವರು ತಮ್ಮ ಹದಿಮೂರನೇ ವಯಸ್ಸಿನಲ್ಲಿಯೇ ಸಂತೂರ್ ನುಡಿಸುವುದನ್ನು ಕಲಿಯಲು ಪ್ರಾರಂಭಿಸಿದರು. 1955ರಲ್ಲಿ ಮೊದಲ ಬಾರಿಗೆ ಮುಂಬೈನಲ್ಲಿ ಸಾರ್ವಜನಿಕವಾಗಿ ಸಂತೂರ್ ಪ್ರದರ್ಶನ ನೀಡುವ ಮೂಲಕ ಸಂತೂರ್‌ನನ್ನು ಜನಪ್ರಿಯಗೊಳಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಹರಿಪ್ರಸಾದ್ ಚೌರಾಸಿಯಾ ಅವರೊಂದಿಗೆ, ಪಂಡಿತ್ ಶಿವಕುಮಾರ್ ಶರ್ಮಾ ಅವರು, ಸಿಲ್ಸಿಲಾ, ಚಾಂದಿನಿ ಮತ್ತು ಡರ್ ಸೇರಿದಂತೆ ಹಲವಾರು ಹಿಂದಿ ಚಿತ್ರಗಳಿಗೆ ಸಂಗೀತ ಸಂಯೋಜಿಸಿದ್ದಾರೆ. 1991 ರಲ್ಲಿ ಪ್ರತಿಷ್ಠಿತ ಪದ್ಮಶ್ರೀ ಮತ್ತು 2001 ರಲ್ಲಿ ಪದ್ಮ ವಿಭೂಷಣ ಪ್ರಶಸ್ತಿಯನ್ನು ಪಂಡಿತ್ ಶಿವಕುಮಾರ್ ಶರ್ಮಾ ಅವರು ತಮ್ಮ ಮುಡಿಗೇರಿಸಿಕೊಂಡಿದ್ದರು.

ವಿದೇಶಿ ದೇಣಿಗೆಗಾಗಿ ನಿಯಮಗಳ ಉಲ್ಲಂಘನೆ:

ಮೈಸೂರು ಸೇರಿ 100 ಸ್ಥಳಗಳಲ್ಲಿ ಸಿಬಿಐ ದಾಳಿ, 10 ಮಂದಿಯ ಬಂಧನ

ನವದೆಹಲಿ, ಮೇ 10– ವಿದೇಶಿ ದೇಣಿಗೆ ಪಡೆಯುವಲ್ಲಿ ನಿಯಮಗಳ ಉಲ್ಲಂಘನೆಗೆ ಅನುಕೂಲ ಮಾಡಿಕೊಟ್ಟ ಆರೋಪದ ಮೇಲೆ ಲಾಭರಹಿತ ಸಂಸ್ಥೆಗಳ ಪರವಾಗಿ ಲಂಚ ಪಡೆದಿದ್ದಕ್ಕಾಗಿ ಐವರು ಸರ್ಕಾರಿ ಅಧಿಕಾರಿಗಳು ಸೇರಿದಂತೆ ಹತ್ತು ಜನರನ್ನು ಬಂಧಿಸಲಾಗಿದೆ ಎಂದು ಕೇಂದ್ರ ತನಿಖಾ ದಳ (ಸಿಬಿಐ) ಮೂಲಗಳು ತಿಳಿಸಿವೆ. ಸೋಮವಾರ ರಾಷ್ಟ್ರವ್ಯಾಪಿ 100 ಸ್ಥಳಗಳಲ್ಲಿ ನಡೆಸಿದ ದಾಳಿ ವೇಳೆ ಸಿಬಿಐ ಈ ಕ್ರಮ ಕೈಗೊಂಡಿದೆ.

ಗೃಹ ಸಚಿವಾಲಯದ ಅಧಿಕಾರಿಗಳು, ಸಿಬಿಐ ಮೂಲಗಳು, ಲಂಚ ಪಡೆದು ಸರ್ಕಾರೇತರ ಸಂಸ್ಥೆ ಅಥವಾ ಎನ್‌ಜಿಒಗಳಿಗೆ ಅಕ್ರಮ ವಿದೇಶಿ ಕೊಡುಗೆ ನಿಯಂತ್ರಣ ಕಾಯ್ದೆ(ಎಫ್‌ಸಿಆರ್‌ಎ) ಕ್ಲಿಯರೆನ್ಸ್‌ಗಳನ್ನು ನೀಡಿದ್ದಾರೆ ಎಂದು ಹೇಳಲಾಗಿದೆ.

ಗೃಹ ಸಚಿವಾಲಯದ ಸಾರ್ವಜನಿಕ ಅಧಿಕಾರಿಗಳು, ಎನ್‌ಜಿಒ ಪ್ರತಿನಿಧಿಗಳು ಮತ್ತು ಮಧ್ಯವರ್ತಿಗಳು ವಿದೇಶಿ ನಿಧಿ ಮಂಜೂರಾತಿಯನ್ನು ಪಡೆಯಲು ಲಂಚವನ್ನು ಪಡೆಯುತ್ತಿದ್ದಾಗ ರೆಡ್‌ಹ್ಯಾಂಡ್‌ನಲ್ಲಿ ಸಿಕ್ಕಿಬಿದ್ದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದೆಹಲಿ, ರಾಜಸ್ಥಾನ, ಚೆನ್ನೈ, ಮೈಸೂರು ಸೇರಿದಂತೆ ಇತರೆಡೆ ಶೋಧ ನಡೆಸಿದ ನಂತರ ಹವಾಲಾ ಮಾರ್ಗಗಳ ಮೂಲಕ ಸುಮಾರು 2 ಕೋಟಿ ರೂ. ಅಕ್ರಮ ವಹಿವಾಟು ಪತ್ತೆಯಾಗಿದೆ ಎಂದು ಸಿಬಿಐ ಸಂಸ್ಥೆ ತಿಳಿಸಿದೆ. ಗೃಹ ಸಚಿವಾಲಯದ ಸುಳಿವಿನ ಮೇರೆಗೆ ಸಿಬಿಐ ದಾಳಿ ನಡೆಸಿದೆ.

ಫೋಟೋ ಜರ್ನಲಿಸ್ಟ್ ಡ್ಯಾನಿಶ್ ಸಿದ್ದಿಕಿ ಸೇರಿ 4 ಭಾರತೀಯರಿಗೆ ಪುಲಿಟ್ಜರ್ ಪ್ರಶಸ್ತಿ

ನ್ಯೂಯಾರ್ಕ್, ಮೇ 10– ಅಫ್ಘಾನಿಸ್ತಾನದಲ್ಲಿ ಹತ್ಯೆಗೀಡಾಗಿದ್ದ ಫೋಟೋ ಜರ್ನಲಿಸ್ಟ್ ಡ್ಯಾನಿಶ್ ಸಿದ್ದಿಕಿ ಸೇರಿ ನಾಲ್ವರು ಭಾರತೀಯರಿಗೆ 2022ನೇ ಸಾಲಿನ ಪುಲಿಟ್ಜರ್ ಪ್ರಶಸ್ತಿ ದೊರೆತಿದೆ.

ಕಳೆದ ವರ್ಷ ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ಮತ್ತು ಸರ್ಕಾರಿ ವಿಶೇಷ ಪಡೆಗಳ ಮಧ್ಯೆ ನಡೆದ ಸಂಘರ್ಷ ವೇಳೆ ಬಲಿಯಾಗಿದ್ದ ಫೋಟೋ ಜರ್ನಲಿಸ್ಟ್ ಡ್ಯಾನಿಶ್ ಸಿದ್ದಿಕಿ ಅವರಿಗೆ ಮರಣೋತ್ತರ ಪ್ರಶಸ್ತಿ ಲಭಿಸಿದೆ. ಎರಡನೇ ಬಾರಿಗೆ ಸಿದ್ದಿಕಿ ಪುಲಿಟ್ಜರ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಸಿದ್ದಿಕಿ ಅವರು ಕಳೆದ ವರ್ಷ ಅಫ್ಘಾನಿಸ್ತಾನದ ಕಂದಹಾರ್ ನಗರದ ಸ್ಪಿನ್ ಬೋಲ್ಡಾಕ್ ಜಿಲ್ಲೆಯಲ್ಲಿ ಆಫ್ಘನ್ ಪಡೆಗಳು ಮತ್ತು ತಾಲಿಬಾನ್ ನಡುವಿನ ಘರ್ಷಣೆ ವರದಿ ಮಾಡುವಾಗ ಹತ್ಯೆಗೀಡಾಗಿದ್ದರು.

ರೋಹಿಂಗ್ಯಾ ಬಿಕ್ಕಟ್ಟಿನ ವರದಿಗಾಗಿ ಅವರು ರಾಯಿಟರ್ಸ್ ತಂಡದ ಭಾಗವಾಗಿ 2018ರಲ್ಲಿ ಪ್ರತಿಷ್ಠಿತ ಪ್ರಶಸ್ತಿಯನ್ನು ಪಡೆದಿದ್ದರು. ಅಫ್ಘಾನಿಸ್ತಾನದ ಸಂಘರ್ಷ, ಹಾಂಗ್ ಕಾಂಗ್ ಪ್ರತಿಭಟನೆಗಳು ಮತ್ತು ಏಷ್ಯಾ, ಮಧ್ಯಪ್ರಾಚ್ಯ ಮತ್ತು ಯುರೋಪ್‌ನಲ್ಲಿ ಇತರ ಪ್ರಮುಖ ಘಟನೆಗಳನ್ನು ವ್ಯಾಪಕವಾಗಿ ಕವರ್ ಮಾಡಿದ್ದರು. ಭಾರತದಲ್ಲಿ ಕೋವಿಡ್–19 ಚಿತ್ರಣವನ್ನು ಮನಮುಟ್ಟುವಂತೆ ಕ್ಯಾಮರಾದಲ್ಲಿ ಸೆರೆಹಿಡಿದಿದ್ದ ರಾಯಿಟರ್ಸ್ ಸುದ್ದಿ ಸಂಸ್ಥೆಯ ವಿಡಿಯೋ ಜರ್ನಲಿಸ್ಟ್‌ಗಳಿಗೆ ಈ ಸಾಲಿನ ಪ್ರಶಸ್ತಿ ಸಿಕ್ಕಿದೆ. ಈ ತಂಡದಲ್ಲಿ ಡ್ಯಾನಿಶ್ ಸಿದ್ದಿಕಿ ಜತೆಗೆ ಅದ್ನಾನ್ ಅಬಿದಿ, ಸಾನ್ನಾ ಇರ್ಷದ್ ಮಟ್ಟೂ ಮತ್ತು ಅಮಿತ್ ದಾವೆ ಕೂಡ ಇದ್ದಾರೆ.

ಮೇ 19ರಿಂದ ಸಿಎಫ್‌ಟಿಆರ್‌ಐನಲ್ಲಿ

ಕೃಷಿ, ಆಹಾರ ತಂತ್ರಜ್ಞಾನ ವಸ್ತುಪ್ರದರ್ಶನ 'ಟೆಕ್ ಭಾರತ್'

ಮೂರು ದಿನಗಳ ಈ ಪ್ರದರ್ಶನಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ

ಮೈಸೂರು, ಮೇ 10 (ಆರ್‌ಕೆ)– ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಮೇ 19ರಿಂದ 3 ದಿನಗಳ 'ಟೆಕ್ ಭಾರತ್' ಕೃಷಿ ಮತ್ತು ಆಹಾರ ತಂತ್ರಜ್ಞಾನ ಮೇಳ ಕಾನ್‌ಕ್ಲೇವ್–ಕಂ– ವಸ್ತು ಪ್ರದರ್ಶನ ಆಯೋಜಿಸಲಾಗಿದೆ.

ಲಘು ಉದ್ಯೋಗ ಭಾರತಿ, ಐಎಂಎಸ್ ಫೌಂಡೇಷನ್ ಹಾಗೂ ಸಿಎಫ್‌ಟಿಆರ್‌ಐ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿರುವ 'Transforming Indias Food Technology and agronomic Landscape' ಎಂಬ ವಿಷಯ ಕುರಿತ ಟೆಕ್ ಭಾರತ್ ವಸ್ತು ಪ್ರದರ್ಶನ ಮತ್ತು ಕಾನ್‌ಕ್ಲೇವ್ ಅನ್ನು ಮೇ 19ರಂದು ಬೆಳಗ್ಗೆ 10.30 ಗಂಟೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸುವರು.

ಸಿಎಫ್‌ಟಿಆರ್‌ಐ ಸಭಾಂಗಣದಲ್ಲಿ ಇಂದು ಜಂಟಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಸಿಎಫ್‌ಟಿಆರ್‌ಐ ನಿರ್ದೇಶಕಿ ಶ್ರೀದೇವಿ ಅನ್ನಪೂರ್ಣ ಸಿಂಗ್ ಮತ್ತು ಲಘು ಉದ್ಯೋಗ ಭಾರತಿ ಉಪಾಧ್ಯಕ್ಷೆ ಛಾಯಾ ನಂಜಪ್ಪ ಅವರು, ಮೇ 19ರಿಂದ 21ರವರೆಗೆ ಕಾನ್‌ಕ್ಲೇವ್ ಮತ್ತು ಕೃಷಿ ಹಾಗೂ ಆಹಾರ ತಂತ್ರಜ್ಞಾನ ಎನ್‌ಕ್ಲೇವ್ ಹಾಗೂ ವಸ್ತು ಪ್ರದರ್ಶನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸುವರು ಎಂದರು.

ಕೇಂದ್ರ ಆಹಾರ ಸಂಸ್ಕರಣೆ ಸಚಿವ ಪಶುಪತಿಕುಮಾರ್ ಫಾರಸ್, ಕೃಷಿ ಮತ್ತು ರೈತ ಕಲ್ಯಾಣ ರಾಜ್ಯ ಸಚಿವರುಗಳಾದ ಕೈಲಾಷ್ ಚೌಧರಿ, ಶೋಭಾ ಕರಂದ್ಲಾಜೆ, ರಾಜ್ಯದ ಕೃಷಿ ಸಚಿವ ಬಿ.ಸಿ.ಪಾಟೀಲ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಕೇಂದ್ರ ವಾಣಿಜ್ಯ ಇಲಾಖೆಯ ಡಾ.ಎಂ. ಅಂಗಮುತ್ತು, ರಾಜ್ಯದ



ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ. ಶ್ರೀದೇವಿ ಅನ್ನಪೂರ್ಣ ಸಿಂಗ್ ಮಾತನಾಡಿದರು. ಲಘು ಉದ್ಯೋಗ ಭಾರತಿ ಉಪಾಧ್ಯಕ್ಷೆ ಛಾಯಾ ನಂಜಪ್ಪ, ಕಾರ್ಯದರ್ಶಿ ಸಿ.ಎನ್. ಭೋಜರಾಜ್ ಅವರನ್ನು ಚಿತ್ರದಲ್ಲಿ ಕಾಣಬಹುದು

ಎಲೆಕ್ಟ್ರಾನಿಕ್ಸ್ ಇನ್‌ಫಾರ್ಮೇಷನ್ ಟೆಕ್ನಾಲಜಿ ಇಲಾಖೆ ಅಡಿಷನಲ್ ಚೀಫ್ ಸೆಕ್ರೆಟರಿ ಡಾ.ಇ.ವಿ. ರಮಣರೆಡ್ಡಿ, ಇನ್‌ಫೋಸಿಸ್ ಮಾಜಿ ಸಿಇಒ ಕ್ರಿಸ್ ಗೋಪಾಲಕೃಷ್ಣನ್ ಹಾಗೂ ಸಂಸದ ಪ್ರತಾಪಸಿಂಹ ಗೌರವ ಅತಿಥಿಗಳಾಗಿ ಪಾಲ್ಗೊಳ್ಳುವರು.

ಕೃಷಿ ಮತ್ತು ಆಹಾರ ತಂತ್ರಜ್ಞಾನ ಅಭಿವೃದ್ಧಿಪಡಿಸುವಲ್ಲಿ ಸಿಎಫ್‌ಟಿಆರ್‌ಐನಲ್ಲಿ 1950ರಿಂದ ಈ ವರೆಗೆ 400 ತಂತ್ರಜ್ಞಾನ ಅಭಿವೃದ್ಧಿಪಡಿಸಿದ್ದು, 5000 ಮಂದಿ ಉದ್ಯಮಿಗಳು ಅದನ್ನು ಅಳವಡಿಸಿಕೊಂಡಿದ್ದಾರೆ ಎಂದ ಡಾ. ಶ್ರೀದೇವಿ ಅನ್ನಪೂರ್ಣ ಸಿಂಗ್, ಎಂಎಸ್‌ಎಂಇ ಉದ್ದಿಮೆದಾರರು ಕೃಷಿ ಆಧಾರಿತ ಕೈಗಾರಿಕೆಗಳನ್ನು ಸ್ಥಾಪಿಸಿ ನ್ಯೂಟ್ರಿಷನ್ ಫುಡ್ ತಯಾರಿಸುತ್ತಿರುವುದರಿಂದ ರೈತರ ಬೆಳೆಗೂ ಮಹತ್ವ ಬಂದಿದೆ ಎಂದು ಹೇಳಿದರು.

ಕೈಗಾರಿಕೋದ್ಯಮಿಗಳು, ಯುವ ಎಂಟರ್‌ಪ್ರಿನರ್‌ಗಳು, ಸಂಶೋಧಕರು, ಪ್ರಗತಿಪರ ರೈತರು, ವಿದ್ಯಾರ್ಥಿಗಳು, ವಿವಿಧ ತಂತ್ರಜ್ಞಾನ ಕಂಪನಿಗಳ ಪ್ರತಿನಿಧಿಗಳು, ಸ್ಟೇಕ್ ಹೋಲ್ಡರ್‌ಗಳು, ಎಜುಕೇಷನ್, ಹೆಲ್ತ್, ಅಗ್ರಿ, ಫುಡ್, ರೂರಲ್, ಎನರ್ಜಿ, ಗ್ರೀನ್ ಕ್ಲೀನ್, ಮೀಡಿಯಾ, ಆಟೋ, ಡಿಜಿಟಲ್, ಟ್ರಾವೆಲ್, ಬಯೋಟೆಕ್ ಸೇರಿದಂತೆ ವಿವಿಧ ತಂತ್ರಜ್ಞಾನಗಳಲ್ಲಿ ಸೇವೆ ಸಲ್ಲಿಸುತ್ತಿರುವವರನ್ನು ಆಹ್ವಾನಿಸಿ ಒಂದೇ ಸೂರಿನಡಿ ತಂತ್ರಜ್ಞಾನ ವರ್ಗಾವಣೆ, ವಿನಿಮಯ ಮಾಡಿಕೊಳ್ಳುವುದು 'ಟೆಕ್ ಭಾರತ್' ಮೆಗಾ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು.

ಕೈಗಾರಿಕೋದ್ಯಮಿಗಳನ್ನು ಒಂದೆಡೆ ಸೇರಿಸಿ ಆಹಾರ ಮತ್ತು ಕೃಷಿ ತಂತ್ರಜ್ಞಾನದ ಬಗ್ಗೆ ಚರ್ಚಿಸಿ ಜ್ಞಾನ ವಿನಿಮಯ ಮಾಡಿಕೊಳ್ಳುವ ಮೂಲಕ ರೈತರಿಗೆ ಕೃಷಿ ಮತ್ತು ಆಹಾರ ಉತ್ಪಾದನೆಗೆ ಅನುಕೂಲವಾಗುವ ತಂತ್ರಜ್ಞಾನ ಒದಗಿಸುವುದೇ 'ಟೆಕ್ ಭಾರತ್' ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ಛಾಯಾ ನಂಜಪ್ಪ ತಿಳಿಸಿದರು.

ಸಿಎಫ್‌ಟಿಆರ್‌ಐನಲ್ಲಿ ಈವರೆಗೆ ಅಭಿವೃದ್ಧಿಪಡಿಸಿರುವ ತಂತ್ರಜ್ಞಾನಗಳನ್ನು ಬಳಸಿಕೊಂಡು ಗುಣಾತ್ಮಕ ಆಹಾರ ಧಾನ್ಯಗಳ ಉತ್ಪಾದನೆ, ಸಂಸ್ಕರಣೆ, ರಫ್ತು ವ್ಯಾಪಾರ ಉತ್ತೇಜಿಸಲು ದೇಶದ ವಿವಿಧ ಭಾಗಗಳಿಂದ ತಜ್ಞರು, ಪ್ರಗತಿಪರ ಕೃಷಿ ಸಂಶೋಧಕರು ತಮ್ಮ ಅನುಭವಗಳನ್ನು ಗೋಷ್ಠಿಗಳಲ್ಲಿ ಹಂಚಿಕೊಳ್ಳಲಿದ್ದಾರೆ ಎಂದು ಅವರು ತಿಳಿಸಿದರು.

ಕೃಷಿಗೆ ಸಂಬಂಧಿಸಿದ ನಬಾರ್ಡ್ ಅಧಿಕಾರಿಗಳು ಕಾನ್‌ಕ್ಲೇವ್ ಗೋಷ್ಠಿಗಳಲ್ಲಿ ಭಾಗವಹಿಸುವುದರಿಂದ ರೈತರಿಗೆ ಕೃಷಿ ಸಾಲ, ಆರ್ಥಿಕ ಸಹಾಯಧನ ನೀಡುವ ಬಗ್ಗೆಯೂ ಚರ್ಚೆಯಾಗಲಿದೆ. ಆಹಾರ ಸಂಸ್ಕರಣೆ ಘಟಕ, ಸಾರಿಗೆ ಇನ್ನಿತರೆ ಸಂಸ್ಕರಣೆ ಕ್ಷೇತ್ರದ ಬಗ್ಗೆಯೂ ಸುದೀರ್ಘ ಸಮಾಲೋಚನೆ 3 ದಿನಗಳ ಕಾಲ ನಡೆಯಲಿದೆ ಎಂದು ಛಾಯಾ ನಂಜಪ್ಪ ನುಡಿದರು.

ಮೇ 19ರಿಂದ 21ರವರೆಗೆ ಬೆಳಗ್ಗೆ 10ರಿಂದ ಸಂಜೆ 6 ಗಂಟೆವರೆಗೆ ನಡೆಯಲಿರುವ ವಸ್ತು ಪ್ರದರ್ಶನಕ್ಕೆ ಉಚಿತ ಪ್ರವೇಶವಿ ರುತ್ತದೆ. ರೈತರು, ಕೃಷಿ ಸಂಶೋಧನಾ ವಿದ್ಯಾರ್ಥಿಗಳು, ಉದ್ದಿಮೆದಾರರು ಉದ್ಯಮಿಗಳಾಗಬಯಸುವ ಯುವಕರು ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಜ್ಞಾನ ವೃದ್ಧಿಸಿಕೊಳ್ಳುವ ಜೊತೆಗೆ ಸಿಎಫ್‌ಟಿಆರ್‌ಐ ಅಭಿವೃದ್ಧಿಪಡಿಸಿರುವ ಆಹಾರ ತಂತ್ರಜ್ಞಾನದ ಪ್ರಯೋಜನ ಪಡೆದುಕೊಳ್ಳಬಹುದು ಎಂದು ಡಾ. ಶ್ರೀದೇವಿ ಅನ್ನಪೂರ್ಣ ಸಿಂಗ್ ತಿಳಿಸಿದರು.

ಲಘು ಉದ್ಯೋಗ ಭಾರತಿ ಕಾರ್ಯದರ್ಶಿ ಸಿ.ಎನ್.ಭೋಜರಾಜ್, ರಾಜೀವ್, ರಾಜಪ್ಪ ಹಾಗೂ ಇತರರು ಉಪಸ್ಥಿತರಿದ್ದರು.

ಇಂದು ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆ

ಮೈಸೂರು, ಮೇ 10 (ಆರ್‌ಕೆ)– ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ನಾಳೆ (ಮೇ11) ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆ ಆಯೋಜಿಸಲಾಗಿದೆ ಎಂದು ಸಂಸ್ಥೆ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ತಿಳಿಸಿದ್ದಾರೆ. ಬುಧವಾರ ಮಧ್ಯಾಹ್ನ 3.30 ಗಂಟೆಗೆ ಆಯೋಜಿಸಿರುವ ತಂತ್ರಜ್ಞಾನ ದಿನಾಚರಣೆ ಕಾರ್ಯಕ್ರಮವನ್ನು ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಚಿದಾನಂದಗೌಡ ಉದ್ಘಾಟಿಸುವರು. ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ. ಶ್ರೀದೇವಿ ಅನ್ನಪೂರ್ಣ ಸಿಂಗ್ ಅಧ್ಯಕ್ಷತೆ ವಹಿಸಲಿರುವ ಕಾರ್ಯಕ್ರಮದಲ್ಲಿ ಸಂಸ್ಥೆಯ ಹೊಸ ತಂತ್ರಜ್ಞಾನಗಳ ಬಗ್ಗೆ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ತಜ್ಞರು ಪವರ್ ಪಾಯಿಂಟ್ ಪ್ರಸೆಂಟೇಷನ್ ನೀಡುವರು. ಡಾ. ಪ.ರಮೇಶ್ ಹಾಗೂ ಎಸ್.ವಿ.ರಾಘವೇಂದ್ರ ಭಾಗವಹಿಸುವರು.

ಯುದ್ಧಪೀಡಿತ ಉಕ್ರೇನ್‌ನಿಂದ ಮೈಸೂರು ಮೃಗಾಲಯಕ್ಕೆ

ಬ್ಲಾಕ್ ಪ್ಯಾಂಥರ್ಸ್, ಜಾಗ್ವಾರ್ ಆಗಮನ ನಿರೀಕ್ಷೆ

ಮೈಸೂರು, ಮೇ 10(ಎಸ್‌ಬಿಡಿ)– ಉಕ್ರೇನ್ ದೇಶದ ಎರಡು ಪ್ರಾಣಿಗಳು ಮೈಸೂರು ಮೃಗಾಲಯ ಸೇರುವ ಸಾಧ್ಯತೆ ಇದೆ.



ಉಕ್ರೇನ್‌ನಲ್ಲಿರುವ ಭಾರತೀಯ ವೈದ್ಯ ಡಾ.ಗಿರೀಶ್ ಕುಮಾರ್ ಸಾಕಿರುವ ಬ್ಲಾಕ್ ಪ್ಯಾಂಥರ್ಸ್ ಹಾಗೂ ಜಾಗ್ವಾರ್ ಅನ್ನು ಮೈಸೂರು ಮೃಗಾಲಯಕ್ಕೆ ನೀಡುವ ಚಿಂತನೆಯಲ್ಲಿದ್ದು, ಕೇಂದ್ರ ಅರಣ್ಯ ಇಲಾಖೆಯನ್ನು ಸಂಪರ್ಕಿಸಿ ಈ ಸಂಬಂಧ ಚರ್ಚಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕೇಂದ್ರ ಮೃಗಾಲಯ ಪ್ರಾಧಿಕಾರದ ಅಧಿಕಾರಿಗಳು ಕರ್ನಾಟಕ ಮೃಗಾಲಯ ಪ್ರಾಧಿಕಾರಕ್ಕೆ ವಿಷಯ ತಿಳಿಸಿ, ಪ್ರಾಣಿಗಳಿಗೆ ಆಶ್ರಯ ನೀಡುವ ಸಾಧ್ಯಾಸಾಧ್ಯತೆ ಬಗ್ಗೆ ಮಾಹಿತಿ ಪಡೆದಿದ್ದಾರೆ.

ಈ ಸಂಬಂಧ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ಪ್ರತಿಕ್ರಿಯಿಸಿ, ಉಕ್ರೇನ್‌ನಲ್ಲಿ ನೆಲೆಸಿರುವ ಆಂಧ್ರಪ್ರದೇಶ ಮೂಲದ ಡಾ.ಗಿರೀಶ್ ಕುಮಾರ್, ಬ್ಲಾಕ್ ಪ್ಯಾಂಥರ್ಸ್ ಹಾಗೂ ಜಾಗ್ವಾರ್ ಸಾಕಿದ್ದಾರೆ. ರಷ್ಯಾ ದಾಳಿ ಮುಂದುವರೆದಿರುವ ಹಿನ್ನೆಲೆಯಲ್ಲಿ ಅವರು ತವರಿಗೆ ವಾಪಸ್ಸಾಗಲು ನಿರ್ಧರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ತಾವು ಸಾಕಿರುವ 2 ಪ್ರಾಣಿಗಳನ್ನೂ ಜೊತೆಗೆ ಕರೆತರಲು ಅವಕಾಶ ಮಾಡಿಕೊಡುವಂತೆ ಕೇಂದ್ರ ಸರ್ಕಾರವನ್ನು ಮನವಿ ಮಾಡಿದ್ದಾರೆ ಎಂದು ತಿಳಿಸಿದರು.

ಆ ಪ್ರಾಣಿಗಳೊಂದಿಗೆ ಬಾಂಧವ್ಯ ಹೊಂದಿರುವ ಹಾಗೂ ಮತ್ತಷ್ಟು ಪ್ರಾಣಿ–ಪಕ್ಷಿಗಳನ್ನು ಸಾಕಲು ಆಸಕ್ತಿ ಹೊಂದಿರುವ ಡಾ.ಗಿರೀಶ್ ಕುಮಾರ್, ಇದಕ್ಕಾಗಿ ಆಂಧ್ರದಲ್ಲಿ ಜಾಗ ಕಲ್ಪಿಸಿಕೊಡಲು ಕೋರಿದ್ದರು. ಆದರೆ ಭಾರತದಲ್ಲಿ ವನ್ಯ ಜೀವಿಗಳನ್ನು ವೈಯಕ್ತಿಕವಾಗಿ ಸಾಕಲು ಅವಕಾಶವಿಲ್ಲ ಎಂದು ಮನವರಿಕೆ ಮಾಡಿಕೊಟ್ಟ ಅಧಿಕಾರಿಗಳು, ಪರ್ಯಾಯ ವ್ಯವಸ್ಥೆ ಬಗ್ಗೆ ಮಾಹಿತಿ ನೀಡಿದ್ದಾರೆ. ದೇಶದ 150ಕ್ಕೂ ಹೆಚ್ಚು ಮೃಗಾಲಯಗಳ ಪಟ್ಟಿ ನೀಡಿ, ನಿಮಗಿಷ್ಟವಾದ ಮೃಗಾಲಯದಲ್ಲಿ ತಾವು ಸಾಕಿರುವ ಪ್ರಾಣಿಗಳಿಗೆ ಆಶ್ರಯ ನೀಡಬಹುದು ಎಂದು ತಿಳಿಸಿ, ಅತ್ಯುತ್ತಮ ನಿರ್ವಹಣೆಯ ಐದಾರು ಮೃಗಾಲಯಗಳ ಬಗ್ಗೆಯೂ ಮಾಹಿತಿ ನೀಡಿದ್ದರು ಎಂದು ಹೇಳಿದ್ದಾರೆ.

ಐದಾರು ಮೃಗಾಲಯ ಪಟ್ಟಿಯಲ್ಲಿ ಮೊದಲಿಗೆ ಮೈಸೂರು ಮೃಗಾಲಯವನ್ನು ಸೂಚಿಸಿದ್ದರಿಂದ ಡಾ.ಗಿರೀಶ್ ಕುಮಾರ್, ಇಲ್ಲಿನ ನಿರ್ವಹಣೆ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ. ನಂತರ ಮೈಸೂರು ಮೃಗಾಲಯಕ್ಕೆ ತಮ್ಮ ಎರಡು ಪ್ರಾಣಿಗಳನ್ನು ನೀಡಲು ಇಂಗಿತ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕೇಂದ್ರ ಮೃಗಾಲಯ ಪ್ರಾಧಿಕಾರದವರು ನಮ್ಮನ್ನು ಸಂಪರ್ಕಿಸಿ, ಪ್ರಾಣಿಗಳ ಆರೈಕೆಯ ಸಾಧ್ಯಾಸಾಧ್ಯತೆ ಬಗ್ಗೆ ಮಾಹಿತಿ ಕೇಳಿದ್ದರು. ಈಗಾಗಲೇ ನಮ್ಮ ಮೃಗಾಲಯದಲ್ಲಿ ಬ್ಲಾಕ್ ಫ್ಯಾಂಥರ್ಸ್ ಹಾಗೂ ಜಾಗ್ವಾರ್ ಪ್ರಾಣಿಗಳಿದ್ದು, ಆರೈಕೆಗೆ ಬೇಕಾದ ಎಲ್ಲಾ ರೀತಿಯ ಸೌಲಭ್ಯವಿದೆ. 2019ರಲ್ಲೇ ಜಾಗ್ವಾರ್ ಇನ್ನಿತರ ಪ್ರಾಣಿಗಳನ್ನು ಬೇರೆ ದೇಶಗಳಿಂದ ತರಿಸಿಕೊಳ್ಳುವ ಪ್ರಯತ್ನ ನಡೆದಿತ್ತಾದರೂ ಕೊರೊನಾ ಕಾರಣದಿಂದ ಸಾಧ್ಯವಾಗಿರಲಿಲ್ಲ. ಡಾ.ಗಿರೀಶ್ ಕುಮಾರ್ ಅವರು ಸಾಕಿರುವ ಪ್ರಾಣಿಗಳನ್ನು ನೀಡಿದರೆ ಉತ್ತಮವಾಗಿ ಆರೈಕೆ ಮಾಡುವುದಾಗಿ ಕೇಂದ್ರ ಮೃಗಾಲಯ ಪ್ರಾಧಿಕಾರಕ್ಕೆ ಸ್ಪಷ್ಟಪಡಿಸಿದ್ದೇವೆ ಎಂದರು.

ಆದರೆ ಈವರೆಗೆ ಡಾ.ಗಿರೀಶ್ ಕುಮಾರ್, ಮೈಸೂರು ಮೃಗಾಲಯದ ಅಧಿಕಾರಿಗಳನ್ನು ಸಂಪರ್ಕಿಸಿಲ್ಲ. ಸದ್ಯ ಕೇಂದ್ರ ಮೃಗಾಲಯ ಪ್ರಾಧಿಕಾರದೊಂದಿಗೆ ಮಾತುಕತೆ ನಡೆಸಿದ್ದಾರೆ. ಉಕ್ರೇನ್‌ನಿಂದ ಪ್ರಾಣಿಗಳನ್ನು ಕರೆತರಲು ವ್ಯವಸ್ಥೆಯಾದ ಬಳಿಕ ಮೃಗಾಲಯ ಅಧಿಕಾರಿಗಳ ಸಂಪರ್ಕಿಸುವ ನಿರೀಕ್ಷೆಯಿದೆ. ಎಲ್ಲವೂ ಸುಸೂತ್ರವಾಗಿ ನಡೆದರೆ ಯುದ್ಧಪೀಡಿತ ಉಕ್ರೇನ್‌ನಿಂದ ಮೈಸೂರು ಮೃಗಾಲಯಕ್ಕೆ ಮತ್ತಿಬ್ಬರು ಅತಿಥಿಗಳು ಆಗಮಿಸಲಿದ್ದಾರೆ.

ಉಕ್ರೇನ್–ರಷ್ಯಾ ಯುದ್ಧದ ನಡುವೆ ಅಲ್ಲಿ ಸಿಲುಕಿದ್ದ ಭಾರತೀಯ ವಿದ್ಯಾರ್ಥಿಗಳನ್ನು ಕೇಂದ್ರ ಸರ್ಕಾರ ಸುರಕ್ಷಿತವಾಗಿ ಕರೆತಂದಿದೆ. ಆದರೆ ಉದ್ಯೋಗದಲ್ಲಿರುವ, ಸಾಕಿರುವ ಪ್ರಾಣಿ–ಪಕ್ಷಿಗಳನ್ನು ಬಿಟ್ಟುಬರಲು ಸಿದ್ಧರಿಲ್ಲದ ಕೆಲವರು ಅಲ್ಲಿಯೇ ಉಳಿದಿದ್ದಾರೆ. ಡಾ.ಗಿರೀಶ್ ಕುಮಾರ್ ಅವರೂ ಬ್ಲಾಕ್ ಪ್ಯಾಂಥರ್ಸ್ ಹಾಗೂ ಜಾಗ್ವಾರ್ ಅನ್ನೂ ಸುರಕ್ಷಿತವಾಗಿ ಕರೆತರುವ ಉದ್ದೇಶದಿಂದಲೇ ಉಕ್ರೇನ್‌ನಲ್ಲಿದ್ದಾರೆ.

ಮೇ 13ರಂದು ಜೆಡಿಎಸ್ 'ಜನತಾ ಜಲಧಾರೆ' ಸಮಾರೋಪ

ಗಂಗಾ ಪೂಜೆ, ಗಂಗಾ ಆರತಿ; ನೀರಾವರಿ ಯೋಜನೆಗಳ ಜಾರಿಗೆ ಸಂಕಲ್ಪ

ಬೆಂಗಳೂರು, ಮೇ 10– ಕಳೆದ ತಿಂಗಳು 16ರಂದು ಹನುಮ ಜಯಂತಿ ದಿನ ಆರಂಭವಾದ ಜನತಾ ಜಲಧಾರೆ ಕಾರ್ಯಕ್ರಮ ರಾಜ್ಯಾದ್ಯಂತ



ಯಸ್ವಿಯಾಗಿ ನಡೆದಿದ್ದು, ಮೇ 13ರಂದು ನೆಲಮಂಗಲ ಸಮೀಪ ಸಮಾರೋಪ ಸಮಾರಂಭ ನಡೆಯಲಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಆ ಬೃಹತ್ ಸಮಾವೇಶದ ಸಿದ್ಧತೆ ಮತ್ತು ರೂಪುರೇಶೆಗಳ ಬಗ್ಗೆ ಕಾರ್ಯಕ್ರಮ ನಡೆಯುವ ಸ್ಥಳದಲ್ಲೇ ಇಂದು ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದ ಅವರು, ಸಮಾರೋಪ ಸಮಾರಂಭದಲ್ಲಿ ಸುಮಾರು 4–5 ಲಕ್ಷ ಜನ ಸೇರಲಿದ್ದಾರೆ. ಬೆಂಗಳೂರು ನಗರದ ನಾಗರೀಕರಿಗೆ ತೊಂದರೆ ಆಗಬಾರದು ಎಂಬ ಕಾರಣಕ್ಕಾಗಿ ಬೆಂಗಳೂರು ಹೊರ ವಲಯದಲ್ಲಿ ಸಮಾರೋಪ ಹಮ್ಮಿಕೊಳ್ಳಲಾಗಿದೆ. ನೆಲಮಂಗಲ ಸಮೀಪದ ಬಾವಿಕೆರೆ ಬಳಿಯ ಬೆಂಗಳೂರು–ಹಾಸನ ಹೆದ್ದಾರಿಯ ಪಕ್ಕದ ಬೃಹತ್ ಮೈದಾನದಲ್ಲಿ ಮೇ 13ರಂದು ಮಧ್ಯಾಹ್ನ 3 ಗಂಟೆಗೆ ಸಮಾವೇಶ ಆರಂಭವಾಗಲಿದೆ ಎಂದು ತಿಳಿಸಿದರು.

> 180 ವಿಧಾನಸಭೆ ಕ್ಷೇತ್ರದಲ್ಲಿ ಪ್ರವಾಸ ಮಾಡಲಾಗಿದೆ. ಅಷ್ಟೂ ಕಡೆ ಜಲಧಾರೆ ಕಾರ್ಯಕ್ರಮ ನಡೆದಿದೆ. 15 ಗಂಗಾ ರಥಗಳು ಯಶಸ್ವಿಯಾಗಿ ಸಂಚರಿಸಿವೆ. ಇವುಗಳ ಮೂಲಕ ರಾಜ್ಯದ ಎಲ್ಲಾ ಜೀವ ನದಿಗಳಿಂದ ಸಂಗ್ರಹ ಮಾಡಲಾಗಿರುವ ಪುಣ್ಯಜಲವನ್ನು ಒಯು ಬೃಹತ್ ಕಲಶಕ್ಕೆ ತುಂಬಿಸಿ ಸಮಾವೇಶದಲ್ಲಿ ಪೂಜೆ ನೆರವೇರಿಸಲಾಗುವುದು

ಜಲಧಾರೆ ಕಾರ್ಯಕ್ರಮದಲ್ಲಿ ಸಂಜೆ 6.30 ಗಂಟೆಗೆ ಗಂಗಾ ಆರತಿ ಕಾರ್ಯಕ್ರಮ ನಡೆಯಲಿದೆ. ಇದಕ್ಕಾಗಿ 20 ಜನ ಪಂಡಿತರ ತಂಡ ವಾರಣಾಸಿಯಿಂದ ಬರುತ್ತಿದ್ದಾರೆ. ಸಮಾವೇಶದಲ್ಲಿ ಈ ಅಂಶ ಬಹಳ ಮಹತ್ವದ್ದು ಎಂದು ಅವರು ತಿಳಿಸಿದರು.

ನೆಲಮಂಗಲ ಮೈದಾನದಿಂದಲೇ 2023ರ ಚುನಾವಣಾ ಪ್ರಚಾರ ಆರಂಭವಾಗಲಿದೆ. ಸಾರ್ವಜನಿಕರಿಗೆ ಅನಾನು ಕೂಲ ಆಗದಂತೆ ಬೆಂಗಳೂರಿಂದ ಹಾಸನ, ಶಿವಮೊಗ್ಗ ಕಡೆ ಪ್ರಯಾಣ ಮಾಡುವ ಜನರಿಗೆ ಸ್ವಲ್ಪ ತೊಂದರೆ ಆಗಬಹುದು. ಅದಕ್ಕೆ ಪರ್ಯಾಯ ರಸ್ತೆ ಬಳಕೆ ಮಾಡುವಂತೆ ಮನವಿ ಮಾಡಿದರು. ಸಮಾವೇಶದಲ್ಲಿ ಭಾಗಿಯಾಗುವ ಎಲ್ಲರಿಗೂ ದಾಸೋಹದ ವ್ಯವಸ್ಥೆ ಮಾಡಲಾಗಿದೆ ಎಲ್ಲವನ್ನೂ ಅಚ್ಚುಕಟ್ಟಾಗಿ ಮಾಡಲಾಗಿದೆ ಎಂದು ಕುಮಾರಸ್ವಾಮಿ ಅವರು ಹೇಳಿದರು. ಇದೇ ವೇಳೆ ಸಮಾವೇಶದ ಸಿದ್ಧತೆಗಳನ್ನು ಪರಿಶೀಲನೆ ನಡೆಸಿದರು. ಶಾಸಕರಾದ ಡಾ.ಶ್ರೀನಿವಾಸ ಮೂರ್ತಿ, ಮಂಜುನಾಥ್ ಹಾಗೂ ವಿಧಾನ ಪರಿಷತ್ ಸದಸ್ಯ ಭೋಜೇಗೌಡ ಮುಂತಾದವರು ಈ ಸಂದರ್ಭದಲ್ಲಿ ಹಾಜರಿದ್ದರು.

ಲಂಕಾ ಪ್ರಧಾನಿ ನಿವಾಸಕ್ಕೆ ಬೆಂಕಿ ಹಚ್ಚಿದ ಪ್ರತಿಭಟನಾಕಾರರು

ಕೊಲಂಬೊ, ಮೇ 10– ದೇಶದಲ್ಲಿ ತೀವ್ರಗೊಂಡಿರುವ ಆಂತರಿಕ ಕಲಹದ ನಡುವೆಯೇ ಅಧ್ಯಕ್ಷ ಗೋಟಾಬಯ ರಾಜಪಕ್ಸೆಗೆ ಲಂಕಾ ಪ್ರಧಾನಿ ಮಹಿಂದಾ ರಾಜಪಕ್ಸೆ ರಾಜಿನಾಮೆ ನೀಡಿದ ಬೆನ್ನಲ್ಲೇ ಅವರ ಕುರುನೇಗಾಲದ ನಿವಾಸಕ್ಕೆ ಪ್ರತಿಭಟನಾಕಾರರು ಬೆಂಕಿ ಹಚ್ಚಿದ್ದಾರೆ.



ಮಹಿಂದಾ ರಾಜಪಕ್ಸೆ ರಾಜಿನಾಮೆ ನೀಡಿದ ಕೆಲವೇ ಗಂಟೆಗಳ ನಂತರ ವಾಯುವ್ಯ ಪ್ರಾಂತ್ಯದ ಕುರುನೇಗಾಲ ನಗರದಲ್ಲಿ ಅವರ ನಿವಾಸಕ್ಕೆ ಬೆಂಕಿ ಹಚ್ಚಲಾಗಿದೆ. ಇಂದು ಮುಂಜಾನೆ, ಸರ್ಕಾರದ ವಿರೋಧಿ ಪ್ರತಿಭಟನಾಕಾರರು ಶ್ರೀಲಂಕಾದ ಮೊರಟುವಾ ಮೇಯರ್ ಸಮನ್ ಲಾಲ್ ಫರ್ನಾಂಡೋ ಮತ್ತು ಸಂಸದರಾದ ಸನತ್ ನಿಶಾಂತ, ರಮೇಶ್ ಪತಿರಾನ, ಮಹಿಪಾಲ ಹೆರಾತ್, ಥಿಸ್ಸಾ ಕುಟ್ಟಿಯಾರಾಚಿ ಮತ್ತು ನಿಮಲ್ ಲಾಂಜಾ ಅವರ ಅಧಿಕೃತ ನಿವಾಸಗಳಿಗೆ ಬೆಂಕಿ ಹಚ್ಚಿದರು.

ಇಂಟರ್–ಯೂನಿವರ್ಸಿಟಿ ಸ್ಟೂಡೆಂಟ್ಸ್ ಫೆಡರೇಶನ್(IUSF) ಸೇರಿದಂತೆ ಹೆಚ್ಚಿನ ಸಂಖ್ಯೆಯ ಪ್ರತಿಭಟನಾಕಾರರು ಬೀದಿಗಿಳಿದು ಶ್ರೀಲಂಕಾ ಪೊದುಜನ ಪೆರಮುನಾ ಸಂಸದರ ಮೇಲೆ ಹಲ್ಲೆ ನಡೆಸಿದರು. ಕೆಲವು ಶ್ರೀಲಂಕಾ ಪೊದುಜನ ಪೆರಮುನ(SLPP) ಕಚೇರಿಗಳಿಗೆ ಬೆಂಕಿ ಹಚ್ಚಿದ್ದಾರೆ ಎಂದು ಡೈಲಿ ಮಿರರ್ ವರದಿ ಮಾಡಿದೆ.

ವೀರಕೇಟಿಯ ಪ್ರಾಂತೀಯ ಸಭೆಯ ಅಧ್ಯಕ್ಷರ ನಿವಾಸದಲ್ಲಿ ಇಬ್ಬರನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದ್ದು, ಐವರು ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಪೊಲೀಸರು ಮಾಹಿತಿ ನೀಡಿದ್ದಾರೆ.

ದೇಶದಲ್ಲಿ ನಡೆಯುತ್ತಿರುವ ಆರ್ಥಿಕ ಬಿಕ್ಕಟ್ಟನ್ನು ನಿಭಾಯಿಸಲು ಸರ್ವಪಕ್ಷಗಳ ಮಧ್ಯಂತರ ಸರ್ಕಾರವನ್ನು ರಚಿಸಲು ಪ್ರಧಾನಿಯವರು ತಮ್ಮ ರಾಜೀನಾಮೆಯನ್ನು ಸಲ್ಲಿಸಿದ ನಂತರವೂ ಬೆಳವಣಿಗೆಗಳು ಬಂದಿವೆ. ದ್ವೀಪ ರಾಷ್ಟ್ರದಲ್ಲಿ ಕರ್ಫ್ಯೂ ಇದ್ದರೂ ಶಾಂತತೆಯನ್ನು ಕಾಪಾಡಿಕೊಳ್ಳಲು ಸೇನೆಯನ್ನು ರಸ್ತೆಗಳಲ್ಲಿ ನಿಯೋಜಿಸಲಾಗಿದೆ ಎಂದು ಡೈಲಿ ಮಿರರ್ ವರದಿ ಮಾಡಿದೆ.

ಕಳೆದ ಕೆಲವು ದಿನಗಳಿಂದ ಸರ್ಕಾರದ ವಿರುದ್ಧ ರಾಷ್ಟ್ರವ್ಯಾಪಿ ಪ್ರತಿಭಟನೆಗಳು ತೀವ್ರಗೊಂಡಿದ್ದು, ಪ್ರತಿಭಟನಾ ಸ್ಥಳಗಳಲ್ಲಿ ನಿಯೋಜಿಸಲಾದ ಭದ್ರತಾ ಪಡೆಗಳೊಂದಿಗೆ ಘರ್ಷಣೆಯ ಘಟನೆಗಳು ಹೆಚ್ಚಾಗುತ್ತಿವೆ.

ರಾಜಪಕ್ಸೆ ಅಜ್ಞಾತ ಸ್ಥಳಕ್ಕೆ ಸ್ಥಳಾಂತರ: ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಶ್ರೀಲಂಕಾ ರಾಜಧಾನಿ ಕೊಲೊಂಬೊ ನಗರದಲ್ಲಿ ಪ್ರತಿಭಟನೆ ಹಿಂಸಾಚಾರ ರೂಪಕ್ಕೆ ತಾಳಿ ಭಾರೀ ಶಸ್ತ್ರಸಜ್ಜಿತ ಪಡೆಗಳು ಮಹಿಂದ ರಾಜಪಕ್ಸೆ ಅವರನ್ನು ಕೊಲಂಬೊದಲ್ಲಿನ ಅವರ ಅಧಿಕೃತ ನಿವಾಸದಿಂದ ಸ್ಥಳಾಂತರಿಸಿವೆ.

ರಾಜಧಾನಿ ಕೊಲೊಂಬೊದಲ್ಲಿರುವ ಮಹಿಂದಾ ರಾಜಪಕ್ಸ ಅವರ "ಟೆಂಪಲ್ ಟ್ರೀಸ್" ನಿವಾಸಕ್ಕೆ ಬಲವಂತವಾಗಿ ನುಗ್ಗಿದ ಪ್ರತಿಭಟನಾಕಾರರು ನಂತರ ರಾಜಪಕ್ಸೆ ಅವರ ಕುಟುಂಬಸ್ಥರು ಇರುವ ಎರಡು ಅಂತಸ್ತಿನ ಮುಖ್ಯ ಕಟ್ಟಡಕ್ಕೆ ನುಗ್ಗಲು ಪ್ರಯತ್ನಿಸಿದರು.

ಪರಿಸ್ಥಿತಿ ವಿಕೋಪಕ್ಕೆ ತಿರುಗುತ್ತಿದ್ದಂತೆ ಮುಂಜಾನೆ ಕಾರ್ಯಾಚರಣೆಯ ನಂತರ, ಮಹಿಂದ ರಾಜಪಕ್ಸ ಮತ್ತು ಅವರ ಕುಟುಂಬವನ್ನು ಸೇನೆ ಸುರಕ್ಷಿತವಾಗಿ ಸ್ಥಳಾಂತರಿಸಿದೆ ಎಂದು ಉನ್ನತ ಭದ್ರತಾ ಅಧಿಕಾರಿ ತಿಳಿಸಿದ್ದಾರೆ. ಅವರ ಮನೆಯ ಕಂಪೌಂಡ್ ಮೇಲೆ ಕನಿಷ್ಠ 10 ಪೆಟ್ರೋಲ್ ಬಾಂಬ್‌ಗಳನ್ನು ಎಸೆಯಲಾಗಿದೆ.

ಗಲಭೆ ನಿಲ್ಲಿಸುವಂತೆ ಶ್ರೀಲಂಕಾ ಅಧ್ಯಕ್ಷ ಮನವಿ

ಕೊಲಂಬೊ, ಮೇ 10– ಭೀಕರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಲಂಕೆಯಲ್ಲಿ



ಹಿಂಸಾಚಾರ ಇದೀಗ ತೀವ್ರ ಸ್ವರೂಪಕ್ಕೆ ತಿರುಗಿದ್ದು ಸತ್ತವರ ಸಂಖ್ಯೆ ಎಂಟಕ್ಕೆ ಏರಿಕೆಯಾಗಿದೆ. ಇನ್ನು ದೇಶದಲ್ಲಿ ಹಿಂಸಾಚಾರ ಮತ್ತು ಸೇಡಿನ ಕೃತ್ಯಗಳನ್ನು ನಿಲ್ಲಿಸುವಂತೆ ಜನರನ್ನು ಶ್ರೀಲಂಕಾ ಅಧ್ಯಕ್ಷ ಗೋತಬಯ ರಾಜಪಕ್ಸೆ ಮನವಿ ಮಾಡಿದ್ದು, ರಾಷ್ಟ್ರ ಎದುರಿಸುತ್ತಿರುವ ರಾಜಕೀಯ ಮತ್ತು ಆರ್ಥಿಕ ಬಿಕ್ಕಟ್ಟನ್ನು ಪರಿಹರಿಸುವ ಪ್ರತಿಜ್ಞೆ ಮಾಡಿದ್ದಾರೆ. ಮಾಜಿ ಪ್ರಧಾನಿ ಮಹಿಂದಾ ರಾಜಪಕ್ಸೆ ಅವರ ಬೆಂಬಲಿಗರು, ಸರ್ಕಾರಿ ವಿರೋಧಿ ಪ್ರತಿಭಟನಾಕಾರರ ಮೇಲೆ ದಾಳಿ ಮಾಡಿದ ನಂತರ ಹಿಂಸಾಚಾರ ತೀವ್ರ ಸ್ವರೂಪಕ್ಕೆ ತಿರುಗಿದೆ. ಕೊಲಂಬೊ ಮತ್ತು ದೇಶದ ಇತರ ಭಾಗಗಳಲ್ಲಿ ನಡೆದ ಹಿಂಸಾಚಾರದಲ್ಲಿ ಸುಮಾರು 250 ಜನರು ಗಾಯಗೊಂಡಿದ್ದಾರೆ.

ಹಿಂಸಾಚಾರ, ಲೂಟಿ ತಡೆಗೆ ಕಂಡಲ್ಲಿ ಗುಂಡು ಆದೇಶ

ಆರ್ಥಿಕ ಬಿಕ್ಕಟ್ಟಿನ ವಿರುದ್ಧ ಬೀದಿಗಿಳಿದಿರುವ ಜನ ಶ್ರೀಲಂಕಾದಲ್ಲಿ ಉಗ್ರ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಮಧ್ಯೆ, ಸಾರ್ವಜನಿಕ ಆಸ್ತಿ ಲೂಟಿ ಮತ್ತು ಹಾನಿ ಉಂಟು ಮಾಡುವವರಿಗೆ ಕಂಡಲ್ಲಿ ಗುಂಡು ಹಾರಿಸಲು ಅಲ್ಲಿನ ರಕ್ಷಣಾ ಸಚಿವಾಲಯ ಆದೇಶಿಸಿದೆ.

ಪ್ರತಿಭಟನಾಕಾರರು ಆಡಳಿತ ಪಕ್ಷದ ರಾಜಕಾರಣಿಗಳ ಮನೆಗಳನ್ನು ಟಾರ್ಗೆಟ್ ಮಾಡಿದ ಬಳಿಕ ಈ ಆದೇಶ ಮಾಡಲಾಗಿದೆ. ಸಾರ್ವಜನಿಕರ ಆಸ್ತಿ ಲೂಟಿ ಮಾಡುವವರು ಮತ್ತು ಜೀವಕ್ಕೆ ತೊಂದರೆ ಮಾಡುವವರ ವಿರುದ್ಧ ಕಂಡಲ್ಲಿ ಗುಂಡಿಕ್ಕಲು ಭದ್ರತಾ ಪಡೆಗಳಿಗೆ ಆದೇಶಿಸಲಾಗಿದೆ ಎಂದು ಸಚಿವಾಲಯ ಹೇಳಿದೆ.

ನಿನ್ನೆ ನಡೆದ ತೀವ್ರ ಹಿಂಸಾಚಾರದ ನಂತರ ರಾಜಧಾನಿ ಕೊಲಂಬೊ ಮತ್ತು ಇತರೆಡೆ ಉದ್ವಿಗ್ನ ಪರಿಸ್ಥಿತಿಯನ್ನು ಹತೋಟಿಗೆ ತರಲು ಸಾವಿರಾರು ಸಂಖ್ಯೆಯ ಭೂಸೇನೆ, ನೌಕಾಪಡೆ ಮತ್ತು ವಾಯುಪಡೆಯ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಸಿಂಗಾಪುರದಲ್ಲಿ ವಿವಾದಾತ್ಮಕ ಚಿತ್ರ 'ದಿ ಕಾಶ್ಮೀರ್ ಫೈಲ್ಸ್' ನಿಷೇಧ

ನವದೆಹಲಿ, ಮೇ 10– 1990ರ ದಶಕದಲ್ಲಿ ಕಾಶ್ಮೀರ ಕಣಿವೆಯಿಂದ ಹಿಂದೂಗಳ ವಲಸೆ ಕುರಿತಾದ ವಿವಾದಾತ್ಮಕ ಚಲನಚಿತ್ರ ಕಾಶ್ಮೀರ್ ಫೈಲ್ಸ್ ಅನ್ನು ಸಿಂಗಾಪುರದಲ್ಲಿ ನಿಷೇಧಿಸಲಾಗಿದೆ. ಈ ಚಿತ್ರವು ವಿವಿಧ ಸಮುದಾಯಗಳ ನಡುವೆ ದ್ವೇಷವನ್ನು ಉಂಟುಮಾಡುವ ಸಂಭಾವ್ಯತೆಯ ಬಗ್ಗೆ ಕಳವಳ ವ್ಯಕ್ತಪಡಿಸಿ ಚಿತ್ರ ನಿಷೇಧ ಮಾಡಲಾಗಿದೆ ಎಂದು ಅಧಿಕೃತವಾಗಿ ಹೇಳಿದೆ. ಚಿತ್ರವು ಸಿಂಗಾಪುರದ ಚಲನಚಿತ್ರ ವರ್ಗೀಕರಣ ಮಾರ್ಗಸೂಚಿಗಳನ್ನು ಮೀರಿದೆ. ಕಾಶ್ಮೀರದಲ್ಲಿ ನಡೆದ ಸಂಘರ್ಷದಲ್ಲಿ ಮುಸ್ಲಿಮರು ಮತ್ತು ಹಿಂದೂಗಳು ಕಿರುಕುಳಕ್ಕೊಳಗಾಗುವ ಚಿತ್ರಣವನ್ನು ಪ್ರಚೋದನಕಾರಿ ಮತ್ತು ಏಕಪಕ್ಷೀಯವಾಗಿ ಚಿತ್ರಿಸಲಾಗಿದೆ ಎಂದು ಸಿಂಗಾಪುರ್ ಸರ್ಕಾರ ಸೋಮವಾರ ಪ್ರಕಟಣೆಯಲ್ಲಿ ತಿಳಿಸಿದೆ. ಚಿತ್ರವು ವಿವಿಧ ಸಮುದಾಯಗಳ ನಡುವೆ ದ್ವೇಷವನ್ನು ಉಂಟುಮಾಡುವ ಸಂಭವವಿದೆ. ನಮ್ಮ ಬಹು–ಜನಾಂಗೀಯ ಮತ್ತು ಬಹು–ಧರ್ಮೀಯ ಸಮಾಜದಲ್ಲಿ ಸಾಮಾಜಿಕ ಒಗ್ಗಟ್ಟು ಮತ್ತು ಧಾರ್ಮಿಕ ಸಾಮರಸ್ಯವನ್ನು ಅಡ್ಡಿಪಡಿಸುವ ಸಾಮರ್ಥ್ಯವನ್ನು ಚಿತ್ರ ಹೊಂದಿದೆ ಎಂದಿದೆ.

ನಕ್ಕರೆ ಅದೇ ಸ್ವರ್ಗ

ವಧುವಿನ ತಂದೆ : "ನನ್ನ ಮಗಳಿಗೆ ಬೆಂಜ್ ಕಾರೇ ಕೊಡಿಸ್ತೀನಿ. ನೀವು ನಿಮ್ಮ ಸೊಸೆಗೆ ಏನು ಕೊಡಿಸ್ತೀರಾ?"

ವರನ ತಂದೆ : "ನಿಮ್ಮ ಮಗಳಿಗೆ ಕಾರಿಗೆ ನನ್ನ ಮಗನನ್ನೇ ಡ್ರೈವರ್ ಆಗಿ ಕೊಟ್ಟು ಬಿಡ್ತೀನಿ!"

ಮೈಸೂರು ಮಿತ್ರ

ಬುಧವಾರ, 11 ಮೇ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಸಹನಶೀಲತೆಯೇ ಸರ್ವೋತ್ತಮವಾದ ಪ್ರವರ್ಧನೆ – ಭಗವಾನ್ ಬುದ್ಧ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಹಣದಲ್ಲಿ ಬಡವನಾದರೂ ಬುದ್ಧಿಯಲ್ಲಿ ಬಡವನಾಗಬಾರದು

ನಿಮ್ಮ ಪತ್ರಗಳು

ಪರೀಕ್ಷಾ ಅಕ್ರಮಗಳಿಗೆ ಅಂತ್ಯವಿಲ್ಲವೇ?

ಮಾನ್ಯರೆ,

ಪಿಎಸ್ಐ ತನಿಖೆಯನ್ನು ಬಗೆದು ಆಳಕ್ಕೆ ಇಳಿದಂತೆ ಪೊಲೀಸ್ ಇಲಾಖೆಯ ಅನೇಕ ಅಧಿಕಾರಿಗಳು, ವಿಷಯ ತಜ್ಞರು, ಕಿಂಗ್ ಪಿನ್‌ಗಳು ಹಾಗೂ ರಾಜಕಾರಣಿಗಳ ಹೆಸರುಗಳು ತಳುಕು ಹಾಕಿಕೊಂಡು ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿರುವುದರಿಂದ ಅಕ್ರಮ ಎಸಗಿದವರಿಗೆ ನಡುಕ ಉಂಟಾಗಿದೆ. ಇನ್ನೊಂದು ಕಡೆ ಪ್ರಾಮಾಣಿಕವಾಗಿ ಪರೀಕ್ಷೆ ಬರೆದು ಯಶಸ್ವಿಯಾಗಿ ಆಯ್ಕೆಯಾಗಿದ್ದ ವಿದ್ಯಾರ್ಥಿಗಳಿಗೆ ಘನಘೋರ ಅನ್ಯಾಯವಾಗಿದೆ. ಕಷ್ಟಪಟ್ಟು ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಹಗಲು–ರಾತ್ರಿಯೆನ್ನದೆ, ಸಾಲಸೋಲ ಮಾಡಿ ರೂಮ್ ಮಾಡಿಕೊಂಡು ಸಿಇಟಿ ಕೋಚಿಂಗ್ ಸೇರಿಕೊಂಡು ಪಿಎಸ್ಐ ಹುದ್ದೆಯನ್ನು ಪಡೆಯಬೇಕು ಎಂಬ ಛಲದಿಂದ ಅನೇಕ ಕನಸುಗಳನ್ನು ಕಟ್ಟಿಕೊಂಡು ಪರೀಕ್ಷೆ ಬರೆದು ಇನ್ನೇನು ಹುದ್ದೆ ದೊರೆಯಬೇಕೆನ್ನುವ ಸಂದರ್ಭದಲ್ಲಿ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂಬಂತೆ ಅಭ್ಯರ್ಥಿಗಳಿಗೆ ಈ ಅಕ್ರಮಗಳನ್ನು ತಿಳಿದು ಆಕಾಶವೇ ತಲೆಮೇಲೆ ಬಿದ್ದಂತೆ ಗೊಂದಲಕ್ಕೀಡಾಗಿದ್ದಾರೆ. ಅವರ ಕಷ್ಟವನ್ನು ಮಾಧ್ಯಮಗಳಲ್ಲಿ ವೀಕ್ಷಿಸುತ್ತಿದ್ದರೆ ಎಂಥವರ ಕರುಳು ಚುರುಕ್ ಎನ್ನುತ್ತದೆ. ಹಿಂದೆ ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳು ಸೋರಿಕೆಯ ಅನೇಕ ಅಕ್ರಮಗಳು ನಡೆದಿವೆ. ಅಂತಹ ಸಂದರ್ಭದಲ್ಲಿ ಸರ್ಕಾರವು ಎಚ್ಚೆತ್ತುಕೊಂಡು ಅದರ ಮೂಲವನ್ನು ಕಂಡು ಹಿಡಿದು ಬುಡ ಸಮೇತ ಕಿತ್ತು ಹಾಕಿ ಆರೋಪಿಗಳಿಗೆ ತಕ್ಕ ಕಠಿಣ ಶಿಕ್ಷೆಯನ್ನು ಕೈಗೊಂಡಿದ್ದರೆ, ಇಂದು ಇಂತಹ ಸ್ಥಿತಿ ಮರುಕಳಿಸುತ್ತಿರಲಿಲ್ಲ. ಸರ್ಕಾರದ ಹುದ್ದೆಗಳು ದುಡ್ಡು ಕೊಟ್ಟರೆ ಬಿಕರಿಯಾಗುತ್ತವೆ ಎನ್ನುವ ಮಾತು ಸಾರ್ವಜನಿಕರಲ್ಲಿ ಮನೆ ಮಾತಾಗಿದೆ. ಈ ರೀತಿಯ ಪರೀಕ್ಷಾ ಅಕ್ರಮಗಳು ಯಾವುದೇ ಸರ್ಕಾರಕ್ಕಾಗಲಿ, ಆಡಳಿತಕ್ಕಾಗಲೀ, ಶೋಭೆ ತರುವಂತದ್ದಲ್ಲ. ಸರ್ಕಾರ ನಡೆಸುತ್ತಿರುವ ಪರೀಕ್ಷೆಗಳು ಸೋರಿಕೆಗೆ ಯಾಕಿಷ್ಟೊಂದು ಪ್ರಸಕ್ತ ತಾಣಗಳಾಗಿವೆ ಎಂಬುದರ ಅಧ್ಯಯನ ಆಗಬೇಕು. ಅವರಿಗೆ ಕಠಿಣ ಶಿಕ್ಷೆ ಮೂಲಕ ಪಾಠ ಕಲಿಸಬೇಕು. ಪಾರದರ್ಶಕವಾಗಿ ಪರೀಕ್ಷೆಗಳು ನಡೆದು ಅರ್ಹ ಅಭ್ಯರ್ಥಿಗಳು ಆಯ್ಕೆಯಾಗಬೇಕು. ಇದೆಲ್ಲದರಲ್ಲಿ ರಾಜಕೀಯ ವ್ಯಕ್ತಿಗಳ ಲಾಬಿ ನಡೆಯದಂತೆ ಕಟ್ಟುನಿಟ್ಟಾಗಿ ಅಂತರವನ್ನು ಕಾಯ್ದುಕೊಂಡರೆ ಅಕ್ರಮಗಳಿಗೆ ಎಡೆ ಇಲ್ಲದಂತಾಗುತ್ತದೆ.

– ಪರಶಿವಮೂರ್ತಿ ಎನ್.ಪಿ, ಸರಗೂರು ತಾ.

ಪಠ್ಯದಲ್ಲಿ "ಭಗವದ್ಗೀತೆ" ತಪ್ಪೇನು?

ಮಾನ್ಯರೆ,

ಮಾಜಿ ಕಾಂಗ್ರೆಸ್ ಸಚಿವ ಹಾಗೂ ನಾಯಕ ಪ್ರೊಫೆಸರ್ ಬಿ.ಕೆ. ಚಂದ್ರಶೇಖರ್ ಅವರು ಪಠ್ಯದಲ್ಲಿ 'ಭಗವದ್ಗೀತೆ'ಯನ್ನು ಸೇರಿಸುವ ಬಗ್ಗೆ ಚರ್ಚೆ ನಡೆಸಲು ಮುಂದೆ ಬರಬೇಕೆಂದು ಇತ್ತೀಚೆಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ ಎಂದು ಪತ್ರಿಕೆಗಳಲ್ಲಿ ಪ್ರಕಟವಾಗಿರುವುದು ಸರಿಯಷ್ಟೆ?

ಅಷ್ಟಕ್ಕೂ ಶಾಲಾ ಪಠ್ಯದಲ್ಲಿ "ಭಗವದ್ಗೀತೆ" ಸೇರಿಸಿ ಮಕ್ಕಳಿಗೆ ಓದಿಸಿದರೆ ತಪ್ಪೇನು? ಮಕ್ಕಳಿಗೆ ಭಗವದ್ಗೀತೆ ಕಲಿಸುವುದು ಬಿಟ್ಟು ಮಕ್ಕಳಿಗೆ ಬೇರೆ ಕಲಿಸಲಾಗುತ್ತದೆಯೇ? ರಾಜಕಾರಣ ಮಾಡಬೇಕು ನಿಜ. ಆದರೆ ಈ ರೀತಿಯ ಕೆಟ್ಟ ಹಾಗೂ ಭ್ರಷ್ಟಾಚಾರದ ರಾಜಕೀಯ ಮಾಡಬಾರದು. ಕೇವಲ ಓಟಿಗಾಗಿ ಅಲ್ಪಸಂಖ್ಯಾತರ ಓಲೈಕೆ ಹಾಗೂ ಬಹುಸಂಖ್ಯಾತ ಹಿಂದೂಗಳ ವಿರೋಧವನ್ನು ಕಟ್ಟಿಕೊಳ್ಳುವುದು ಜಾಣತನವೇ. ಇನ್ನೇನು ಚುನಾವಣೆಗಳು ಹತ್ತಿರ ಬರುತ್ತಿವೆ. ಈ ಸಮಯದಲ್ಲಿ ಹೀಗೆ ಯದ್ವಾತದ್ವಾ ಮಾತನಾಡುವುದು ಸರಿಯೇ ಎಂಬುದನ್ನು ಯೋಚಿಸಲಿ. ಅಲ್ಪಸಂಖ್ಯಾತರ ಓಲೈಕೆ ಇಷ್ಟರಮಟ್ಟಿಗೆ ಇರಬಾರದು. ಸ್ವಲ್ಪವಾದರೂ ತಮ್ಮತನ ಇರಬೇಕು. ಇದು ತಿಳಿದಿರಲಿ.

–ಬೇಲೂರು ದ.ಶಂ.ಪ್ರಕಾಶ್, ಮೈಸೂರು

ಎಲ್‌ಐಸಿ ಖಾಸಗೀಕರಣ ಸಮಂಜಸವಲ್ಲ


ಮಾನ್ಯರೆ,

ದೇಶದ ಅತಿದೊಡ್ಡ ವಿಮಾ ಸಂಸ್ಥೆಯಾದ ಹಾಗೂ ಕೇಂದ್ರ ಸರ್ಕಾರಿ ಸ್ವಾಮ್ಯದ ಭಾರತೀಯ ಜೀವ ವಿಮಾ ನಿಗಮದ ಶೇಕಡಾ 3.5 ಷೇರುಗಳನ್ನು ಪ್ರಾರಂಭಿಕ ಸಾರ್ವಜನಿಕ ಆಹ್ವಾನದ ಮೂಲಕ ಮಾರುವ ಕೇಂದ್ರ ಸರ್ಕಾರದ ನೀತಿಯ ವಿರುದ್ಧ ಜೀವ ವಿಮಾ ನಿಗಮದ ಅಧಿಕಾರಿಗಳು ಹಾಗೂ ನೌಕರರು ದೇಶವ್ಯಾಪಿ ಪ್ರತಿಭಟನೆ ನಡೆಸಿರುವುದು ಮಾಧ್ಯಮಗಳಲ್ಲಿ ಪ್ರಕಟವಾಗಿದೆ. 1956ರಲ್ಲಿ ಜೀವ ವಿಮಾ ನಿಗಮ ಕಾಯ್ದೆಯಡಿ ಅಸ್ತಿತ್ವಕ್ಕೆ ಬಂದ ಎಲ್‌ಐಸಿ ತನ್ನ ಜನಪ್ರಿಯ ವಿಮಾ ಯೋಜನೆಗಳ ಮೂಲಕ ದೇಶದ ನಂಬರ್ 1 ವಿಮಾ ಸಂಸ್ಥೆಯಾಗಿ ರೂಪುಗೊಂಡಿರುವುದು ರೋಚಕದ ಸಂಗತಿ. ಭದ್ರತೆ ಹಾಗೂ ಸುರಕ್ಷತೆಯ ದೃಷ್ಟಿಯಿಂದ ದೇಶದ ಜನತೆ ಬೇರೆ ಕಂಪನಿಗಳಿಗಿಂತ ಹೆಚ್ಚಾಗಿ ಎಲ್‌ಐಸಿಯನ್ನೇ ಆಯ್ಕೆ ಮಾಡುತ್ತಾರೆ. ಸರ್ಕಾರಿ ನೌಕರರಿಗಂತೂ ಎಲ್‌ಐಸಿ ಹೇಳಿ ಮಾಡಿಸಿದಂತಹ ಜೀವ ವಿಮಾ ನಿಗಮ ಎನ್ನಬಹುದು. 90ರ ದಶಕದವರೆಗೂ ದೇಶದ ವಿಮಾ ಕ್ಷೇತ್ರದಲ್ಲಿ ಎಲ್‌ಐಸಿಯದೇ ಮೇಲುಗೈಯಾಗಿತ್ತು. ನಂತರದ ವರ್ಷಗಳಲ್ಲಿ ವಿಮಾ ಕ್ಷೇತ್ರವನ್ನು ಖಾಸಗಿಯವರಿಗೆ ತೆರೆದಾಗ ನೂರಾರು ಖಾಸಗೀ ಕಂಪನಿಗಳು ಹುಟ್ಟಿಕೊಂಡವು. ಬಿರ್ಲಾ ಇನ್ಸುರೆನ್ಸ್, ರಿಲಯನ್ಸ್, ಐಸಿಐಸಿಐ, ಹೆಚ್‌ಡಿಎಫ್‌ಸಿ, ಬಜಾಜ್ ಅಲೈಯನ್ಸ್, ಕೊಟಕ್ ಇನ್ಸುರೆನ್ಸ್ ಮುಂತಾದ ಖಾಸಗಿ ಕಂಪನಿಗಳು ತಲೆಯೆತ್ತಿದವು. ಭಾರತೀಯ ಸ್ಟೇಟ್ಸ್ ಬ್ಯಾಂಕ್ ಸ್ವಾಮಿತ್ವಕ್ಕೆ ಒಳಪಟ್ಟ ಎಸ್‌ಬಿಐ ಲೈಫ್ ಇನ್ಶೂರೆನ್ಸ್ ಕಂಪನಿ ಸಹ ಇಂದು ದೇಶದ ಪ್ರತಿಷ್ಠಿತ ವಿಮಾ ಸಂಸ್ಥೆಯಾಗಿ ಬೆಳೆದು, ಹಲವಾರು ಪ್ರಶಸ್ತಿಗಳನ್ನು ಗಳಿಸಿ, ಹೂಡಿಕೆದಾರರ ವಿಶ್ವಾಸಕ್ಕೆ ಪಾತ್ರವಾಗಿದೆ.

ಇಂದು ದೇಶದಲ್ಲಿ ಕಾಸಿಗೆ ಒಂದು ಕೊಸರಿಗೆ ಒಂದು ಅನ್ನುವ ರೀತಿಯಲ್ಲಿ ಖಾಸಗೀ ವಿಮಾ ಕಂಪನಿಗಳು ಸ್ಥಾಪನೆಗೊಂಡಿದ್ದರೂ, ಎಲ್‌ಐಸಿ, ತನ್ನ ಪ್ರಾಮಾಣಿಕ ಸೇವೆಯಿಂದ ಪಾಲಿಸಿದಾರರ ವಿಶ್ವಾಸಾರ್ಹತೆ ಉಳಿಸಿಕೊಂಡು ಬಂದಿದೆ. ಕೇಂದ್ರ ಸರ್ಕಾರದ ಮೂಲಗಳ ಪ್ರಕಾರ, ಎಲ್‌ಐಸಿಯ ಮಾರುಕಟ್ಟೆ ಮೌಲ್ಯ 6 ಲಕ್ಷ ಕೋಟಿ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಇದರ ಪೈಕಿ ಶೇಕಡ 3.5 ರಷ್ಟು ಷೇರುಗಳನ್ನು ಮಾರುವ ಮೂಲಕ 21,000 ಕೋಟಿ ರೂಪಾಯಿಗಳನ್ನು ಸಂಗ್ರಹಿಸುವ ಗುರಿ ಹೊಂದಿದ್ದು ಇದು ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯನ್ನು ಸರಿತೂಗಿಸಲು ಬಳಸಿಕೊಳ್ಳಲಾಗುವುದು ಎಂದು ಸರ್ಕಾರಿ ಮೂಲಗಳು ತಿಳಿಸಿವೆ. ಕೇವಲ ಶೇಕಡಾ 3.5 ಷೇರುಗಳನ್ನು ಮಾರುವ ಮೂಲಕ, ಎಲ್‌ಐಸಿ ತನ್ನ ಸರ್ಕಾರಿ ಸ್ವಾಮಿತ್ವವನ್ನು ಕಳೆದುಕೊಳ್ಳುವುದಿಲ್ಲ. ಅದು ಸರ್ಕಾರಿ ನಿಗಮವಾಗಿಯೇ ಉಳಿಯಲಿದೆ. ಇದರ ಬಗ್ಗೆ ನಿಗಮದ ನೌಕರರು, ಪಾಲಿಸಿದಾರರು ಮತ್ತು ಇತರ ಹಿತಾಸಕ್ತಿಗಳು ಆತಂಕ ಪಡುವ ಕಾರಣವಿಲ್ಲ. ಆದರೆ ಮುಂಬರುವ ವರ್ಷಗಳಲ್ಲಿ, ಇದು ಸಂಪೂರ್ಣ ಖಾಸಗೀಕರಣಕ್ಕೆ ಎಡೆಮಾಡಿಕೊಡುವುದೇ ಎಂಬುದು ಚರ್ಚಾರ್ಹ ವಿಚಾರ. ಅದೇನೇ ಇರಲಿ, ಕೇಂದ್ರ ಸರ್ಕಾರ ಈ ಪ್ರತಿಷ್ಠಿತ ಸಂಸ್ಥೆಯನ್ನು ಮತ್ತಷ್ಟು ಸದೃಢವಾಗಿಸುವಂತಹ ಕ್ರಮಗಳನ್ನು ಕೈಗೊಂಡು, ಇದನ್ನು ಜಾಗತಿಕ ಮಟ್ಟದ ಬೃಹತ್ ವಿಮಾ ಸಂಸ್ಥೆಯಾಗಿ ರೂಪಿಸುವ ಬಗ್ಗೆ ಚಿಂತಿಸಲಿ.

–ಡಾ.ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ವಿಷ್ಣು ಸಹಸ್ರನಾಮ ಸ್ತೋತ್ರ ಅರ್ಥಾನುಸಂಧಾನ

ರಾಮಾಯಣ, ಮಹಾಭಾರತ ಎಂಬ ಎರಡು ಇತಿಹಾಸಗಳು ನಮ್ಮ ದೇಶದ ಸಂಸ್ಕೃತಿ ಸೌಧದ ಎರಡು ಆಧಾರ ಸ್ತಂಭಗಳು. ಮಹಾಭಾರತ ಜ್ಞಾನದ ಸಾಗರ. ಅದರಲ್ಲಿ ಎಷ್ಟೋ ರತ್ನಗಳು ಅಡಗಿವೆ. ಅತ್ಯಂತ ದೇದೀಪ್ಯಮಾನ ರತ್ನಗಳೆಂದರೆ ಭಗವದ್ಗೀತೆ ಮತ್ತು ವಿಷ್ಣು ಸಹಸ್ರನಾಮ ಸ್ತೋತ್ರ. ಮೊದಲನೆಯದು ಭೀಷ್ಮ ಪರ್ವದಲ್ಲೂ ಎರಡನೆಯದು ಅನುಶಾಸನ ಪರ್ವದಲ್ಲೂ ಲಭ್ಯಮಾನವಾಗಿವೆ. ಇವುಗಳನ್ನು ಪಠಿಸಿದರೆ ಪುಣ್ಯ. ಆದರೆ ಅರ್ಥಾನುಸಂಧಾನವನ್ನು ಮಾಡಿಕೊಂಡು ಓದಿದರೆ ಅಧಿಕ ಫಲ.

ಯದಧೀತಮವಿಜ್ಞಾತಂ ನಿಗದೇನೈವ ಶಬ್ದ್ಯತೇ।
ಅನಗ್ನಾವಿವ ಶುಷ್ಕೋಧೋ ನ ತಜ್ಜ್ವಲತಿ ಕರ್ಹಿಚಿತ್ ॥

ಎಷ್ಟು ವೇದಗಳನ್ನು ಕಂಠಪಾಠ ಮಾಡಿ ಪಠಿಸಿದರೂ ಅದರ ಅರ್ಥವನ್ನು ಅರಿತುಕೊಳ್ಳದಿದ್ದರೆ ಅದರಲ್ಲಿರುವ ಜ್ಞಾನ ಪ್ರಕಾಶಕ್ಕೆ ಬರುವುದಿಲ್ಲ. ಎಣ್ಣೆಯಿದೆ, ಬತ್ತಿಯಿದೆ, ಜ್ಯೋತಿಯ ಸ್ಪರ್ಶವಿಲ್ಲದಿದ್ದರೆ ಹಣತೆಯಿಂದ ಪ್ರಯೋಜನವೇನು? ವಿಷ್ಣುವಿನ ಸಾವಿರ ನಾಮಗಳು ಪರಮಾತ್ಮನ ನಾನಾ ಶಕ್ತಿಗಳ ದ್ಯೋತಕಗಳು. ಅಲ್ಲಿರುವ ಒಂದೊಂದು ಹೆಸರಿನ ಗೂಢಾರ್ಥಗಳನ್ನು ಆಲೋಚಿಸುತ್ತಾ ಹೋದರೆ ಹೊಸ ಪ್ರಪಂಚವೇ ತೆರೆದುಕೊಳ್ಳುತ್ತದೆ. ಇದನ್ನು ಜಗತ್ತಿಗೆ ತಿಳಿಸುವುದಕ್ಕಾಗಿ ಆದಿಶಂಕರಾಚಾರ್ಯರು, ಪರಾಶರ ಭಟ್ಟರು ಇತ್ಯಾದಿ ಅನೇಕ ಮಹಾನುಭಾವರು ಭಾಷ್ಯಗಳನ್ನು ಬರೆದು ಭಕ್ತ ಜನರಿಗೆ ಲೋಕೋಪಕಾರವನ್ನು ಮಾಡಿದ್ದಾರೆ. ಜಿಜ್ಞಾಸುಗಳು ಆ ಭಾಷ್ಯಗಳನ್ನು ಓದಬಹುದು.

ಅನುಶಾಸನ ಪರ್ವದಲ್ಲಿ ಯುಧಿಷ್ಠಿರನು ಪಿತಾಮಹ ಭೀಷ್ಮನಿಂದ ಧರ್ಮ ರಹಸ್ಯಗಳನ್ನೆಲ್ಲಾ ತಿಳಿದುಕೊಳ್ಳುತ್ತಾನೆ. ಅನಂತರ ಇಷ್ಟು ಧರ್ಮಗಳಲ್ಲಿ ಸಾರವಾದದ್ದು ಯಾವುದು ಎಂದು ತಿಳಿದುಕೊಳ್ಳಲು ಅವನು ಮಾಡುವ ಪ್ರಶ್ನೆ ಹೀಗಿದೆ –

ಕಿಮೇಕಂ ದೈವತಂ ಲೋಕೇ ಕಿಂ ವಾಪ್ಯೇಕಂ ಪರಾಯಣಮ್ ।
ಸ್ತುವಂತಃ ಕಂ ಕಮರ್ಚಂತಃ ಪ್ರಾಪ್ನುಯುರ್ಮಾನವಾಃ ಶುಭಮ್ ॥
ಕೋ ಧರ್ಮಃ ಸರ್ವ ಧರ್ಮಾಣಾಂ ಭವತಃ ಪರಮೋ ಮತಃ ।
ಕಿಂ ಜಪನ್ ಮುಚ್ಯತೇ ಜಂತುರ್ಜನ್ಮ ಸಂಸಾರ ಬಂಧನಾತ್॥

ಈ ಜಗತ್ತಿನಲ್ಲಿ ಪೂಜಾರ್ಹವಾದ ಒಂದು ದೇವತೆ ಎಂದರೆ ಯಾರು? ಅತ್ಯಂತ ಶ್ರೇಷ್ಠ ತತ್ತ್ವ ಯಾವುದು? ಯಾರ ಸ್ತೋತ್ರವನ್ನೂ, ಅರ್ಚನೆಯನ್ನೂ ಮಾಡಿ ಮಾನವರು ಶುಭವನ್ನು ಪಡೆಯಬಹುದು? ಧರ್ಮಗಳಲ್ಲೂ ಯಾವುದು ಸರ್ವಾಧಿಕವಾದುದು? ಯಾವ ಮಂತ್ರವನ್ನು ಜಪಿಸಿದರೆ ಮನುಷ್ಯನು ಜನ್ಮ–ಮರಣ ಚಕ್ರದಿಂದ ಬಿಡುಗಡೆಯನ್ನು ಪಡೆಯಬಹುದು? ಎಂಬುದು ಯುಧಿಷ್ಠಿರನ ಪ್ರಶ್ನೆಯ ತಾತ್ಪರ್ಯ.

ಆ ಪ್ರಶ್ನೆಗೆ ಉತ್ತರವಾಗಿ ಭೀಷ್ಮನು 'ಅಂತಹ ದೇವತೆ ಎಂದರೆ ವಿಷ್ಣು, ಅವನೇ ಪರಮ ತತ್ತ್ವ, ಅವನನ್ನು ಸ್ತುತಿಸಿ ಅರ್ಚಿಸಿ ಮಾನವನು ಸಕಲ ಶುಭವನ್ನೂ ಪಡೆಯಬಹುದು. ಧರ್ಮಗಳಲ್ಲಿ ಸರ್ವಾಧಿಕವಾದುದು ಭಗವನ್ನಾಮ ಸ್ಮರಣೆ. ಸರ್ವೋತ್ತಮನಾದ ವಿಷ್ಣುವಿನ ಸಹಸ್ರ ನಾಮಗಳನ್ನು ನಿಮಗೆ ತಿಳಿಸುತ್ತೇನೆ. ಅವುಗಳನ್ನು ಪಠಿಸಿ ಅರ್ಥಾನುಸಂಧಾನ ಮಾಡಿಕೊಂಡು ಕೃತಾರ್ಥನಾಗು' ಎಂದು ಹೇಳಿ ಸಹಸ್ರನಾಮ ಸ್ತೋತ್ರವನ್ನು ಅನುಗ್ರಹಿಸುತ್ತಾನೆ. ಈ ಸಾವಿರ ಹೆಸರುಗಳು ಭೀಷ್ಮನು ಕಲ್ಪಿಸಿ ಹೇಳಿದ್ದಲ್ಲ.

ಯಾನಿ ನಾಮಾನಿ ಗೌಣಾನಿ ವಿಖ್ಯಾತಾನಿ ಮಹಾತ್ಮನಃ ।
ಋಷಿಭಿಃ ಪರಿಗೀತಾನಿ ತಾನಿ ವಕ್ಷ್ಯಾಮಿ ಭೂತಯೇ ॥

ಎಂದು ಭೀಷ್ಮನೇ ಹೇಳಿದ್ದಾನೆ. ಈ ನಾಮ ಸಹಸ್ರವನ್ನು ಹಿಂದೆ ಋಷಿಗಳೇ ಹಾಡಿದ್ದರು. ಲೋಕದಲ್ಲಿ ಅವು ಪ್ರಖ್ಯಾತವಾಗಿ ರೂಢಿಯಲ್ಲಿದ್ದುವು. ಯುಧಿಷ್ಠಿರನ ಮತ್ತು ಸಮಸ್ತ ಭಕ್ತರ ಶ್ರೇಯಸ್ಸಿಗಾಗಿ ಭೀಷ್ಮನು ಹೇಳಿದನೆಂದು ತಿಳಿದುಕೊಳ್ಳಬೇಕು.

ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನ ತತ್ತ್ವಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸಿ ವಿಶ್ರಾಂತರಾಗಿರುವ ಪ್ರೊ. ವೈ.ಎಸ್.ಗೌರಮ್ಮನವರು **ವಿಷ್ಣು ಸಹಸ್ರನಾಮಃ ಅರ್ಥಾನುಸಂಧಾನ** ಎಂಬ ಗ್ರಂಥವನ್ನು ಬರೆದು ಈ ಸ್ತೋತ್ರದ ಅಂತರಂಗವನ್ನು ತಮ್ಮ ವಾಕ್ ತರಂಗಗಳಿಂದ ಜನರಿಗೆ ತಲುಪಿಸಿದ್ದಾರೆ. ಈ ಪುಸ್ತಕದ ಅಧ್ಯಯನವನ್ನು ಮಾಡಿದರೆ ಸ್ತೋತ್ರ ಪಠಣದ ಕಾಲದಲ್ಲಿ ಒಂದೊಂದು ನಾಮದ ಅರ್ಥವೂ ಮನದಲ್ಲಿ ಹೊಳೆದು ದಿವ್ಯಾನುಭವವನ್ನು ನೀಡುತ್ತದೆ.

ವಿಶ್ವಂ ವಿಷ್ಣುರ್ವಷಟ್ಕಾರೋ ಭೂತಭವ್ಯ ಭವತ್ಪ್ರಭುಃ ।
ಭೂತಕೃದ್ ಭೂತಭೃದ್ ಭಾವೋ ಭೂತಾತ್ಮಾ ಭೂತಭಾವನಃ ॥

ಎಂಬ ಮೊದಲನೆಯ ಶ್ಲೋಕದಲ್ಲಿರುವ ಒಂಬತ್ತು ನಾಮಗಳ ಅರ್ಥವನ್ನು ಕುರಿತು ಯೋಚನೆ ಮಾಡಿದರೆ ಸಾಕು, ಅಧ್ಯಾತ್ಮ ಶಾಸ್ತ್ರದ ರಹಸ್ಯಗಳೆಲ್ಲವೂ ತೆರೆದುಕೊಳ್ಳುತ್ತವೆ. ತತ್ತ್ವಶಾಸ್ತ್ರದ ಆಳವಾದ ಅಧ್ಯಯನ, ಪಾಶ್ಚಾತ್ಯ ದಾರ್ಶನಿಕರ ಚಿಂತನೆಗಳ ಅರಿವು, ಮೂವತ್ತಾರು ವರ್ಷಗಳ ಬೋಧನೆಯ ಅನುಭವ – ಇವೆಲ್ಲ ಮುಪ್ಪುರಿಗೊಂಡು ಗೌರಮ್ಮನವರ ವಿವರಣೆಗಳು ರೂಪ ತಾಳಿವೆ. ಇವು ನಮ್ಮ ಚಿಂತನೆಗಳಿಗೆ ವಿಸ್ತಾರವನ್ನು ತಂದು ಹೊಸ ಅರ್ಥಗಳ ಹೊಳಹುಗಳಿಗೆ ಅವಕಾಶವನ್ನೂ ನೀಡುತ್ತವೆ. ಮೊದಲನೆಯ ನಾಮ **'ವಿಶ್ವಂ'** ಇದಕ್ಕೆ ಪ್ರೊ. ಗೌರಮ್ಮನವರು ಕೊಟ್ಟಿರುವ ವಿವರಣೆ –

"ವಿಷ್ಣು ಸಹಸ್ರನಾಮವು **ವಿಶ್ವಂ** ಎಂಬ ಶಬ್ದದಿಂದ ಪ್ರಾರಂಭವಾದರೂ ಅದೂ ಸಹ ವಿಷ್ಣುವಿಗೇ ಸಂಬಂಧಿಸಿದುದಾಗಿರುತ್ತದೆ. ವೈಶಿಷ್ಟ್ಯಪೂರ್ಣವಾದ ಮತ್ತು ಸಮಗ್ರವಾದ ಭಗವಂತನ ಸ್ವರೂಪವನ್ನು ತಿಳಿಸುವಂತಹ ಈ ಪದವು ಜಗತ್ತನ್ನು ತೋರಿಸುವವನೂ ಮತ್ತು ಜಗತ್ತಾಗಿ ಕಾಣುವವನೂ ಅವನೇ ಆಗಿದ್ದು, ಅವನನ್ನು ವಿಶ್ವ ತತ್ತ್ವನೆಂದು ಹೇಳಲಾಗುತ್ತದೆ. ಅಂದರೆ ಅವನು ಸರ್ವತ್ರ ವ್ಯಾಪಕನಾಗಿ ವಿಶ್ವಾಯಕನಾಗಿದ್ದು, ವಿಶ್ವದ ಅನುಭವ ಮೂಡಿಸುತ್ತಿರುವವನಾಗಿದ್ದಾನೆ. (ಪು.42)

ಇದು ಸರಿ. ಇದರ ಮೇಲೆ ಇನ್ನೊಂದು ಅರ್ಥ. **ವಿಶೇಷೇಣ ಶ್ವಯತಿ ವರ್ಧತೇ ಇತಿ ವಿಶ್ವಮ್** ಎಂಬ ವ್ಯುತ್ಪತ್ತಿಯನ್ನು ಆಶ್ರಯಿಸಿದರೆ ಸತತವಾಗಿ ವೃದ್ಧಿಯನ್ನು ಹೊಂದುತ್ತಿರುವುದು ವಿಶ್ವ ಎಂಬ ಅರ್ಥ ನಿಷ್ಪನ್ನವಾಗುತ್ತದೆ. ನಾವು ಕಾಣುತ್ತಿರುವ ಸಹಸ್ರ ಲಕ್ಷ ಕೋಟಿ ತಾರಾಮಂಜಗಳಿಂದ ಕೂಡಿದ ವಿಶ್ವ ಎರಡು ಕ್ಷಣವೂ ಒಂದೇ ಪರಿಮಿತಿಯಲ್ಲಿರುವುದಿಲ್ಲ ಎಂದು ಖಗೋಳಶಾಸ್ತ್ರಜ್ಞರು ಹೇಳುತ್ತಾರೆ. ಇದನ್ನೇ ಭಗವದ್ಗೀತೆ ವಿಶ್ವ ರೂಪ ದರ್ಶನದಲ್ಲಿ ಕಾಣಿಸಿರುವುದು. ಅನಂತವಾದ ವಿಶ್ವವೆಲ್ಲ ವಿಷ್ಣುವೇ ಎಂಬ ತತ್ತ್ವವನ್ನು ಇಲ್ಲಿ ಹೇಳಿದ್ದಾರೆಂದು ಅರ್ಥ ಮಾಡಿಕೊಳ್ಳಬೇಕು.

ಅಪ್ರಮೇಯಃ ಎಂಬ ಪದಕ್ಕೆ ಡಾ. ಗೌರಮ್ಮನವರು ಕೊಟ್ಟಿರುವ ವಿವರಣೆಯೂ ಅವರ ಗಂಭೀರ ಚಿಂತನೆಗೆ ದ್ಯೋತಕವಾಗಿದೆ.

"ಸರ್ವಜ್ಞನಾದ ಭಗವಂತನು ಎಲ್ಲವನ್ನೂ ಬಲ್ಲವನಾದುದರಿಂದ ಅವನು ತಿಳಿಯಬೇಕಾದ ವಿಚಾರವೇ ಇಲ್ಲ. ಆದ್ದರಿಂದಲೇ ಪ್ರಮಿತಃ **'ಸರ್ವಜ್ಞತ್ವೇನ ನ ವಿದ್ಯತೇ ಪ್ರಮೇಯಂ ಯಸ್ಯ ಸಃ ಅಪ್ರಮೇಯಃ'** ಎಂದಿರುವುದು. ಸರಳವಾಗಿ ಹೇಳುವುದಾದರೆ ಎಣಿಕೆಗೆ ಸಿಗದ, ರೂಪ ಗುಣಾದಿಗಳಿಲ್ಲದವನಾದ್ದರಿಂದ ಅವನು ಅಪ್ರಮೇಯನು. **ಪ್ರಮಾತುಂ ಜ್ಞಾತುಂ ಯೋಗ್ಯಂ ಪ್ರಮೇಯಂ** ಎನ್ನುವುದಾದರೆ ಅದಕ್ಕೆ ಮೊದಲು 'ಅ' ಅಕ್ಷರದ ಸಂಯೋಜನವು ಪ್ರಮೇಯಕ್ಕೆ ಸೇರಿದಾಗ ಅಪ್ರಮೇಯಮ್' ಎಂದಾಗುತ್ತದೆ. ಅಪ್ರಮೇಯ ನೆಂದರೆ ಮತ್ತೊಂದು ದೃಷ್ಟಿಯಲ್ಲಿ ಪೂರ್ಣನೆಂದರ್ಥವಾಗುತ್ತದೆ. ಅಪ್ರಮೇಯನೆಂಬ ಪದದಲ್ಲಿ ಅ ಪ್ರ ಮೇ ಯ ಎಂಬ ನಾಲ್ಕು ಅಕ್ಷರಗಳಿವೆ.

ಅಂದರೆ, ಪೂರ್ಣತ್ವಾದ ಅ: – ಪ್ರಮೇಯಕ್ಕೆ ಒಳಪಟ್ಟವನಲ್ಲವೆಂದೂ;
ಪ್ರಕೃಷ್ಟತ್ವಾತ ಪ್ರ : – ಪ್ರಕೃಷ್ಟನೆಂದೂ,
ಜ್ಞಾನವತ್ವಾತ್ ಮ: – ಜ್ಞಾನ ಸ್ವರೂಪಿ ಎಂದೂ
ಅಶ್ನಾಸೌ ಪ್ರಶ್ನಾಸೌ ಮಶ್ಚ ಅಪ್ರಮಃ
ಅಪ್ರಮ ಇತಿ ಈಯಃ ಜ್ಞೇಯಃ
(ಹೀಗೆ) ಅಪ್ರಮೇಯನೆಂದು ಹೇಳಲಾಗುತ್ತದೆ'

ಸಾಕ್ರೆಟೀಸ್‌ನಿಂದ ಹೆಗಲ್‌ವರೆಗೆ ಎಂಬ ಪುಸ್ತಕದಲ್ಲಿ ಪಾಶ್ಚಾತ್ಯ ದಾರ್ಶನಿಕರ ದರ್ಶನವನ್ನು ಓದುಗರಿಗೆ ಮಾಡಿಸಿರುವ ಪ್ರೊ. ವೈ.ಎಸ್. ಗೌರಮ್ಮನವರು ಭಾರತ ಸಂಸ್ಕೃತಿಯ ತಿರುಳನ್ನು ಗೀತಾ ಜ್ಞಾನ ಸುಧೆ ಮುಂತಾದ ಗ್ರಂಥಗಳಲ್ಲಿ ಉಣಬಡಿಸಿದ್ದಾರೆ. – ವಿಷ್ಣು ಸಹಸ್ರನಾಮ ಸ್ತೋತ್ರದ ಅನುಸಂಧಾನದಲ್ಲಿ ಅವರು ನಮಗೆ ಕೊಟ್ಟಿರುವ ಅರಿವಿನ ಸಾಮಗ್ರಿ ವಿಪುಲವೂ ವಿಶಾಲವೂ ಆಗಿದೆ. ಭಕ್ತಿ ಮಾರ್ಗದಲ್ಲಿ ಆಸಕ್ತರಾದವರಿಗೆ ಇದು ಉಪಕಾರಕ. ಕೆಲವು ಶಬ್ದದೋಷಗಳು ಈ ಪುಸ್ತಕದಲ್ಲಿ ನುಸುಳಿರುವುದು ವಿಷಾದಕರ. ಪುಟ 43ರಲ್ಲಿ **ವಿಶಂತಿ** ಎಂಬುದು **ವಿಂಶತಿ** ಎಂದು ಮುದ್ರಿತವಾಗಿದೆ. ಈ ಎರಡು ಪದಗಳ ಅರ್ಥ ಭಿನ್ನ. ಶ್ರುತಿ ಎಂದರೆ ವೇದ. ಅದನ್ನು ತಪ್ಪಾಗಿ ಶೃತಿ ಎಂದು ಮುದ್ರಿಸಲಾಗಿದೆ. ಇಂತಹ ತಪ್ಪುಗಳನ್ನು ಮುಂದಿನ ಮುದ್ರಣದಲ್ಲಿ ಸರಿಪಡಿಸಬೇಕು.

ಒಳ್ಳೆಯ ವಿಷಯವನ್ನು ಸುಂದರವಾಗಿ ಹೇಳಿರುವ ಪ್ರೊ. ಗೌರಮ್ಮನವರಿಗೆ ಅಭಿನಂದನೆಗಳು.

ಪತಿ ಅತ್ಯಾಚಾರವೆಸಗಿದರೂ ವಿನಾಯ್ತಿ ಇಲ್ಲ: ಸುಪ್ರೀಂ

ಬೆಂಗಳೂರು, ಮೇ 10– ವಿವಾಹವೆನ್ನುವುದು ಪತಿಗೆ ಪತ್ನಿಯ ಮೇಲೆ ಬಲವಂತದ ಅತ್ಯಾಚಾರವೆಸಗಲು ಲೈಸೆನ್ಸ್ ಅಲ್ಲ, ಹೆಂಡತಿ ಮೇಲೆ ರೇಪ್ ಮಾಡುವ ಗಂಡನಿಗೆ ಯಾವುದೇ ವಿನಾಯ್ತಿ ಇರಬಾರದು ಎಂದು ಕರ್ನಾಟಕ ಹೈಕೋರ್ಟ್‌ನ ಮಹತ್ವದ ಆದೇಶಕ್ಕೆ ತಡೆ ನೀಡಲು ಸುಪ್ರೀಂಕೋರ್ಟ್ ನಿರಾಕರಿಸಿದೆ.

ಪತ್ನಿ ತನ್ನ ವಿರುದ್ಧ ಹೂಡಿರುವ ಅತ್ಯಾಚಾರ ಪ್ರಕರಣ ರದ್ದು ಮಾಡಬೇಕೆಂದು ಕೋರಿ ಪತಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಪತಿ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಮಂಗಳವಾರ ಸುಪ್ರೀಂಕೋರ್ಟ್ ನ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಮತ್ತು ನ್ಯಾಯಮೂರ್ತಿಗಳಾದ ಜೆ.ಕೆ.ಮಹೇಶ್ವರಿ ಮತ್ತು ಹೇಮಾ ಕೊಹ್ಲಿ ಅವರಿದ್ದ ನ್ಯಾಯಪೀಠದ ಮುಂದೆ ವಿಚಾರಣೆಗೆ ಬಂದಿತು.

ಆಗ ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ನ್ಯಾಯವಾದಿ ಸಿದ್ಧಾರ್ಥ ದವೆ, ಇದೇ 29ರಂದು ವಿಚಾರಣಾ ನ್ಯಾಯಾಲಯದಲ್ಲಿ ವಿಚಾರಣೆ ಆರಂಭವಾಗಲಿದೆ. ಹಾಗಾಗಿ ತಡೆ ನೀಡಬೇಕು ಎಂದು ಕೋರಿದರು. ಆದರೆ ತಡೆ ನೀಡಲು ನಿರಾಕರಿಸಿದ ನ್ಯಾಯಪೀಠ, ಪತ್ನಿ ಪರ ವಕೀಲರಿಗೆ ನೋಟಿಸ್ ಜಾರಿಗೊಳಿಸಲಾಗುವುದು, ಈಗಾಗಲೇ ಕೇವಿಯಟ್ ಸಲ್ಲಿಕೆಯಾಗಿದೆ. ವಿಷಯದ ಬಗ್ಗೆ ವಿವರವಾದ ವಿಚಾರಣೆ ಅಗತ್ಯವಿದೆ ಎಂದರು. ಪತ್ನಿ ಪರ ಹಿರಿಯ ನ್ಯಾಯವಾದಿ ಇಂದಿರಾ ಜೈ ಸಿಂಗ್ ವಾದ ಮಂಡಿಸಿ, ಅಧೀನ ನ್ಯಾಯಾಲಯದಲ್ಲಿ 5 ವರ್ಷದಿಂದ ವಿಚಾರಣೆ ನನೆಗುದಿಗೆ ಬಿದ್ದಿದೆ, ವಿಚಾರಣೆ ಆರಂಭಕ್ಕಾಗಿ ದೀರ್ಘಕಾಲದಿಂದ ಪತ್ನಿ ಕಾಯುತ್ತಿದ್ದಾರೆ ಎಂದರು. ನ್ಯಾಯಪೀಠ ನೋಟಿಸ್ ಜಾರಿಗೊಳಿಸಿ ವಿಚಾರಣೆಯನ್ನು ಜುಲೈ ಮೂರನೇ ವಾರಕ್ಕೆ ಮುಂದೂಡಿತು.

ಹೈಕೋರ್ಟ್ ಆದೇಶವೇನು: ಪತ್ನಿ ತನ್ನ ವಿರುದ್ಧ ದಾಖಲಿಸಿರುವ ಅತ್ಯಾಚಾರ ಪ್ರಕರಣವನ್ನು ರದ್ದುಗೊಳಿಸುವಂತೆ ಕೋರಿ ಬೆಂಗಳೂರಿನ ಅಭಿಷೇಕ್ ಎಂಬುವರು ಸಲ್ಲಿಸಿರುವ ಅರ್ಜಿಯನ್ನು ಆಲಿಸಿದ ನ್ಯಾ. ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯಪೀಠ, ಅತ್ಯಾಚಾರ ಆರೋಪದಲ್ಲಿ ಪತಿಯೇ ಇದ್ದರೂ ಅವರಿಗೆ ವಿನಾಯ್ತಿ ನೀಡಬಾರದು, ಆ ಬಗ್ಗೆ ಶಾಸಕಾಂಗ ಚಿಂತನೆ ನಡೆಸಬೇಕಾಗುತ್ತದೆ ಎಂದು ಆದೇಶಿಸಿತ್ತು. ಗಂಡನ ವಿರುದ್ಧವೇ ಹೆಂಡತಿ ಅತ್ಯಾಚಾರ ಕೇಸ್ ದಾಖಲಿಸಿದ್ದಾರೆ. ಹಾಗಾಗಿ ಪತಿಗೆ ವಿನಾಯಿತಿ ಇದ್ದರೂ ಆತನ ವಿರುದ್ಧದ ಅತ್ಯಾಚಾರ ಆರೋಪ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ. ಪತಿಯ ಅರ್ಜಿ ವಜಾಗೊಳಿಸಿದ ಹೈಕೋರ್ಟ್, ಪತಿಯ ವಿರುದ್ಧವೂ ಅತ್ಯಾಚಾರ ಕೇಸ್ ಪರಿಗಣಿಸಬೇಕು. ಪತಿಯ ಕೃತ್ಯದಿಂದ ಪತ್ನಿಯ ಮೇಲೆ ಮಾನಸಿಕ, ದೈಹಿಕವಾಗಿ ಪರಿಣಾಮ ಬೀರುತ್ತದೆ ಎಂದು ಅಭಿಪ್ರಾಯಪಟ್ಟಿದೆ.

ಲಂಚ ಪಡೆಯುವಾಗ ಪಾಲಿಕೆ ಜೆಇ ಗುರುಸಿದ್ದಯ್ಯ ಎಸಿಬಿ ಬಲೆಗೆ

ಮೈಸೂರು, ಮೇ 10(ಎಸ್‌ಬಿಡಿ)– ಮೈಸೂರು ನಗರ ಪಾಲಿಕೆ ಅಧಿಕಾರಿಯೊಬ್ಬರು ಲಂಚ ಪಡೆಯುವಾಗ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ) ಪೊಲೀಸರ ಬಲೆಗೆ ಬಿದ್ದಿದ್ದಾರೆ.

ನಗರ ಪಾಲಿಕೆ ವಲಯ ಕಚೇರಿ–4ರ ಜೂನಿಯರ್ ಇಂಜಿನಿಯರ್(ಜೆಇ) ಗುರುಸಿದ್ದಯ್ಯ, ಕಟ್ಟಡ ನಕಾಶೆ ಅನುಮೋದನೆಗಾಗಿ 6 ಸಾವಿರ ಲಂಚ ಪಡೆದು ಮಂಗಳವಾರ ಸಿಕ್ಕಿ ಬಿದ್ದಿದ್ದಾರೆ.

ಮಹಿಳೆಯೊಬ್ಬರು ಗೋಕುಲಂ 2ನೇ ಹಂತದಲ್ಲಿ ರುವ ನಿವೇಶನದಲ್ಲಿ ಹೊಸ ಕಟ್ಟಡ ನಿರ್ಮಿಸಲು ಮುಂದಾಗಿದ್ದು, ಈ ಸಂಬಂಧ ನಕಾಶೆ ಸಿದ್ಧಪಡಿಸಿ ದ್ದರು. ಆ ನಕಾಶೆ ಅನುಮೋದನೆಗೆ ನಗರ ಪಾಲಿಕೆಗೆ ಆನ್‌ಲೈನ್ ಮೂಲಕ ಸಲ್ಲಿಸಿ, ಅದರ ಸ್ಥಿತಿಗತಿ ತಿಳಿಯುವಂತೆ ವಿಜಯನಗರದ ವ್ಯಕ್ತಿಯೊಬ್ಬರಿಗೆ ವಹಿಸಿದ್ದರು. ಅದರಂತೆ ಆ ವ್ಯಕ್ತಿ 3 ದಿನಗಳ ಹಿಂದೆ ವಲಯ ಕಚೇರಿ–4ರ ಜೆಇ ಗುರುಸಿದ್ದಯ್ಯ ಅವರನ್ನು ಭೇಟಿಯಾಗಿ ವಿಚಾರಿಸಿದಾಗ, ನಕಾಶೆ ಅನುಮೋದನೆಗೆ 6 ಸಾವಿರ ರೂ. ಲಂಚಕ್ಕೆ ಬೇಡಿಕೆಯಿಟ್ಟು, 3 ಸಾವಿರ ಮುಂಗಡ ಪಡೆದಿದ್ದರು.

ಬಾಕಿ 3 ಸಾವಿರ ರೂ. ಲಂಚ ನೀಡುವಂತೆ ನಿನ್ನೆ (ಮೇ 9) ಗುರುಸಿದ್ದಯ್ಯ ಒತ್ತಾಯಿಸಿದ್ದರಿಂದ ಕೂಡಲೇ ಆ ವ್ಯಕ್ತಿ ಎಸಿಬಿಗೆ ದೂರು ನೀಡಿದ್ದರು. ಅಧಿಕಾರಿಯನ್ನು ಬಲೆಗೆ ಕೆಡವಲು ಎಸಿಬಿ ದಕ್ಷಿಣ ವಲಯ ಪೊಲೀಸ್ ಅಧೀಕ್ಷಕ ವಿ.ಜೆ.ಸಜೀತ್ ಮಾರ್ಗದರ್ಶನದಲ್ಲಿ ಮೈಸೂರು ಎಸಿಬಿ ಠಾಣೆ ಅಧಿಕಾರಿ ಹಾಗೂ ಸಿಬ್ಬಂದಿ ಯೋಜನೆ ರೂಪಿಸಿದರು. ಜೆಇ ಗುರುಸಿದ್ದಯ್ಯ ತಮ್ಮ ಕಚೇರಿ ಯಲ್ಲೇ ಬಾಕಿ 3 ಸಾವಿರ ರೂ. ಲಂಚ ಪಡೆಯುವಾಗಲೇ ದಾಳಿ ನಡೆಸಿ ಅವರನ್ನು ಬಂಧಿಸಿ, ಲಂಚದ ಹಣವನ್ನೂ ವಶಪಡಿಸಿಕೊಳ್ಳ ಲಾಗಿದೆ. ಪ್ರಕರಣದ ತನಿಖೆ ಮುಂದು ವರೆದಿದೆ ಎಂದು ಎಸಿಬಿ ಪೊಲೀಸರು ತಿಳಿಸಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ಶೀಘ್ರದಲ್ಲೇ

ಸಂಚಾರಿ ಪಶು ಚಿಕಿತ್ಸಾಲಯ ಆಂಬುಲೆನ್ಸ್ ಕಾರ್ಯಾರಂಭ

• ಮೈಸೂರು ತಲುಪಿರುವ ವಾಹನಗಳು • ಮನೆ ಬಾಗಿಲಲ್ಲೇ ಪಶುಗಳಿಗೆ ಚಿಕಿತ್ಸೆ



ಸಜ್ಜಾಗಿರುವ 9 ಸಂಚಾರಿ ಪಶು ಚಿಕಿತ್ಸಾಲಯದ ಆಂಬುಲೆನ್ಸ್‌ಗಳು.

ಮೈಸೂರು, ಮೇ 10(ಜಿಎ)– ಮೈಸೂರು ತಲುಪಿರುವ 9 'ಸಂಚಾರಿ ಪಶು ಚಿಕಿತ್ಸಾಲಯ' ಆಂಬುಲೆನ್ಸ್‌ಗಳು ಶೀಘ್ರದಲ್ಲೇ ಮೈಸೂರು ಜಿಲ್ಲೆಯಲ್ಲಿ ಕಾರ್ಯ ಆರಂಭಿಸಲಿವೆ.

ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದರಂತೆ ಒಟ್ಟು 275 ಸಂಚಾರಿ ಪಶು ಚಿಕಿತ್ಸಾಲಯ ಆಂಬುಲೆನ್ಸ್ ಹಾಗೂ ಸಹಾಯವಾಣಿ ಸಂಖ್ಯೆ 1962ಕ್ಕೆ ಸಿಎಂ ಬಸವರಾಜ ಬೊಮ್ಮಾಯಿ ಅವರು ಮೇ 7ರಂದು ಬೆಂಗಳೂರಿನಲ್ಲಿ ಹಸಿರು ನಿಶಾನೆ ತೋರಿದ್ದಾರೆ.

ಮೊದಲ ಹಂತವಾಗಿ 75 ವಾಹನಗಳಿಗೆ ಚಾಲನೆ ನೀಡಿದ್ದು, ಅದರಂತೆ ಮೈಸೂರಿಗೆ 9 'ಸಂಚಾರಿ ಪಶು ಚಿಕಿತ್ಸಾಲಯ' ಆಂಬುಲೆನ್ಸ್ ಬಂದಿದ್ದು, ಮೈಸೂರಿನ 9 ತಾಲೂಕು ಕೇಂದ್ರಗಳಾದ ಮೈಸೂರು, ನಂಜನಗೂಡು, ಹುಣಸೂರು, ಪಿರಿಯಾಪಟ್ಟಣ, ತಿ.ನರಸೀಪುರ, ಹೆಚ್.ಡಿ.ಕೋಟೆ, ಸರಗೂರು, ಕೆ.ಆರ್.ನಗರ ಮತ್ತು ಸಾಲಿಗ್ರಾಮಕ್ಕೆ ವಾಹನಗಳು ತಲುಪಿದೆ.

'ಸಂಚಾರಿ ಪಶು ಚಿಕಿತ್ಸಾಲಯ' ಉದ್ದೇಶ: ರೈತರು ಇನ್ನು ಮುಂದೆ ಪಶುಗಳು, ಕುರಿ, ಮೇಕೆ ಸೇರಿದಂತೆ ಮತ್ತಿತರ ಪ್ರಾಣಿಗಳಿಗೆ ಚಿಕಿತ್ಸೆ, ಗರ್ಭದಾರಣೆ ಸಮಸ್ಯೆಗಳಿಗಾಗಿ ಪಶು ಕೇಂದ್ರಗಳಿಗೆ ಅಲೆಯುವ ಅವಶ್ಯಕತೆಯೇ ಇಲ್ಲ. ಪ್ರಾಣಿಗಳಿಗೆ ಯಾವುದೇ ರೀತಿ ಆರೋಗ್ಯ ಸಮಸ್ಯೆಗಳಾದರೆ 1962 ಸಂಖ್ಯೆಗೆ ಕರೆ ಮಾಡಿದರೆ, ಬೆಂಗಳೂರಿನಲ್ಲಿರುವ ಕಂಟ್ರೋಲ್ ರೂಂ ಗೆ ನಿಮ್ಮ ಮಾಹಿತಿ ತಲುಪುತ್ತದೆ. ನಂತರ 'ಸಂಚಾರಿ ಪಶು ಚಿಕಿತ್ಸಾಲಯ' ವಾಹನ ನೇರವಾಗಿ ನಿಮ್ಮ ಮನೆ ಬಾಗಿಲಿಗೆ ತಲುಪಲಿದೆ ಹಾಗೂ ಸ್ಥಳದಲ್ಲೇ ಸೂಕ್ತ ಚಿಕಿತ್ಸೆ ನೀಡಲಿದ್ದಾರೆ.

ವಿಶೇಷತೆಗಳು : ಒಬ್ಬ ವೈದ್ಯರು, ಒಬ್ಬ ಪಶು ವೈದ್ಯಕೀಯ ಸಹಾಯಕ, ಒಬ್ಬ ಡಿ ದರ್ಜೆ ನೌಕರ ಮತ್ತು ಚಾಲಕನನ್ನು ಒಳಗೊಂಡಿರುವ 'ಸಂಚಾರಿ ಪಶು ಚಿಕಿತ್ಸಾಲಯ' ಪ್ರಾಣಿಗಳ ಚಿಕಿತ್ಸೆಗೆ ಬೇಕಾಗಿರುವ ಎಲ್ಲಾ ರೀತಿಯ ಪೀಠೋಪಕರಣಗಳನ್ನು ಹೊಂದಿದೆ. ಇದರೊಂದಿಗೆ ಎಸಿ, ಫ್ಯಾನ್, ಬಿಸಿ ನೀರು ಕಾಯಿಸಲು ಗೀಸರ್, ಔಷಧಿಗಳನ್ನು ಶೇಖರಿಸಲು ಫ್ರಿಡ್ಜ್ ವ್ಯವಸ್ಥೆಯನ್ನು ಸಹ ಮಾಡಲಾಗಿದ್ದು, ಯಾವುದೇ ಪಶು ಕೇಂದ್ರಕ್ಕೂ ಕಡಿಮೆ ಇಲ್ಲದಂತೆ ಎಲ್ಲಾ ಸೌಲಭ್ಯಗಳನ್ನು ಒಳಗೊಂಡು ವಿಶೇಷತೆಯೊಂದಿಗೆ ಕಾರ್ಯನಿರ್ವಹಿಸಲು ಸನ್ನದ್ಧವಾಗಿದೆ.

ಶೀಘ್ರದಲ್ಲಿ ಸೇವೆ: ಮೈಸೂರನ್ನು ತಲುಪಿರುವ 'ಸಂಚಾರಿ ಪಶು ಚಿಕಿತ್ಸಾಲಯ' ವಾಹನಗಳು ಶೀಘ್ರದಲ್ಲೇ ಸೇವೆ ನೀಡಲಿವೆ ಎಂದು ಪಶುಪಾಲನ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಉಪ ನಿರ್ದೇಶಕ ಡಾ.ಬಿ.ಎನ್. ಷಡಕ್ಷರ ಮೂರ್ತಿ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೈಸೂರಿನಲ್ಲಿ ಈಗಾಗಲೇ ಪ್ರಾಯೋಗಿಕವಾಗಿ 'ಮೊಬೈಲ್ ರೂಟರ್' ಎಂಬ ವಿಶೇಷ ವಾಹನವೂ ಯಾವ ತಾಲೂಕಿನಲ್ಲಿ ವಿರಳ ಪಶು ಕೇಂದ್ರಗಳಿವೆಯೋ ಆ ಭಾಗಗಳಿಗೆ ಸೋಮವಾರ, ಮಂಗಳವಾರ, ಗುರುವಾರ ಮತ್ತು ಶುಕ್ರವಾರ ನಾಲ್ಕು ದಿನಗಳು ರೂಟ್ ಮ್ಯಾಪ್ ಮೂಲಕ ತೆರಳಿ ಸೇವೆ ಮಾಡುತ್ತಿದ್ದು, ಅದಕ್ಕೆ ರೈತರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ವಾಹನ ಕೆಲ ವ್ಯಾಪ್ತಿಗೆ ಮಾತ್ರ ಸೀಮಿತವಾಗಿತ್ತು. ಆದರೆ ಎಲ್ಲಾ ಸೌಲಭ್ಯಗಳನ್ನು ಒಳಗೊಂಡಿರುವ 'ಸಂಚಾರಿ ಪಶು ಚಿಕಿತ್ಸಾಲಯ'ಕ್ಕೆ ಯಾವುದೇ ವ್ಯಾಪ್ತಿ ಇರುವುದಿಲ್ಲ. ತಾಲೂಕಿನ ಯಾವುದೇ ಭಾಗದಿಂದ ಕರೆ ಬಂದರೆ ತಕ್ಷಣ ತೆರಳಿ ಪಶುಗಳಿಗೆ ಸೂಕ್ತ ಚಿಕಿತ್ಸೆ ನೀಡಲು ಉಪಯುಕ್ತವಾಗಿದ್ದು, ರೈತರು ಮತ್ತು ಸಾರ್ವಜನಿಕರು ಸಹ ಇದನ್ನು ಬಳಸಿಕೊಳ್ಳಬಹುದಾಗಿದೆ ಎಂದರು.

'ಸಂಚಾರಿ ಪಶು ಚಿಕಿತ್ಸಾಲಯ' ಕಾರ್ಯ ನಿರ್ವಹಿಸಲು ಮಾನವ ಸಂಪನ್ಮೂಲ ಅಗತ್ಯವಿದ್ದು, ಸರ್ಕಾರದ ವತಿಯಿಂದಲೇ ಅದಕ್ಕಾಗಿ ವಿಶೇಷ ಟೆಂಡರ್ ಕರೆಯಲು ಚಿಂತಿಸಿದ್ದು, ಕೆಲವೇ ದಿನಗಳಲ್ಲಿ ಚಿಕಿತ್ಸೆಗೆ ಅಗತ್ಯವಿರುವ ಒಬ್ಬ ವೈದ್ಯರು, ಒಬ್ಬ ಪಶು ವೈದ್ಯಕೀಯ ಸಹಾಯಕ, ಒಬ್ಬ ಡಿ ದರ್ಜೆ ನೌಕರ ಮತ್ತು ಚಾಲಕನನ್ನು ಆಯ್ಕೆ ಮಾಡಿ ಮೈಸೂರಿನಲ್ಲಿ ಸೇವೆ ಆರಂಭಿಸಲಿದೆ ಎಂದರು ತಿಳಿಸಿದರು.

6 ತಿಂಗಳಿನಲ್ಲಿ ಗೋಶಾಲೆ ಆರಂಭ ಸಾಧ್ಯತೆ...



ಆಯರಹಳ್ಳಿ ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಗೋಶಾಲೆ

ರಾಜ್ಯ ಸರ್ಕಾರದ ಪ್ರಮುಖ ಯೋಜನೆಯಾದ ಜಿಲ್ಲೆಗೊಂದು ಗೋಶಾಲೆ ಯೋಜನೆಯಡಿ ಮೈಸೂರಿನ ದೇವಲಾಪುರ ಬಳಿಯ ಆಯರಹಳ್ಳಿ ಗ್ರಾಮದಲ್ಲಿ 10 ಎಕರೆ ಪ್ರದೇಶದಲ್ಲಿ 1.85 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಗೋಶಾಲೆಯ ಕಾಮಗಾರಿ ತಿಂಗಳಲ್ಲಿ ಮುಗಿಯುವ ಸಾಧ್ಯತೆ ಇದೆ. ಮೊದಲ ಹಂತವಾಗಿ ರಾಜ್ಯ ಸರ್ಕಾರದ ವತಿಯಿಂದ 53 ಲಕ್ಷ ರೂ. ಬಿಡುಗಡೆಯಾಗಿದ್ದು, ವ್ಯವಸ್ಥಿತವಾಗಿ ಎಲ್ಲಾ ಸೌಕರ್ಯಗಳನ್ನೊಳಗೊಂಡಂತೆ ನಿರ್ಮಾಣವಾಗುತ್ತಿದೆ. ಈ ಗೋಶಾಲೆಯಲ್ಲಿ ಬಿಡಾಡಿ ದನ, ಅಪಘಾತಕ್ಕೆ ಈಡಾಗಿರುವ ಪಶು, ಅಕ್ರಮವಾಗಿ ಸಾಗಿಸುವ ಪಶು, ಪೊಲೀಸರು ವಶಪಡಿಸಿಕೊಳ್ಳುವ ಪಶುಗಳಿಗೆ ಔಷಧೋಪಚಾರ ಮಾಡಿ ಪೋಷಣೆ ಮಾಡಲಾಗುತ್ತದೆ.



– ಡಾ.ಬಿ.ಎನ್. ಷಡಕ್ಷರಮೂರ್ತಿ,
ಉಪನಿರ್ದೇಶಕ, ಪಶುಪಾಲನ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮನುಷ್ಯ ಧರ್ಮಾನುಷ್ಠಾನದೊಂದಿಗೆ ದೇವರಾಗಬಹುದು

ಶೃಂಗೇರಿ ಶ್ರೀ ಶಾರದಾ ಪೀಠದ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಪ್ರತಿಪಾದನೆ | ವೇದ-ಶಾಸ್ತ್ರ-ಪುರಾಣಗಳ ಅಧ್ಯಯನದಿಂದ ಮನುಷ್ಯ ಜನ್ಮ ಸಾರ್ಥಕ

ಮೈಸೂರು, ಮೇ 10(ಎಂಕೆ)- ಪ್ರಪಂಚದಲ್ಲಿ ಮನುಷ್ಯ ಜನ್ಮ ಅತ್ಯಂತ ದುರ್ಲಭವಾದದ್ದು, ಸುಖ-ದುಃಖಗಳನ್ನು ಸಮಾನವಾಗಿ ಪಡೆದಿರುವ ಮನುಷ್ಯ ಶಾಸ್ತ್ರಗಳಲ್ಲಿ ಹೇಳಿರುವಂತೆ 'ಧರ್ಮಾನುಷ್ಠಾನ' ಮಾಡಿದರೆ ದೇವತೆಗಳಾಗಬಹುದು ಎಂದು ಶೃಂಗೇರಿ ಶ್ರೀ ಶಾರದಾ ಪೀಠದ 37ನೇ ಪೀಠಾಧಿಪತಿಗಳಾದ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮೀಜಿ ತಿಳಿಸಿದರು.

ಮೈಸೂರಿನ ಶ್ರೀ ಶಂಕರ ಮಠದಲ್ಲಿ ಆಯೋಜಿಸಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಪ್ರವಚನ ನೀಡಿದ ಅವರು, ಎಷ್ಟೋ ಜನ್ಮಗಳಲ್ಲಿ ಮಾಡಿದ ಪುಣ್ಯದ ಫಲದಿಂದ ಮಾತ್ರವೇ ಮನುಷ್ಯ ಜನ್ಮ ನಮಗೆ ಪ್ರಾಪ್ತವಾಗುತ್ತದೆ. ಶಾಸ್ತ್ರ-ಪುರಾಣಗಳಲ್ಲಿ ಉಲ್ಲೇಖಿಸಿರುವಂತೆ ಪ್ರಪಂಚದಲ್ಲಿರುವ 84 ಲಕ್ಷ ಬಗೆಯ ಪ್ರಾಣಿಗಳಲ್ಲಿ ಮನುಷ್ಯನೂ ಒಂದು ಪ್ರಾಣಿಯಾಗಿದ್ದು, ಇತರೆ ಎಲ್ಲಾ ಪ್ರಾಣಿಗಳಿಗಿಂತಲೂ ಶ್ರೇಷ್ಠನಾಗಿರುತ್ತಾನೆ. ದೇವತೆ, ಮನುಷ್ಯ ಮತ್ತು ಪ್ರಾಣಿಗಳೆಂದು ಮಾಡಿರುವ ವಿಂಗಡಣೆಯಲ್ಲಿ ದೇವತೆಗಳಿಗೆ ಅತ್ಯಧಿಕ ಸುಖವಿದ್ದರೆ, ಪ್ರಾಣಿಗಳಿಗೆ ದುಃಖವೇ ಹೆಚ್ಚು ಆದರೆ ಸುಖ-ದುಃಖಗಳನ್ನು ಸಮಾನವಾಗಿ ಪಡೆದಿರುವ ಮನುಷ್ಯ ಪ್ರಾಮಾಣಿಕ ಧರ್ಮಾನುಷ್ಠಾನದಿಂದ ಇನ್ನೂ ಉತ್ತಮ ಸ್ಥಿತಿಯನ್ನು ತಲುಪಲು ಸಾಧ್ಯ ಎಂದರು.

ಒಂದು ಕಾಲದಲ್ಲಿ ಮನುಷ್ಯರಾಗಿದ್ದವರೇ ದೇವತೆಗಳಾಗಿರುವುದು. ಇಂದ್ರ ಎಂಬುದು ಒಂದು ಸ್ಥಾನ. ಆ ಸ್ಥಾನಕ್ಕೆ ಹೋದವರನ್ನು ಇಂದ್ರ ಎಂದು ಕರೆಯುತ್ತೇವೆ. ಇಂದ್ರನ ಸ್ಥಾನಕ್ಕೆ ಹೋಗಬೇಕಾದರೆ 100 ಅಶ್ವಮೇಧ ಯಾಗಗಳನ್ನು ಮಾಡಿರಬೇಕು ಎಂದು ಶಾಸ್ತ್ರ ಹೇಳುತ್ತದೆ. ಯಾವುದೇ ವಿಘ್ನವಿಲ್ಲದೆ ಅಶ್ವಮೇಧ ಯಾಗ ಮಾಡಿದವರು ತಮ್ಮ ಶರೀರವನ್ನು ಬಿಟ್ಟು ಮೇಲಕ್ಕೆ ಹೋದಾಗ(ಸ್ವರ್ಗ) ಇಂದ್ರನ ಸ್ಥಾನ ಲಭಿಸುತ್ತದೆ ಎನ್ನಲಾಗಿದೆ. ಅದಕ್ಕಿಂತ ಕಡಿಮೆ ಅಶ್ವಮೇಧ ಯಾಗ ಮಾಡಿದರೆ ಇಂದ್ರನ ಸ್ಥಾನಕ್ಕಿಂತ ಕಡಿಮೆ ಹಂತದ ಸ್ಥಾನಗಳನ್ನು ಪಡೆದುಕೊಳ್ಳುತ್ತಾರೆ. ಆದ್ದರಿಂದ ದೇವತೆಯಾಗಬೇಕಾದರೂ ಧರ್ಮಾನುಷ್ಠಾನ ಮಾಡಲೇಬೇಕು. ಕೆಟ್ಟ(ಧರ್ಮಕ್ಕೆ ವಿರುದ್ಧವಾದ) ಕೆಲಸ ಮಾಡಿದವರು ಮತ್ತೆ ಮತ್ತೆ ಕನಿಷ್ಠ ಜನ್ಮ ಅಂದರೆ ಪ್ರಾಣಿಗಳಾಗಿಯೇ ಹುಟ್ಟಿ ತಮ್ಮ ಪಾಪವನ್ನು ಕಳೆದುಕೊಳ್ಳಬೇಕಾಗುತ್ತದೆ ಹಾಗಾಗಿಯೇ ಮನುಷ್ಯ ಜನ್ಮ ಎಂಬುದು ಅತ್ಯಂತ ಉತ್ಕೃಷ್ಟವಾದದು ಎಂದು ಹೇಳಿದರು.

ಮನುಷ್ಯ ಜನ್ಮವನ್ನು ಸಾರ್ಥಕ ಮಾಡಿಕೊಳ್ಳಬೇಕಾದರೆ ಏನೆಲ್ಲಾ ಮಾಡಬೇಕು ಎಂಬುದನ್ನು ನಮ್ಮ ವೇದ-ಶಾಸ್ತ್ರ-ಪುರಾಣ ಗ್ರಂಥಗಳಲ್ಲಿ ಪ್ರತಿಪಾದನೆ ಮಾಡಲಾಗಿದೆ. ಎಲ್ಲವನ್ನು ಅಧ್ಯಯನ ಮಾಡಲು ಸಾಧ್ಯವಾಗದಿದ್ದರೆ, ಭಗವಂತನೇ ಉಪದೇಶ ಮಾಡಿದ 'ಭಗವದ್ಗೀತೆ'ಯನ್ನು ಪಠಣ ಮಾಡಿದರೆ ಸಾಕು. ಭಗವದ್ಗೀತೆಯೂ ಸಮಸ್ತ ಶಾಸ್ತ್ರ-ಪುರಾಣ-ಉಪನಿಷತ್ತುಗಳ ಸಾರಭೂತವಾಗಿರುವ ಗ್ರಂಥ. ಅದರಲ್ಲಿ ಕರ್ಮಮಾರ್ಗ, ಭಕ್ತಿಮಾರ್ಗ, ಜ್ಞಾನ ಮಾರ್ಗ ಎಲ್ಲವನ್ನು ಭಗವಂತ ಉಪದೇಶ ಮಾಡಿದ್ದು, ಅತ್ಯಂತ ಸರಳವಾಗಿ ಎಲ್ಲರಿಗೂ ಅರ್ಥವಾಗುತ್ತದೆ. ಭಗವದ್ಗೀತೆಯೂ ಕಷ್ಟವಾದರೆ ಭಗವಂತನ ಒಂದು ಸಾವಿರ ನಾಮ ಪಠಣ ಮಾಡಿದರೆ ಸಾಕು. ಭಗವಂತನೇ ಕರುಣೆ ತೋರಿ ಅನುಗ್ರಹ ಮಾಡುತ್ತಾನೆ ಎಂದು ತಿಳಿಸಿದರು.



> ಪಾಕ್ ಆಕ್ರಮಿತ ಕಾಶ್ಮೀರ ಹಾಗೂ ಭಾರತದ ಗಡಿ ಭಾಗದ ಮಧ್ಯದಲ್ಲಿರುವ ಟಿಟ್ವಾಲ್ ಪ್ರದೇಶದಲ್ಲಿ 3-4 ಶತಮಾನಗಳ ಹಿಂದೆ ಶಾರದಾ ಮೂರ್ತಿ ಇತ್ತು. ಅಲ್ಲಿ ಆದಿ ಶಂಕರರು ಸರ್ವಜ್ಞರ ಪೀಠವನ್ನು ಅಲಂಕರಿಸಿದ್ದರು ಎಂಬ ಇತಿಹಾಸದ ಆಧಾರದ ಮೇಲೆ 1996-97ರಿಂದ ನಡೆಸಿದ ಪ್ರಯತ್ನ ಫಲವಾಗಿ 3 ಸಾವಿರ ಚದರಡಿ ಜಾಗವನ್ನು ಶ್ರೀ ಶಾರದಾ ಕಮಿಟಿಗೆ ಕೊಡಲಾಗಿದೆ. ಈಗಾಗಲೇ ಅಲ್ಲಿ ದೇವಸ್ಥಾನ ಕಟ್ಟಲಾಗುತ್ತಿದ್ದು, ಮುಂದಿನ 6 ತಿಂಗಳಲ್ಲಿ ಶೃಂಗೇರಿ ಶಾರದಾ ಪೀಠದಿಂದಲೇ ತಯಾರಾದ ಪಂಚಲೋಹದ ಶಾರದೆಯ ಮೂರ್ತಿಯನ್ನು ಅಲ್ಲಿಗೆ ಪ್ರತಿಷ್ಠಾಪಿಸಲಾಗುವುದು.
> - ವಿ.ಆರ್.ಗೌರಿಶಂಕರ್, ಶೃಂಗೇರಿ ಶ್ರೀ ಶಾರದಾ ಪೀಠದ ಆಡಳಿತಾಧಿಕಾರಿ

ಸಾಧನೆಗೆ ತಪಸ್ಸು ಮುಖ್ಯ: ನಾವು ಯಾವುದೇ ಸಾಧನೆ ಮಾಡಬೇಕಾದರೂ ತಪಸ್ಸು ಎಂಬುದು ಅತ್ಯಂತ ಮುಖ್ಯ ತಪಸ್ಸು ಎಂದರೆ ಕಠಿಣ ಪರಿಶ್ರಮ. ತಪಸ್ಸಿನಿಂದ ಎಂತಹ ಕಷ್ಟ ಕಾರ್ಯವನ್ನೂ ಮಾಡಲು ಸಾಧ್ಯ ಆದರೆ ತಪಸ್ಸನ್ನು ಮಾಡುವುದೇ ತುಂಬಾ ಕಷ್ಟವಾಗಿದ್ದು, ಕಠಿಣ ಪರಿಶ್ರಮದಿಂದ ಮಾಡಿದರಷ್ಟೇ ಸಾಧನೆ ಸಿದ್ಧಿಯಾಗುವುದು. ಭಗವಂತ ನಮಗೆ ತಪಸ್ಸು ಅಥವಾ ಕೆಲಸ ಮಾಡಲು ಮೂರು ಕರ್ಣ(ಸಾಧನ)ಗಳನ್ನು ಕೊಟ್ಟಿದ್ದಾನೆ. ಶರೀರ, ಮನಸ್ಸು ಮತ್ತು ಮಾತು ಎಂಬ ಈ ಮೂರು ಕರ್ಣಗಳಿಂದ ತಪಸ್ಸು ಮಾಡಬೇಕು. ಶರೀರದಿಂದ ದೇವರ ಪೂಜೆಯನ್ನು ಮಾಡುವುದು. ಅಧ್ಯಯನ ಪ್ರಾಜ್ಞರನ್ನು ಹಾಗೂ ಗುರುಗಳನ್ನು ಗೌರವಿಸುವುದು ಎಂದು ತಿಳಿಸಿಕೊಟ್ಟ ಶ್ರೀಗಳು ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳುವ ತಾಳ್ಮೆ ಹಾಗೂ ಎಲ್ಲರನ್ನು ಪ್ರೀತಿಯಿಂದ ಕಂಡು ಮಾತನಾಡಿಸುವ ಬಗೆಯನ್ನು ತಿಳಿಸಿಕೊಟ್ಟರು.

ಬಹಳ ಹತ್ತಿರದ ಸಂಬಂಧ: ರಾಜವಂಶಸ್ಥ ಯದುವೀರ್ ಕಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಮೈಸೂರು ಸಂಸ್ಥಾನ ಹಾಗೂ ಶೃಂಗೇರಿ ಶಾರದಾ ಪೀಠಕ್ಕೂ ಬಹಳ ಹತ್ತಿರದ ಸಂಬಂಧವಿದೆ. ಶೃಂಗೇರಿ ಪೀಠದ ಶ್ರೀ ವಿದ್ಯಾರಣ್ಯ ಮಹಾಸ್ವಾಮೀಜಿಯವರು ಕರ್ನಾಟಕ ಸಾಮ್ರಾಜ್ಯ (ವಿಜಯನಗರ ಸಾಮ್ರಾಜ್ಯ)ಕ್ಕೆ ಗುರುಗಳಾಗಿದ್ದ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ರತ್ನ ಖಚಿತ ಸಿಂಹಾಸನವನ್ನು ಸಂಸ್ಥಾಪನೆ ಮಾಡುತ್ತಾರೆ ಎಂದು ವಿವರಿಸಿದ ಅವರು, ಶೃಂಗೇರಿ ಮಠದೊಂದಿಗೆ ತಮ್ಮ ಸಂಸ್ಥಾನ ಹೊಂದಿರುವ ಸಂಬಂಧ, ಸಾಂಸ್ಕೃತಿಕ ಪರಂಪರೆಯನ್ನು ತಿಳಿಸಿದರು. ಶಾಸಕ ಎಸ್.ಎ. ರಾಮದಾಸ್, ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ ಶೃಂಗೇರಿ ಶ್ರೀ ಶಾರದಾ ಪೀಠದ ಆಡಳಿತಾಧಿಕಾರಿ ವಿ.ಆರ್.ಗೌರಿಶಂಕರ್, ಮೈಸೂರಿನ ಶ್ರೀ ಶಂಕರ ಮಠದ ಧರ್ಮಾಧಿಕಾರಿ ರಾಮಚಂದ್ರ, ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಟಿ.ವಿ.ಸತ್ಯನಾರಾಯಣ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಅರಮನೆಗೆ ಶೃಂಗೇರಿಯ ಕಿರಿಯ ಶ್ರೀಗಳ ಭೇಟಿ

ರಾಜವಂಶಸ್ಥರಿಂದ ಶ್ರೀಗಳಿಗೆ ವಿಶೇಷ ಪೂಜೆ ಸಲ್ಲಿಕೆ

ಮೈಸೂರು, ಮೇ10(ಜಿಎ)- ಶೃಂಗೇರಿ ಶ್ರೀ ಶಾರದಾ ಪೀಠದ ಶ್ರೀ ಶ್ರೀ ಭಾರತೀ ತೀರ್ಥ ಮಹಾ ಸನ್ನಿಧಾನಂಗಳ ಉತ್ತರಾಧಿಕಾರಿಗಳಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮೀಗಳಿಗೆ ಮೈಸೂರು ಅರಮನೆಯಲ್ಲಿ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸೇರಿದಂತೆ ರಾಜವಂಶಸ್ಥರು ವಿಶೇಷ ಪೂಜೆ ಸಲ್ಲಿಸಿದರು.





ಮೈಸೂರಿಗೆ ಆಗಮಿಸಿರುವ ಶ್ರೀಗಳು ಮಂಗಳವಾರ ಸಂಜೆ ಮೈಸೂರು ಅರಮನೆಗೆ ಭೇಟಿ ನೀಡಿದ್ದರು. ಈ ವೇಳೆ ಅವರನ್ನು ಅರಮನೆಯ ಜಯ ಮಾರ್ತಾಂಡ ಗೇಟ್ ಬಳಿಯಿಂದ ನಾದಸ್ವರದೊಂದಿಗೆ ಬೆಳ್ಳಿ ರಥದಲ್ಲಿ ಅರಮನೆಯ ಆನೆ ಬಾಗಿಲವರೆಗೂ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು. ಈ ವೇಳೆ ರಾಜಮಾತೆ ಪ್ರಮೋದಾ ದೇವಿ ಒಡೆಯರ್, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ತ್ರಿಷಿಕಾ ಯದುವೀರ್ ಹಾಗೂ ಪುತ್ರ ಆದ್ಯವೀರ್ ಅವರುಗಳು ಶ್ರೀಗಳ ಪಾದ ತೊಳೆದು ಅರಮನೆಯ ಕಲ್ಯಾಣ ಮಂಟಪಕ್ಕೆ ಸ್ವಾಗತಿಸಿದರು. ಈ ವೇಳೆ ಕಲ್ಯಾಣ ಮಂಟಪದಲ್ಲಿ ಆಸೀನರಾದ ಶ್ರೀಗಳಿಗೆ ರಾಜವಂಶಸ್ಥರಿಂದ ವಿಶೇಷ ಪೂಜೆ ಸಲ್ಲಿಸಲಾಯಿತು. ಇದೇ ವೇಳೆ ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಉಪಸ್ಥಿತರಿದ್ದರು.

ನೇತಾಜಿ ನಗರದ ಸರ್ವತೋಮುಖ ಅಭಿವೃದ್ಧಿ: ಶಾಸಕ ಜಿಟಿಡಿ ಭರವಸೆ

ಮೈಸೂರು, ಮೇ 10-ಆಲನಹಳ್ಳಿ ಬಡಾವಣೆಯ ಸಮೀಪವಿರುವ ನೇತಾಜಿ ನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘವನ್ನು ಮಾಜಿ ಸಚಿವರು ಮತ್ತು ಚಾಮುಂಡೇಶ್ವರಿ ಕ್ಷೇತ್ರದ ಶಾಸಕರೂ ಆದ ಜಿ.ಟಿ.ದೇವೇಗೌಡ ಉದ್ಘಾಟಿಸಿದರು.



ಈ ವೇಳೆ ಮಾತನಾಡಿದ ಜಿಟಿಡಿ, ವಿಶ್ವ ತಾಯಂದಿರ ದಿನಾಚರಣೆಯ ಮಹತ್ವವನ್ನು ತಿಳಿಸುತ್ತಾ ತಮ್ಮ ತಾಯಿಯ ಜೊತೆ ಇದ್ದ ಒಡನಾಟವನ್ನು ಸ್ಮರಿಸಿದರು. ನೇತಾಜಿ ನಗರವನ್ನು ಒಂದು ಮಾದರಿ ಬಡಾವಣೆಯಾಗಿ ಮಾಡುವುದಾಗಿ, ತಿಳಿಸಿದ ಅವರು ಜೂ.15ರೊಳಗೆ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು ಕರೆದು ನೇತಾಜಿ ನಗರದಲ್ಲೇ ನಿವಾಸಿಗಳೆದುರು ಸಭೆ ನಡೆಸಿ, ರಸ್ತೆ, ಒಳಚರಂಡಿ ವ್ಯವಸ್ಥೆ ಮತ್ತಿತರ ಮೂಲಭೂತ ಸೌಲಭ್ಯಗಳನ್ನು ತ್ವರಿತಗತಿಯಲ್ಲಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಸಂಘದ ಅಧ್ಯಕ್ಷ ಹೆಚ್.ಎಂ.ಉಮೇಶ್ ಅವರು, ಬಡಾವಣೆಗೆ ಆಗಬೇಕಾಗಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಮನವಿ ಪತ್ರವನ್ನು ಶಾಸಕರಿಗೆ ಸಲ್ಲಿಸಿದರು. ಉಪಾಧ್ಯಕ್ಷರಾದ ಡಾ. ಹೆಚ್.ಎಲ್. ಶಿವಬಸಪ್ಪ, ಶ್ರೀಮತಿ ಸುಧಾ ಮಹಾದೇವ, ಕಾರ್ಯದರ್ಶಿ ಲೋಲ ಕುಮಾರ್, ಎಸ್. ಮತ್ತು ಎಲ್ಲಾ ಕಾರ್ಯಕಾರಿ ಮಂಡಳಿ ಸದಸ್ಯರು ಹಾಜರಿದ್ದರು.

ಸಂಘದ ಉದ್ಘಾಟನೆಯ ಅಂಗವಾಗಿ ಶ್ರೀಮತಿ ಸುಮ ರಾಜ್‌ಕುಮಾರ್ ಅವರಿಂದ 'ಮಾತನಾಡುವ ಗೊಂಬೆ' ಮನರಂಜನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸಂಘದ ಸಂಚಾಲಕರಾದ ಕೆ.ಬಿ.ಆನಂದಮೂರ್ತಿ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

ಉದ್ಯಮಿ ಆತ್ಮಹತ್ಯೆ ಪ್ರಕರಣ: ಮೊದಲ ಆರೋಪಿ ಪ್ರವೀಣ್ ನಿರೀಕ್ಷಣಾ ಜಾಮೀನು ಅರ್ಜಿ ವಜಾ


ಮೈಸೂರು, ಮೇ 10- ಉದ್ಯಮಿ ಶರತ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಪ್ರವೀಣ್ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿದೆ. ಮೈಸೂರಿನ ಕೆಸರೆ ನಿವಾಸಿ ಜಿ.ಆರ್.ಶರತ್, ಉದ್ಯಮ ಪಾಲುದಾರನಾಗಿದ್ದ ಪ್ರವೀಣ್ ಹಾಗೂ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಅಧ್ಯಕ್ಷ ಅಪ್ಪಣ್ಣ ವಿರುದ್ಧ ವಂಚನೆ ಆರೋಪ ಮಾಡಿ, ಮಾ.18ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಸಂಬಂಧ ಇಬ್ಬರ ವಿರುದ್ಧ ನರಸಿಂಹರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಮೊದಲ ಆರೋಪಿ(ಎ1) ಪ್ರವೀಣ್ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದ್ದರು. ಆದರೆ ಅವರ ಅರ್ಜಿಯನ್ನು ಸೆಷನ್ಸ್ ನ್ಯಾಯಾಲಯ ತಿರಸ್ಕರಿಸಿದೆ. ಎರಡನೇ ಆರೋಪಿ(ಎ2) ಅಪ್ಪಣ್ಣ ಅವರಿಗೂ ನೋಟಿಸ್ ನೀಡಿ, ವಿಚಾರಣೆ ನಡೆಸಲು ಸಿದ್ಧತೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಮೈಸೂರಲ್ಲಿ ಡಿಸಿ ಕಚೇರಿಯಲ್ಲಿ ಜಿಲ್ಲಾಧಿಕಾರಿ ಬಗಾದಿ ಗೌತಮ್, ಎಡಿಸಿ ಮಂಜುನಾಥಸ್ವಾಮಿ ಅವರ ಸಿಬ್ಬಂದಿ ಒಳಗೊಂಡಂತೆ ಜಿಲ್ಲಾ ಪಂಚಾಯತ್ ಕಚೇರಿ, ವಸ್ತು ಪ್ರದರ್ಶನ ಪ್ರಾಧಿಕಾರ ಮುಂತಾದ ಕಡೆಗಳಲ್ಲಿ ವಸ್ತು ಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಹೇಮಂತ್‌ಗೌಡ, ಮೈಸೂರು ನಗರ ಯುವಮೋರ್ಚಾ ಪದಾಧಿಕಾರಿಗಳು ಮತಯಾಚನೆ ನಡೆಸಿದರು. ಈ ಸಂದರ್ಭದಲ್ಲಿ ಯುವ ಮೋರ್ಚಾ ನಗರ ಘಟಕದ ಅಧ್ಯಕ್ಷ ಎಂ.ಜೆ.ಕಿರಣ್‌ಗೌಡ, ರಾಜ್ಯ ಉಪಾಧ್ಯಕ್ಷ ಜೈಶಂಕರ್, ನಗರ ಉಸ್ತುವಾರಿ ಗಡ್ಡ ರಮೇಶ್, ಪ್ರಧಾನ ಕಾರ್ಯದರ್ಶಿ ಸಂತೋಷ್ ಕುಮಾರ್, ಮಂಡಲ ಅಧ್ಯಕ್ಷರಾದ ಮಧುಕುಮಾರ್, ಲೋಹಿತ್ ಪ್ರಸಾದ್, ಉಪಾಧ್ಯಕ್ಷರಾದ ಹರ್ಷ, ಧನರಾಜ್ ಇನ್ನಿತರರು ಹಾಜರಿದ್ದರು.

ಚೌಡಮ್ಮ ನಿಧನ



ಮೈಸೂರು, ಮೇ 10- ಮೈಸೂರು ನಗರ ಪಡುವಾರಹಳ್ಳಿಯ ಲೇಟ್ ಮರಿಗೌಡರ ಪತ್ನಿ ಚೌಡಮ್ಮ(ದುಂಡಮ್ಮ-80) ಅವರು ಇಂದು ಸಂಜೆ ನಿಧನ ಹೊಂದಿದ್ದಾರೆ.

ಮೃತರು ಪುತ್ರ, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಬುಧವಾರ ಬೆಳಗ್ಗೆ 11.30ಕ್ಕೆ ಗೋಕುಲಂ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗೋಪಾಲ್



ಮೈಸೂರು, ಮೇ 10- ಮೈಸೂರು ತಾಲೂಕು ಇಲವಾಲ ಗ್ರಾಮದ ನಿವಾಸಿ ಜಿ.ಗೋಪಾಲ್(62) ಅವರು ಇಂದು ನಿಧನರಾದರು. ಮೃತರು ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಬುಧವಾರ ಮಧ್ಯಾಹ್ನ 1ಕ್ಕೆ ಇಲವಾಲ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸರ್ಕಾರಿ ನೇಮಕಾತಿಗಳ ಅಕ್ರಮ ಆರೋಪ ಸಂಬಂಧ ಸೂಕ್ತ ತನಿಖೆಗೆ ಆಗ್ರಹ

ಮೈಸೂರು ವಿವಿ ಸಂಶೋಧಕರ ಸಂಘ, ದಲಿತ ವಿದ್ಯಾರ್ಥಿ ಒಕ್ಕೂಟದ ಪ್ರತಿಭಟನೆ



ಮೈಸೂರು,ಮೇ 10(ಪಿಎಂ)- ಸಬ್‌ಇನ್ಸ್‌ಪೆಕ್ಟರ್ ನೇಮಕಾತಿ, ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಸೇರಿದಂತೆ ಸರ್ಕಾರಿ ನೇಮಕಾತಿಗಳ ಅಕ್ರಮ ಆರೋಪ ಸಂಬಂಧ ಸೂಕ್ತ ತನಿಖೆ ನಡೆಸಬೇಕೆಂದು ಒತ್ತಾಯಿಸಿ ಮೈಸೂರು ವಿವಿ ಸಂಶೋಧಕರ ಸಂಘ ಮತ್ತು ದಲಿತ ವಿದ್ಯಾರ್ಥಿ ಒಕ್ಕೂಟದ ಜಂಟಿ ಆಶ್ರಯದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ವಿವಿ ಮುಖ್ಯದ್ವಾರದ ರಾಷ್ಟ್ರಕವಿ ಕುವೆಂಪು ಪ್ರತಿಮೆ ಆವರಣದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಸರ್ಕಾರ ನೇಮಕಾತಿಗಳ ಸಂಬಂಧ ಕೇಳಿ ಬಂದಿರುವ ಅಕ್ರಮ ಆರೋಪ ಕುರಿತಂತೆ ಸೂಕ್ತ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು.

ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ನಡೆದಿರುವ ಅಕ್ರಮ ಸಂಬಂಧ ಹಾಲಿ ಹೈಕೋರ್ಟ್ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತನಿಖೆಗೆ ಆದೇಶಿಸಬೇಕು. ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ನಡೆದಿರುವ ಆರೋಪದ ಹಿನ್ನೆಲೆಯಲ್ಲಿ ಮರು ಪರೀಕ್ಷೆ ನಡೆಸಬೇಕು. ವಿಶ್ವವಿದ್ಯಾನಿಲಯ ಹಾಗೂ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಕೂಡಲೇ ಪಾರದರ್ಶಕವಾಗಿ ಭರ್ತಿ ಮಾಡಬೇಕೆಂದು ಆಗ್ರಹಿಸಿದರು.

ಸರ್ಕಾರದ ನೇಮಕಾತಿಗಳಲ್ಲಿ ಜಾತಿ, ಹಣ, ರಾಜಕೀಯ ಪ್ರಬಲರು ಹಿಂಬಾಗಿಲಿನಿಂದ ಹುದ್ದೆಗಳನ್ನು ಗಿಟ್ಟಿಸಿಕೊಳ್ಳುತ್ತಿದ್ದು, ಇದರಿಂದ ಶ್ರಮಪಟ್ಟು ಓದಿದ ಬಡ ಪ್ರತಿಭಾವಂತರಿಗೆ ಅನ್ಯಾಯವಾಗುತ್ತಿದೆ. 45 ವರ್ಷಗಳಲ್ಲಿ ದಾಖಲೆಯ ನಿರುದ್ಯೋಗ ಸೃಷ್ಟಿಯಾಗಿರುವ ಈ ಸಂದರ್ಭದಲ್ಲಿ ಸರ್ಕಾರ ನಡೆಸುವ ಕೆಲವೇ ಕೆಲವು ನೇಮಕಾತಿಗಳು ಹಣಕ್ಕೆ ಮಾರಾಟವಾಗುತ್ತಿವೆ ಎಂದು ಆರೋಪಿಸಿದರು.

ಇದಕ್ಕೂ ಮುನ್ನ ಮಾನಸ ಗಂಗೋತ್ರಿಯ ಬುದ್ಧನ ಪ್ರತಿಮೆ ಆವರಣದಿಂದ ಕುವೆಂಪು ಪ್ರತಿಮೆ ಆವರಣದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ಸಂಘದ ಅಧ್ಯಕ್ಷ ನಟರಾಜ್ ಶಿವಣ್ಣ, ಪ್ರಧಾನ ಕಾರ್ಯದರ್ಶಿ ಕುಮಾರ್ ಕಲ್ಲಹಳ್ಳಿ, ಮಾಜಿ ಅಧ್ಯಕ್ಷ ಸೋಸಲೆ ಮಹೇಶ್, ಉಪಾಧ್ಯಕ್ಷ ರಾಜೇಶ್, ಸಂಶೋಧಕರಾದ ಪ್ರಿಯದರ್ಶಿನಿ, ರಂಜಿತಾ ಸೇರಿದಂತೆ ವಿವಿಯ ವಿದ್ಯಾರ್ಥಿಗಳು ನೂರಾರು ಸಂಖ್ಯೆಯಲ್ಲಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಅರಮನೆ ವೆಬ್‌ಸೈಟ್ ವಿಳಾಸ ಬದಲು



ಮೈಸೂರು, ಮೇ 10(ಎಸ್‌ಬಿಡಿ)- ಮೈಸೂರು ಅರಮನೆ ವೆಬ್‌ಸೈಟ್ ವಿಳಾಸ ಬದಲಾಗಿದೆ ಈ ಹಿಂದೆ https://mysorepalace.gov.in ವಿಳಾಸದಲ್ಲಿ ಅರಮನೆಗೆ ಸಂಬಂಧಿಸಿದ ಮಾಹಿತಿ ಹಾಗೂ ಆನ್‌ಲೈನ್ ಟಿಕೆಟ್ ಖರೀದಿಗೆ ಅವಕಾಶವಿತ್ತು. ಆದರೆ ರಾಜ್ಯ ಸರ್ಕಾರದ ಇ-ಗೌರ್ನೆನ್ಸ್ ಸಂಸ್ಥೆಯವರು ಅರಮನೆ ವೆಬ್‌ಸೈಟ್ ವಿಳಾಸವನ್ನು https://mysorepalace.karanataka.gov.in ಎಂದು ಬದಲಾಯಿಸಿದ್ದು, ಇನ್ನು ಮುಂದೆ ಈ ವೆಬ್‌ಸೈಟ್ ಸಂಪರ್ಕಿಸಿ, ಸೇವೆ ಪಡೆಯುವಂತೆ ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಎಸ್‌ಐ ನೇಮಕಾತಿ ಪರೀಕ್ಷೆ ಅಕ್ರಮ ಸಂಬಂಧ

ಪಾರದರ್ಶಕ ತನಿಖೆಗೆ ಆಗ್ರಹಿಸಿ ಎನ್‌ಎಸ್‌ಯುಐ ಪ್ರತಿಭಟನೆ

ಮೈಸೂರು,ಮೇ 10(ಪಿಎಂ)- ಸಬ್‌ಇನ್ಸ್‌ಪೆಕ್ಟರ್ ನೇಮಕಾತಿ ಪರೀಕ್ಷೆ ಅಕ್ರಮ ಸಂಬಂಧ ಪಾರದರ್ಶಕ ತನಿಖೆ ನಡೆಸುವಂತೆ ಒತ್ತಾಯಿಸಿ ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ (ಎನ್‌ಎಸ್‌ಯುಐ) ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಪಿಎಸ್‌ಐ ನೇಮಕಾತಿ ಅಕ್ರಮ ಸಂಬಂಧ ಸರ್ಕಾರದ ಪ್ರಭಾವಿಗಳೇ ಭಾಗಿಯಾಗಿರುವ ಪ್ರಬಲ ಆರೋಪ ಕೇಳಿ ಬರುತ್ತಿದ್ದು, ಈ ಬಗ್ಗೆ ಸೂಕ್ತ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಇದು ಮಾತ್ರವಲ್ಲದೆ, ಎಫ್‌ಡಿಎ, ಲೋಕೋಪಯೋಗಿ ಜೆಇ ನೇಮಕಾತಿ ಸೇರಿದಂತೆ ಇನ್ನಿತರ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲೂ ಅಕ್ರಮದ ಆರೋಪ ಕೇಳಿ ಬರುತ್ತಿದೆ. ಇದರಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗಲಿದೆ. ಹಾಗಾಗಿ ಯಾವುದೇ ಅಕ್ರಮಕ್ಕೆ ಆಸ್ಪದ ನೀಡದೇ ಪಾರದರ್ಶಕವಾಗಿ ಪರೀಕ್ಷೆ ನಡೆಸಿ, ನೇಮಕಾತಿ ಪ್ರಕ್ರಿಯೆ ನಡೆಸಬೇಕೆಂದು ಆಗ್ರಹಿಸಿದರು. ಎನ್‌ಎಸ್‌ಯುಐ ನಗರಾಧ್ಯಕ್ಷ ಎನ್.ಮನೋಜ್, ಉಪಾಧ್ಯಕ್ಷ ರಜತ್, ವಿವೇಕ್, ಹರಿಚರಣ್, ಹರ್ಷಿತ್, ಎನ್.ಮಂಜುನಾಥ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆ ಅಕ್ರಮ ಸಂಬಂಧ

ಸೂಕ್ತ ತನಿಖೆಗೆ ಆಗ್ರಹಿಸಿ ಎಐಡಿಎಸ್‌ಓ ಪ್ರತಿಭಟನೆ




ಮೈಸೂರು,ಮೇ 10(ಪಿಎಂ)- ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆ ಅಕ್ರಮ ಸಂಬಂಧ ಸೂಕ್ತ ತನಿಖೆ ನಡೆಸಬೇಕೆಂದು ಒತ್ತಾಯಿಸಿ ಎಐಡಿಎಸ್‌ಓ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದ್ದು, ಈ ಅಕ್ರಮದಲ್ಲಿ ಭಾಗಿಯಾಗಿದ್ದರು ಎನ್ನಲಾದ ಕರ್ನಾಟಕ ವಿವಿ ಕುಲಸಚಿವರನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ. ಪರೀಕ್ಷೆಗೆ ಸಿದ್ಧಪಡಿಸಿದ್ದ ಭೂಗೋಳಶಾಸ್ತ್ರ ವಿಷಯದ 18 ಪ್ರಶ್ನೆಗಳು ಸೋರಿಕೆ ಆಗಿದ್ದವು. ಈಗ ಅರ್ಥಶಾಸ್ತ್ರ, ಸಮಾಜಶಾಸ್ತ್ರ ಹಾಗೂ ಇಂಗ್ಲೀಷ್ ಪ್ರಶ್ನೆ ಪತ್ರಿಕೆಗಳೂ ಸೋರಿಕೆಯಾಗಿವೆ ಎಂಬ ಅನುಮಾನ ವ್ಯಕ್ತವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಹಗರಣದಲ್ಲಿ ಸಣ್ಣ ಮೀನುಗಳನ್ನು ಹಿಡಿದು ತಿಮಿಂಗಿಲಗಳನ್ನು ಬಿಟ್ಟಂತೆ ಆಗಬಾರದು. ಈ ಅಕ್ರಮದ ಕುರಿತು ಸರಿಯಾದ ತನಿಖೆ ನಡೆಸಿ, ಭಾಗಿಯಾಗಿರುವ ಎಲ್ಲರನ್ನೂ ಬಂಧಿಸಿ, ಸೂಕ್ತ ಶಿಕ್ಷೆ ನೀಡಬೇಕೆಂದು ಒತ್ತಾಯಿಸಿದರು.

ಎಐಡಿಎಸ್‌ಓ ಜಿಲ್ಲಾಧ್ಯಕ್ಷ ಸುಭಾಷ್, ಜಿಲ್ಲಾ ಕಾರ್ಯದರ್ಶಿ ಚಂದ್ರಕಲಾ, ಉಪಾಧ್ಯಕ್ಷೆ ಆಸಿಯಾಬೇಗಂ, ಜಿಲ್ಲಾ ಸಮಿತಿಯ ಸ್ವಾತಿ, ಬಸವ, ಚಂದನ, ಹೇಮಾ, ಹೇಮಲತಾ, ಚಂದ್ರಿಕಾ, ಚಂದನ, ತೇಜಸ್ವಿನಿ, ಉಲ್ಲಾಸ್, ವಿಕಾಸ್, ಪರೀಕ್ಷೆ ಬರೆದ ಅಭ್ಯರ್ಥಿಗಳಾದ ಡಾ.ಪುರುಷೋತ್ತಮ್, ಪ್ರದೀಪ್‌ಕುಮಾರ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಶಾಸ್ತ್ರ, ಸಂಪ್ರದಾಯಗಳ ಅನುಷ್ಠಾನ ವಿಪ್ರರ ಕರ್ತವ್ಯ



ಮೈಸೂರು, ಮೇ 10(ಹೊಮ್ಮ)- ಶಾಸ್ತ್ರ ಸಂಪ್ರದಾಯ, ಆಚಾರಗಳನ್ನು ಅನುಷ್ಠಾನ ಮಾಡುವುದು ಬ್ರಾಹ್ಮಣ ಸಮುದಾಯದ ಕರ್ತವ್ಯ ಎಂದು ಶೃಂಗೇರಿ ದಕ್ಷಿಣಾಮ್ನಾಯ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರು ತಿಳಿಸಿದರು.

ಶ್ರೀಗಳು ಮೈಸೂರು ಚಾಮುಂಡಿಪುರಂನಲ್ಲಿರುವ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ಶಾರದಾನಿಕೇತನಕ್ಕೆ ಭೇಟಿ ನೀಡಿ ಭಕ್ತ ವೃಂದಕ್ಕೆ ಆಶೀರ್ವಚನ ನೀಡಿದರು.

ಎಷ್ಟೋ ಜನ್ಮಗಳಲ್ಲಿ ಮನುಷ್ಯ ಜನ್ಮ ಶ್ರೇಷ್ಠವಾದದ್ದು. ಅದರಲ್ಲೂ ಬ್ರಾಹ್ಮಣ ಜನ್ಮ ಅತೀ ಶ್ರೇಷ್ಠವಾದದ್ದು. ಅದನ್ನು ಸಾರ್ಥಕಗೊಳಿಸಿಕೊಳ್ಳಬೇಕಾದ ಜವಾಬ್ದಾರಿ ಎಲ್ಲಾ ವಿಪ್ರರಲ್ಲಿದೆ. ಏಕೆಂದರೆ ಶಾಸ್ತ್ರಗಳಲ್ಲಿ ಬ್ರಾಹ್ಮಣನಾದವನಿಗೆ ವಿಶೇಷ ಅಧಿಕಾರವನ್ನು ಮಹರ್ಷಿಗಳು ಕಲ್ಪಿಸಿದ್ದಾರೆ. ಹಾಗಾಗಿ ವಿಪ್ರನಾದವನು ಶಾಸ್ತ್ರ, ಸಂಪ್ರದಾಯಗಳ ಅನುಷ್ಠಾನವನ್ನು ಮಾಡಬೇಕು ಎಂದು ಅನುಗ್ರಹಿಸಿದರು.

ಬ್ರಾಹ್ಮಣನಿಗೆ ಲೋಕ ಕಲ್ಯಾಣಾರ್ಥವಾಗಿ ಕರ್ತವ್ಯಗಳನ್ನು ನಿರ್ವಹಿಸಬೇಕಿದ್ದು, ಅದು ಸದಾಚಾರಶೀಲನೆಯಿಂದ ಮಾತ್ರ ಸಾಧ್ಯ. ಈ ಸದಾಚಾರ ಪಾಲನೆಯಿಂದ ನಮಗೆ ಅಲೌಕಿಕವಾದ ಸಾಮರ್ಥ್ಯ ಸಿಗುತ್ತದೆ. ಈ ಸಾಮರ್ಥ್ಯದಿಂದ ನಾವು ಏನಾದರೂ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದು ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ತಿಳಿಸಿದರು.

ಈ ಸಂಪ್ರದಾಯ, ಸಂಸ್ಕಾರ, ಆಚಾರಗಳನ್ನು ಹಾಕಿಕೊಟ್ಟಿರುವುದು ಮಹರ್ಷಿಗಳು. ಅವರು ಕಠಿಣ ತಪಸ್ಸುಗಳನ್ನು ಮಾಡಿ, ಶಿವನನ್ನು ಸಾಕ್ಷಾತ್ಕರಿಸಿಕೊಂಡು ಯಾವುದನ್ನು ಮಾಡಬೇಕು, ಯಾವುದನ್ನು ಮಾಡಬಾರದು ಎಂಬುದನ್ನು ತಿಳಿಸಿದ್ದಾರೆ. ಆದರೆ ಇಂದು ಅನೇಕರು ಆಚಾರದ ಬಗ್ಗೆ ವಿತಂಡವಾದ, ಪ್ರಶ್ನೆ ಮಾಡುತ್ತಿದ್ದಾರೆ. ಇಲ್ಲಿ ನಮ್ಮ ಕರ್ತವ್ಯ ಅನುಷ್ಠಾನವೇ ಹೊರತು, ವಿಚಾರ ಮಾಡುವುದಲ್ಲ. ಏಕೆಂದರೆ ಮಹರ್ಷಿಗಳು ಒಂದು ಆಚಾರ ತಿಳಿಸುವಾಗ ಎಲ್ಲಾ ರೀತಿಯ ವಿಚಾರ ಮಾಡಿ ನಮಗೆ ತಿಳಿಸಿದ್ದಾರೆ. ಆದ್ದರಿಂದ ಈಗ ಅದರ ಬಗ್ಗೆ ವಿಚಾರ ಮಾಡುತ್ತಾ ಕಾಲ ಹರಣ ಮಾಡುವ ಬದಲು, ಅದರ ಅನುಷ್ಠಾನದತ್ತ ನಮ್ಮ ಗಮನವನ್ನು ಕೇಂದ್ರೀಕರಿಸಿ, ನಮ್ಮ ಈ ಜನ್ಮವನ್ನು ಸಾರ್ಥಕ್ಯಗೊಳಿಸಿಕೊಳ್ಳಬೇಕು ಎಂದು ಹೇಳಿದರು.


ಆದರೆ ಇತ್ತೀಚೆಗೆ ಲೌಕಿಕ ಬದುಕಿನತ್ತ ವಾಲಿರುವ ಮಂದಿ ಸಾಮಾಜಿಕ ಬದುಕಿನ ಜಂಜಾಟದಲ್ಲಿ ತನ್ನ ಕರ್ತವ್ಯಗಳನ್ನು ಮರೆಯುತ್ತಿದ್ದಾನೆ. ವಿಪ್ರರು ಕನಿಷ್ಠ ಗಾಯತ್ರಿ ಮಂತ್ರದ ಜಪವನ್ನಾದರೂ ಪ್ರತಿ ನಿತ್ಯ ಮಾಡಬೇಕು. ಹೆಂಗಸರೂ ಸಹ ಜಪ ಮಾಡಲು ಮಾರ್ಗಗಳಿವೆ. ಶ್ರೀ ಶಂಕರ ಭಗವತ್ಪಾದರ ಅನೇಕ ರಚನೆಗಳಿದ್ದು, ಪ್ರತಿ ದಿನ ಜಪಗೈದು ಜನ್ಮ ಸಾರ್ಥಕ್ಯಗೊಳಿಸಿಕೊಳ್ಳುವಂತೆ ಶ್ರೀಗಳು ಕರೆ ಕೊಟ್ಟರು.

ಈ ವೇಳೆ ಸಂಘದ ಅಧ್ಯಕ್ಷ ಎಂ.ವಿಶ್ವನಾಥಯ್ಯ, ಶಾಸಕ ಎಸ್.ಎ.ರಾಮದಾಸ್, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ನಗರ ಪಾಲಿಕೆ ಸದಸ್ಯ ಮ.ವಿ.ರಾಮಪ್ರಸಾದ್, ವಿದ್ವಾಂಸರಾದ ಡಾ. ಟಿ.ವಿ.ಸತ್ಯನಾರಾಯಣ, ಮುಖಂಡರಾದ ನಂ.ಶ್ರೀಕಂಠಕುಮಾರ್, ರಾವ್ ಸೋಮಶೇಖರ್, ಟಿ.ಎಸ್.ಗೋಪಿನಾಥ್, ಹೊಮ್ಮ ಮಂಜುನಾಥ್ ಸೇರಿದಂತೆ ಸಾವಿರಾರು ಭಕ್ತಾದಿಗಳು ಪಾಲ್ಗೊಂಡು ಗುರುವಂದನೆ ಸಲ್ಲಿಸಿದರು.

ಕೆಆರ್‌ಎಸ್ ಕಣ್ತುಂಬಿಕೊಂಡ ಸರ್ ಎಂ.ವಿ. ಮರಿಮೊಮ್ಮಗ ಸತೀಶ್ ಮೋಕ್ಷಗುಂಡಂ

ಶ್ರೀರಂಗಪಟ್ಟಣ, ಮೇ 10(ವಿನಯ್ ಕಾರೇಕುರ)–ಸರ್ ಎಂ.ವಿಶ್ವೇಶ್ವರಯ್ಯ ಅವರ ತಮ್ಮನ ಮರಿಮೊಮ್ಮಗ ಸತೀಶ್ ಮೋಕ್ಷಗುಂಡಂ ಮತ್ತು ಕುಟುಂಬ ಕೃಷ್ಣರಾಜಸಾಗರ ಅಣೆಕಟ್ಟೆಗೆ ಸೋಮವಾರ ಭೇಟಿ ನೀಡಿ ಜಲವೈಭವವನ್ನು ಕಣ್ತುಂಬಿಕೊಂಡಿತು.

ಸತೀಶ್ ಮೋಕ್ಷಗುಂಡಂ ಅವರು ಪತ್ನಿ ಲಕ್ಷ್ಮಿ ಹಾಗೂ ಪುತ್ರಿ ದಿವ್ಯಾ ಜೊತೆಗೂಡಿ ಅಣೆಕಟ್ಟೆ ಗೇಟುಗಳು, ಸರ್ ಎಂ.ವಿ.ನಾಲೆ, ಹಿನ್ನೀರು, ಬೃಂದಾವನವನ್ನು ವೀಕ್ಷಿಸಿದರು. ಅಣೆಕಟ್ಟೆ ಮತ್ತು ಗೇಟುಗಳ ಪ್ರಸ್ತುತ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಪಡೆದರು.





ಕಾವೇರಿ ನೀರಾವರಿ ನಿಗಮ ಸಹಾಯಕ ಇಂಜಿನಿಯರ್ ಮಾನಸ ಅವರು ಪ್ರಸ್ತುತ ಅಣೆಕಟ್ಟೆ ಕುರಿತು ಮಾಹಿತಿ ನೀಡಿದರು. ಸತೀಶ್ ಮೋಕ್ಷಗುಂಡಂ ಮಾತನಾಡಿ, ಈ ಅಣೆಕಟ್ಟೆ ಕಟ್ಟಲು ಮೈಸೂರು ಮಹಾರಾಜರ ಕೊಡುಗೆ ಅನನ್ಯ ನಮ್ಮ ಮುತ್ತಾತ ಸರ್ ಎಂ.ವಿ ಅವರ ತಂತ್ರಜ್ಞಾನದ ಕೊಡುಗೆ ಕೂಡ ಸ್ಮರಣೀಯವಾಗಿದೆ. ಮಹಾರಾಜರ ಶ್ರಮ ಮತ್ತು ಸರ್ ಎಂವಿ ಅವರ ಜ್ಞಾನದಿಂದ ಈ ಅಣೆಕಟ್ಟೆ ಇನ್ನೂ ಉತ್ತಮ ಸ್ಥಿತಿಯಲ್ಲಿದೆ. ಆದ್ದರಿಂದ ಇಲ್ಲಿ ಅವರ ಪ್ರತಿಮೆ ನಿರ್ಮಿಸಬೇಕು. ಈ ಬಗ್ಗೆ ಸರ್ಕಾರ ನಿರ್ಧಾರ ಕೈಕೊಳ್ಳಬೇಕು ಎಂದು ಆಗ್ರಹಿಸಿದರು.

ಈ ವೇಳೆ ಕಿರಿಯ ಇಂಜಿನಿಯರ್‌ಗಳಾದ ಗಣೇಶ್, ಅಭಿಲಾಷ್, ಸರ್ಕಾರಿ ನೌಕರರ ಸಂಘದ ಕೆ.ಆರ್.ಸಾಗರ ಯೋಜನಾ ಘಟಕದ ಅಧ್ಯಕ್ಷ ಶಿವಪ್ಪ ಸೇರಿದಂತೆ ಇನ್ನಿತರರು ಹಾಜರಿದ್ದರು.

ಸರ್ಕಾರ ರೈತರ ಬಗ್ಗೆ ಕಾಳಜಿ ವಹಿಸಬೇಕು



ಶ್ರೀರಂಗಪಟ್ಟಣ, ಮೇ 10(ವಿನಯ್ ಕಾರೇಕುರ)–ಪ್ರಕೃತಿ ವಿಕೋಪದಡಿ ಹಾನಿಗೀಡಾದ ರೈತರ ಬೆಳೆಗೆ ಸರ್ಕಾರ ನೀಡುತ್ತಿರುವ ಪರಿಹಾರ ಸಾಲದು, ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ರೈತರ ಬಗ್ಗೆ ಕಾಳಜಿ ವಹಿಸಬೇಕು ಎಂದು ಶಾಸಕ ರವೀಂದ್ರ ಶ್ರೀಕಂಠಯ್ಯ ಹೇಳಿದರು. ತಾಲೂಕಿನ ಚಂದಗಿರಿಕೊಪ್ಪಲು ಗ್ರಾಮದ ಬಳಿ 75 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡ ಅಟ್ಟಿಹಳ್ಳ ಕಾಲುವೆಗೆ ಚಾಲನೆ ನೀಡಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ರೈತರ ಬೆಳೆ ಹಾನಿಯಾದ ಸಂದರ್ಭದಲ್ಲಿ ಅದು ಖರ್ಚು ಮಾಡಿರುವ ಹಣವಾದ್ದಾರೂ ಸರ್ಕಾರ ನೀಡುವಂತೆ ಒತ್ತಾಯಿಸಲಾಗಿದೆ. ಸರ್ಕಾರ ಈ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಿದೆ. ಬಿಜೆಪಿ ಸರ್ಕಾರ ರೈತರ ಬಗ್ಗೆ ಇನ್ನೂ ಹೆಚ್ಚಿನ ಕಾಳಜಿ ವಹಿಸಬೇಕು ಎಂದರು.

ಕಳೆದ ಬಾರಿ ಮಳೆ ಹಾನಿಯಿಂದ ಉಂಟಾದ ಮನೆ ಕುಸಿತ ಸಂತ್ರಸ್ತ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ ನೀಡಲಾಗಿತ್ತು. ಅದೇ ಮಾದರಿಯಲ್ಲೇ ಈ ಬಾರಿಯೂ ಸಹ ಪರಿಹಾರ ನೀಡುವಂತೆ ಸರ್ಕಾರದ ಗಮನ ಸೆಳೆಯಲಾಗಿದೆ. ಒಂದೆರಡು ದಿನಗಳಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಕಳೆದ ವರ್ಷ ಅತಿ ಹೆಚ್ಚು ಮಳೆಯಿಂದಾಗಿ ನಾಲೆ ಒಡೆದು ಈ ಭಾಗದ ರೈತರ ಜಮೀನುಗಳಿಗೆ ನೀರು ನುಗ್ಗಿ ಹುಚ್ಚು ತೊಂದರೆಯಾಗಿತ್ತು ಈ ಸಂಬಂಧ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಿಗೆ ತುರ್ತು ಪರಿಸ್ಥಿತಿ ಎಂದು ಪರಿಗಣಿಸುವಂತೆ ಒತ್ತಾಯಿಸಲಾಗಿತ್ತು. ಹಾಗಾಗಿ ಸುಮಾರು 75 ಲಕ್ಷ ರೂ. ವೆಚ್ಚದಲ್ಲಿ ಈ ಕಾಲುವೆ ನಿರ್ಮಾಣ ಮಾಡಲಾಗಿದೆ. ಇದರಿಂದ ಚಂದಗಿರಿಕೊಪ್ಪಲು ಹಾಗೂ ಬಲ್ಲೇನಹಳ್ಳಿ ಗ್ರಾಮಗಳ ರೈತರ ನೂರಾರು ಎಕರೆ ಪ್ರದೇಶಗಳಿಗೆ ನೀರು ಪೂರೈಕೆಯಾಗಲಿದೆ ಎಂದು ತಿಳಿಸಿದರು.

ಈ ವೇಳೆ ಪಿಎಲ್‌ಡಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಕುಮಾರ್, ಆಲೆಮನೆ ಶ್ರೀಕಂಠು, ನಾಗೇಂದ್ರಣ್ಣ ಆದಿಶೇಷ, ಗ್ರಾಪಂ ಸದಸ್ಯ ಜಗದೀಶ್, ಸುರೇಶ್, ಹರ್ಷವರ್ಧನ್ ಇತರರಿದ್ದರು.

ಭಾರೀ ಮಳೆಗೆ ಸಕ್ಕರೆ ನಾಡು ತತ್ತರ

ಮಂಡ್ಯ,ಮೇ10(ಮೋಹನ್‌ರಾಜ್)–ಭಾರೀ ಮಳೆಗೆ ಮಂಡ್ಯ ನಗರ ತತ್ತರಿಸಿದ್ದು, ಮರಗಳು–ವಿದ್ಯುತ್ ಕಂಬಗಳು ಧರೆಗುರುಳಿ, ಮನೆಗಳು ಜಖಂಗೊಂಡಿವೆ. ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಮಂಗಳವಾರ ಸಂಜೆ 4ರಿಂದ 5ಗಂಟೆಯವರೆಗೆ ಸುರಿದ ಭಾರೀ ಮಳೆಗೆ ಬೃಹತ್ ಮರಗಳು ಧರೆಗುರುಳಿದ ಪರಿಣಾಮ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಸಂಚಾರ ಅಸ್ತವ್ಯಸ್ತಗೊಂಡಿತು. ನಗರದ ಮೈಸೂರ್ ಶಾಲೆ ಆವರಣ, ಅಗ್ನಿಶಾಮಕ ಕಚೇರಿ ಬಳಿಯೂ ಮರಳ ಧರೆಗುರುಳಿದ್ದರಿಂದ ಸಂಪೂರ್ಣ ವಾಹನ ದಟ್ಟನೆ ಕಂಡುಬಂತು.

ವಿದ್ಯುತ್ ಕಂಬಗಳು ನೆಲಕ್ಕುರುಳಿ ಮಂಡ್ಯ–ಕೀಲಾರ–ಬೆಸಗರಹಳ್ಳಿ ರಸ್ತೆಯೂ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಜನ ಹರಸಾಹಸ ಪಟ್ಟು ಸಂಚರಿಸುವಂತಾಯಿತು. ಇನ್ನು ಕೀಲಾರ ಕೊಮ್ಮೇರಹಳ್ಳಿ ಮಾರ್ಗವಾಗಿ ಕೆರಗೋಡಿಗೆ ಸಂಪರ್ಕಿಸುವ ರಸ್ತೆಯಲ್ಲಿ ಬೃಹತ್ ಮರಗಳು ಧರೆಗುರುಳಿದ್ದರಿಂದ ಅನೇಕ ಗ್ರಾಮಗಳು ಸಂಪರ್ಕ ಕಡಿದು ಕೊಂಡು ಕೊರೊನಾ ಸಂದರ್ಭದ ಸೀಲ್‌ಡೌನ್ ರೀತಿ ಭಾಸವಾಯಿತು. ಗ್ರಾಮದಿಂದ ಹೊರ–ಒಳ ಹೋಗಲು ಜನರು ಪರದಾಡುವಂತಾಗಿತು. ಅಲ್ಲದೆ ನಗರದ ತಗ್ಗುಪ್ರದೇಶದಲ್ಲಿ ಮನೆಗಳಿಗೆ ನೀರು ನುಗ್ಗಿದ ಪರಿಣಾಮ ಜನರು ಹೈರಾಣಾದರು. ಕೆಲವೆಡೆ ಸ್ವಾಗತ ಕಮಾನುಗಳು, ಫ್ಲೆಕ್ಸ್‌ಗಳು ಧರೆಗುರುಳಿ ಸಂಚಾರ ಅಸ್ತವ್ಯಸ್ತ ವಾಯಿತು.



ಜನಪ್ರತಿನಿಧಿಗಳು, ಅಧಿಕಾರಿಗಳಲ್ಲಿ ಸಮನ್ವಯತೆ ಅಗತ್ಯ



ಮಂಡ್ಯ, ಮೇ 10–ಸ್ಥಳೀಯ ಸರ್ಕಾರಿ ವ್ಯವಸ್ಥೆಯಲ್ಲಿ ಚುನಾಯಿತ ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಸಿಬ್ಬಂದಿ ನಡುವೆ ಸಮನ್ವಯತೆ ಅಗತ್ಯ. ಪ್ರತಿಯೊಬ್ಬರೂ ಸಹಕಾರದಿಂದ ಕೈಜೋಡಿಸಿ ಕೆಲಸ ನಿರ್ವಹಿಸಿದಾಗ ಸರ್ಕಾರದ ಯೋಜನೆಗಳನ್ನು ಅರ್ಹರಿಗೆ ತಲುಪಿಸಲು ಸಾಧ್ಯವಾಗುತ್ತದೆ ಎಂದು ಜಿಪಂ ಸಿಇಓ ದಿವ್ಯಾ ಪ್ರಭು ತಿಳಿಸಿದರು.

ಮಂಡ್ಯ ತಾಲೂಕು ಪಂಚಾಯತ್ ಸಂಯುಕ್ತಾಶ್ರಯದಲ್ಲಿ ಕಾವೇರಿ ಸಭಾಂಗಣದಲ್ಲಿ ನಡೆದ 'ಪಂಚಾಯತ್ ರಾಜ್' ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮೂರು ಹಂತದ ವ್ಯವಸ್ಥೆಯಲ್ಲಿ ಎಲ್ಲಾ ವರ್ಗದ ಜನರನ್ನೂ ಗಣನೆಗೆ ತೆಗೆದುಕೊಂಡಾಗ ಮಾತ್ರ ಪಂಚಾಯತ್ ರಾಜ್ ವ್ಯವಸ್ಥೆಯು ಯಶಸ್ವಿಯಾಗಲು ಸಾಧ್ಯ. ಈ ನಿಟ್ಟಿನಲ್ಲಿ ಆಡಳಿತ ವ್ಯವಸ್ಥೆಯಲ್ಲಿ ಪರಸ್ಪರ ಸಂವಹನದ ಹಾದಿಯೂ ಮುಕ್ತವಾಗಿರಬೇಕು. ಪ್ರತಿಯೊಬ್ಬರ ಅಭಿಪ್ರಾಯಕ್ಕೂ ಮನ್ನಣೆ ನೀಡಬೇಕು ಎಂದರು.

ಬಲವಂತರಾಯ್ ಮೆಹತಾ ಸಮಿತಿ ಶಿಫಾರಸಿನ ಅನ್ವಯ ದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಯಶಸ್ವಿಯಾಗಿ ಜಾರಿಗೊಳಿಸಿದ ಮುಂಚೂಣಿ ರಾಜ್ಯ ಕರ್ನಾಟಕ ಎಂಬ ಹೆಮ್ಮೆ ನಮ್ಮದು ಎಂದರು.

ಇದೇ ವೇಳೆಯಲ್ಲಿ ಜಿಪಂ ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ ಮಾತನಾಡಿ, ದೇಶದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ನಡೆದು ಬಂದ ಹಾದಿಯನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ಉಪಕಾರ್ಯದರ್ಶಿ(ಆಡಳಿತ) ಸರಸ್ವತಿ, ಉಪ ಕಾರ್ಯದರ್ಶಿ(ಅಭಿವೃದ್ಧಿ) ಜಿ.ಧನರಾಜು, ಯೋಜನಾ ನಿರ್ದೇಶಕ ಧನರಾಜ್ ಬೊಳಾರೆ, ಸಹಾಯಕ ಕಾರ್ಯದರ್ಶಿ ಸುಬ್ರಹ್ಮಣ್ಯ ಶರ್ಮ ಹಾಗೂ ತಾಲೂಕು ಕಾರ್ಯನಿರ್ವಾಹಕ ಅಧಿಕಾರಿ ಎ.ಬಿ.ವೇಣು ಸೇರಿದಂತೆ ಇತರರು ಉಪಸ್ಥಿತರಿದ್ದರು.

ಗಣಿಗಾರಿಕೆ ಸ್ಥಗಿತಕ್ಕೆ ಆಗ್ರಹಿಸಿ ಪ್ರತಿಭಟನೆ

ಪಾಂಡವಪುರ, ಮೇ 10–ಗ್ರಾಮದ ಸುತ್ತಮುತ್ತ ಗಣಿಗಾರಿಕೆ ಸ್ಥಗಿತಕ್ಕೆ ಆಗ್ರಹಿಸಿ ತಾಲೂಕಿನ ಕನಗನಮರಡಿ ಗ್ರಾಮಸ್ಥರು ಎತ್ತಿನಗಾಡಿ ಯೊಂದಿಗೆ ಪಟ್ಟಣದಲ್ಲಿ ಪ್ರತಿಭಟಿಸಿದರು.

ಕಾಂಗ್ರೆಸ್ ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ಹೆಚ್.ಎನ್.ರವೀಂದ್ರ ನೇತೃತ್ವದಲ್ಲಿ ಕನಗನಮರಡಿ ಗ್ರಾಮಸ್ಥರು ಎತ್ತಿನಗಾಡಿ ಸಮೇತ ಪಟ್ಟಣಕ್ಕೆ ಆಗಮಿಸಿ ಕಚೇರಿಯ ಮುಂದೆಯೇ ಎತ್ತುಗಳನ್ನು ಕಟ್ಟಿ ಪ್ರತಿಭಟಿಸಿದರು. ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ, ತಹಸೀಲ್ದಾರ್ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿಸಿದರು.

ಬಳಿಕ ಶ್ರೀರಂಗಪಟ್ಟಣ–ಜೇವರ್ಗಿ ಮುಖ್ಯ ರಸ್ತೆ ತಡೆದು ಪ್ರತಿಭಟಿಸಿದರು. ಒಂದು ಗಂಟೆಗೂ ಅಧಿಕ ಕಾಲ ರಸ್ತೆ ತಡೆದು ಸ್ಥಳದಲ್ಲೇ ಊಟ ಮಾಡಿ ಆಕ್ರೋಶ ವ್ಯಕ್ತಪಡಿಸಿದರು. ತಹಸೀಲ್ದಾರ್ ಹಾಗೂ ಉಪವಿಭಾಗಾಧಿಕಾರಿಗಳು ಸ್ಥಳಕ್ಕೆ ಆಗಮಿಸಬೇಕು ಎಂದು ಪಟ್ಟು ಹಿಡಿದರು. ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ಹೆಚ್.ಎನ್.ರವೀಂದ್ರ ಮಾತನಾಡಿ, ಕನಗನಮರಡಿ ಗ್ರಾಮದ ಹೊರವಲಯದಲ್ಲಿ ನಡೆಯುತ್ತಿರುವ ಕಲ್ಲುಗಣಿಗಾರಿಕೆಯಿಂದ ಸಾಕಷ್ಟು ಸಮಸ್ಯೆ ಉಂಟಾಗುತ್ತಿದೆ. ಅರಣ್ಯ ಪ್ರದೇಶದ ಪಕ್ಕದಲ್ಲಿಯೇ ಗಣಿಗಾರಿಕೆ ನಡೆಸುತ್ತಿದ್ದಾರೆ. ಜನ–ಜಾನುವಾರು ಸೇರಿದಂತೆ ಮನೆಗಳು, ಕೆರೆ–ಕಟ್ಟೆಗಳು ನಾಲೆಯ ಅಕ್ವಡೆಟ್, ಹುಲಿಕೆರೆ ಸುರಂಗಕ್ಕೆ ತೊಂದರೆ ಎದುರಾಗಿದೆ. ಹಾಗಾಗಿ ಇಲ್ಲಿನ ಗಣಿಗಾರಿಕೆ ಸ್ಥಗಿತಗೊಳಿಸುವಂತೆ ಆಗ್ರಹಿಸಿ ಗ್ರಾಮಸ್ಥರು 38 ದಿನಗಳ ಕಾಲ ಅಹೋರಾತ್ರಿ ಪ್ರತಿಭಟನೆ ನಡೆಸಿದರೂ ಸಹ ಸಂಬಂಧಿಸಿದ ಜಿಲ್ಲಾಧಿಕಾರಿಗಳು ಮಾತ್ರ ಸ್ಥಳಕ್ಕೆ ಆಗಮಿಸಿ ಜನರ ಸಮಸ್ಯೆ ಕೇಳಿಲ್ಲ. ಇದೆಲ್ಲವನ್ನು ನೋಡಿದರೆ ಇವರು ಸಹ ಅಕ್ರಮದಲ್ಲಿ ಭಾಗಿಯಾಗಿದ್ದಾರೆ ಅನ್ನುವ ಅನುಮಾನ ಮೂಡುತ್ತಿದೆ ಎಂದು ಆರೋಪಿಸಿದರು.



ಗಣಿಗಾರಿಕೆ ಸ್ಥಗಿತಗೊಳಿಸುವಂತೆ ಆಗ್ರಹಿಸಿ ಕನಗನಮರಡಿ ಗ್ರಾಮಸ್ಥರು ಪಾಂಡವಪುರದಲ್ಲಿ ಪ್ರತಿಭಟಿಸಿ ರಸ್ತೆಯಲ್ಲಿಯೇ ಕುಳಿತು ಊಟ ಮಾಡಿದರು.

ಕನಗನಮರಡಿ ಗ್ರಾಮದಲ್ಲಿ ನಡೆಯುತ್ತಿರುವ ಗಣಿಗಾರಿಕೆಯನ್ನು ಶಾಶ್ವತವಾಗಿ ಸ್ಥಗಿತಗೊಳಿಸುವವರೆಗೂ ಪ್ರತಿಭಟನೆ ನಡೆಸುತ್ತೇವೆ. ಈಗಲಾದರೂ ಸಂಬಂಧಿಸಿದ ಅಧಿಕಾರಿಗಳು, ಜಿಲ್ಲಾಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿ ಕ್ರಮಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಉಗ್ರವಾಗಿ ಪ್ರತಿಭಟಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಬಳಿಕ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ತಹಸೀಲ್ದಾರ್ ನಯನ, ಪ್ರತಿಭಟನಾಕಾರರೊಂದಿಗೆ ಚರ್ಚಿಸಿದರು. ಸಂಜೆ 5.30 ಆದರೂ ಸಹ ಪ್ರತಿಭಟನೆ ಮುಂದುವರೆದಿತ್ತು. ಪ್ರತಿಭಟನೆಯಲ್ಲಿ ಗ್ರಾಮ ಮುಖಂಡರಾದ ಬಲರಾಮೇಗೌಡ, ಹೊಸಕೋಟೆ ವಿಜಯ್ ಕುಮಾರ್, ಗ್ರಾಪಂ ಅಧ್ಯಕ್ಷ ಸ್ವಾಮೀಗೌಡ, ಸದಸ್ಯ ರಂಗಸ್ವಾಮಿ, ಜಯರಾಮೇಗೌಡ ಸೇರಿದಂತೆ ಹಲವರಿದ್ದರು.

ನಮ್ಮ ತಂಟೆಗೆ ಬಂದರೆ ಬೀದಿ ಪಾಲಾಗ್ತಾರೆ...

● ಮಾಜಿ ಸಿಎಂ ಕುಮಾರಸ್ವಾಮಿ ಎಚ್ಚರಿಕೆ ● ಬಿ.ಎಲ್.ಶಂಕರ್ ಕಾಂಗ್ರೆಸ್‌ಗೆ ಹೋಗಿ 20 ವರ್ಷವಾಯ್ತು, ಅಲ್ಲಿ ಏನಾಗಿದ್ದಾರೆ

ಬೆಂಗಳೂರು, ಮೇ10(ಕೆಎಂಶಿ)–ಪಕ್ಷಕ್ಕೆ ಡ್ಯಾಮೇಜ್ ಮಾಡಿದರೆ ಅಥವಾ ನಮ್ಮ ತಂಟೆಗೆ ಬಂದರೆ ಅವರೇ ಬೀದಿಪಾಲಾಗುತ್ತಾರೆ ಎಂದು ಅಸಮಾಧಾನಿತರ ವಿರುದ್ಧ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಕಿಡಿಕಾರಿದ್ದಾರೆ.



ನೆಲಮಂಗಲ ಸಮೀಪದಲ್ಲಿ ಜನತಾ ಜಲಧಾರೆ ಸಮಾವೇಶ ನಡೆಯುವ ಮೈದಾನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಡಿಎಸ್ ತೊರೆಯಲು ಮುಂದಾಗಿರುವ ಹಾಗೂ ಪಕ್ಷದ ವಿರುದ್ಧ ಮಾತನಾಡುತ್ತಿರುವವರಿಗೆ ಎಚ್ಚರಿಕೆ ನೀಡಿದರು.

ನಿಖಿಲ್ ಸೋಲಿಗೆ ಕಾರ್ಯಕರ್ತರು ಕಾರಣರಲ್ಲ: ನಿಖಿಲ್ ಸೋಲಿಗೆ ಕುಟುಂಬದವರ ನಿರ್ಧಾರವೇ ಕಾರಣ ಎಂಬ ಮರಿತಿಬ್ಬೇಗೌಡ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ನಾನು ಕಾರ್ಯಕರ್ತರಿಂದಾಗಿ ನಿಖಿಲ್ ಸೋಲು ಅನುಭವಿಸಿದ ಅಂತಾ ಹೇಳಿದ್ದಿನಾ? ನಾನು ಎಲ್ಲೂ ಕಾರ್ಯಕರ್ತರ ವಿರುದ್ಧ ಆಪಾದನೆ ಮಾಡಿಲ್ಲ ಎಂದರು. ಚುನಾವಣೆ ನಡೆದು ಮೂರು ವರ್ಷಗಳಾಗಿವೆ. ಈಗ ಯಾಕೆ ಆ ವಿಚಾರದ ಬಗ್ಗೆ ಚರ್ಚಿಸಬೇಕು. ನಿಖಿಲ್ ಅವರಿಗೆ ನಾನೇ ಚುನಾವಣೆಗೆ ನಿಲ್ಲಬೇಡ, ಒತ್ತಡಗಳಿಗೆ ಮಣಿಯಬೇಡ ಅಂತಾ ಹೇಳಿದ್ದೆ. ಆದರೆ, ಮಂಡ್ಯ ಜಿಲ್ಲೆಯ ಎಂಟು ಕ್ಷೇತ್ರಗಳ ಶಾಸಕರ ಒತ್ತಾಯದ ಕಾರಣ ನಿಖಿಲ್ ಸ್ಪರ್ಧಿಸಿದರು. ಶಾಸಕರ ಒತ್ತಾಯಕ್ಕೆ ತಲೆಬಾಗಿ ನಿಲ್ಲಿಸಬೇಕಾಯಿತು.

ಮರಿತಿಬ್ಬೇಗೌಡ ಯಾರಿಗೆ ಹಣ ಕೊಟ್ಟಿದ್ದಾರೆ: ಹಣ ಇದ್ದವರಿಗೆ ಮಣೆ ಹಾಕಲಾಗುತ್ತಿದೆ ಎಂಬ ವಿಧಾನಪರಿಷತ್ ಜೆಡಿಎಸ್ ಸದಸ್ಯ ಮರಿತಿಬ್ಬೇಗೌಡ ಆರೋಪ ವಿಚಾರಕ್ಕೆ ವಾಗ್ದಾಳಿ ನಡೆಸಿದ ಹೆಚ್‌ಡಿಕೆ, ಮರಿತಿಬ್ಬೇಗೌಡ ಮಾತನಾಡಿರುವುದನ್ನು ಗಮನಿಸಿದ್ದೇನೆ. ನಮ್ಮ ಪಕ್ಷಕ್ಕೆ ಅವರು ಎಷ್ಟು ಹಣ ಸಂದಾಯ ಮಾಡಿದ್ದಾರೆ? ನಮ್ಮ ಪಕ್ಷದ ಅಭ್ಯರ್ಥಿಯಾಗಿದ್ದಾಗ ಎಷ್ಟು ಹಣ ನೀಡಿದ್ದಾರೆ? ಯಾವ ನಾಯಕರಿಗೆ ಹಣ ಸಂದಾಯ ಮಾಡಿದ್ದರು ಎಂದು ಪ್ರಶ್ನೆ ಮಾಡಿದರು. ಅವರು ಹಣವನ್ನು ಕುಮಾರಸ್ವಾಮಿಗೆ ಕೊಟ್ಟರೋ? ದೇವೇಗೌಡರಿಗೆ ಕೊಟ್ಟರೋ? ಇಲ್ಲವೇ ಜನತಾದಳದ ಅಕೌಂಟ್‌ಗೆ ಕೊಟ್ಟಿದ್ದಾರೋ? ಅವರ ಚುನಾವಣಾ ಖರ್ಚು ವೆಚ್ಚಕ್ಕೆ ಪಕ್ಷದಿಂದ ಎಷ್ಟು ಕೊಟ್ಟಿದ್ದೇವೆ. ಇದೆಲ್ಲದರ ಬಗ್ಗೆ ಅವರು ಸತ್ಯ ಹೇಳುತ್ತಾರಾ? ಈ ರೀತಿಯ ಕ್ಷುಲ್ಲಕವಾದ ಹೇಳಿಕೆಗಳ ಬಗ್ಗೆ ಜನರೇ ತೀರ್ಮಾನಿಸುತ್ತಾರೆ ಎಂದು ಕುಮಾರಸ್ವಾಮಿ ತಿರುಗೇಟು ನೀಡಿದರು.

ನನ್ನನ್ನು ಟಾರ್ಗೆಟ್ ಮಾಡಲಾಗುತ್ತಿದೆ

ಮತ್ತೆ ರಾಜೀನಾಮೆಗೆ ಮುಂದಾದ ಐಪಿಎಸ್ ಅಧಿಕಾರಿ ಡಾ.ರವೀಂದ್ರನಾಥ್

ಬೆಂಗಳೂರು, ಮೇ 10– ಕರ್ನಾಟಕ ರಾಜ್ಯ ಪೊಲೀಸ್ ತರಬೇತಿ ವಿಭಾಗಕ್ಕೆ ಇತ್ತೀಚೆಗಷ್ಟೇ ವರ್ಗಾವಣೆಯಾಗಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಡಾ. ಪಿ.ರವೀಂದ್ರನಾಥ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ತಿಳಿಸಿದ್ದಾರೆ.



ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದಲ್ಲಿ (ಡಿಸಿಆರ್‌ಇ) ಹೆಚ್ಚುವರಿ ಡಿಜಿಪಿ ಅರುಣ್ ಚಕ್ರವರ್ತಿ ಅವರಿಗೆ ಅಧಿಕಾರ ಹಸ್ತಾಂತರಿಸಿದ ನಂತರ ರವೀಂದ್ರನಾಥ್ ಅವರು ಅರಮನೆ ರಸ್ತೆಯಲ್ಲಿರುವ ತಮ್ಮ ಕಚೇರಿಯಿಂದ ನೃಪತುಂಗ ರಸ್ತೆಯಲ್ಲಿರುವ ರಾಜ್ಯ ಪೊಲೀಸ್ ಮುಖ್ಯಸ್ಥರ ಕಚೇರಿಗೆ ತೆರಳಿ, ರಾಜ್ಯ ಪೊಲೀಸ್ ಮುಖ್ಯಸ್ಥ ಪ್ರವೀಣ್ ಸೂದ್ ಅವರನ್ನು ಭೇಟಿ ಮಾಡಿದರು ಎಂದು ತಿಳಿದುಬಂದಿದೆ. ಈ ಕುರಿತು ರವೀಂದ್ರನಾಥ್ ಸ್ಪಷ್ಟನೆ ನೀಡಿದ್ದು, ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಅವರನ್ನು ಭೇಟಿ ಮಾಡಿದ ನಂತರ ರಾಜೀನಾಮೆ ನೀಡುವುದಾಗಿ ತಿಳಿಸಿದ್ದಾರೆ.

ಸರ್ಕಾರದ ಮೇಲೆ ಪ್ರಭಾವ ಬೀರುವ ಕೆಲವು ವ್ಯಕ್ತಿಗಳು ನನ್ನನ್ನು ಗುರಿಯಾಗಿರಿಸಿಕೊಂಡಿದ್ದಾರೆ. "ನಾನು ಸರ್ಕಾರದ ವಿರುದ್ಧ ಇಲ್ಲ. ವರ್ಗಾವಣೆ ನನ್ನ ಕೋರಿಕೆ ಯಾಗಿರಲಿಲ್ಲ. ಸಾರ್ವಜನಿಕರ ಹಿತಾಸಕ್ತಿಗಾಗಿಯೂ ವರ್ಗಾವಣೆ ಮಾಡಿಲ್ಲ. ನನ್ನ ವಿರುದ್ಧ ಪಿತೂರಿ ನಡೆಸಿ ವರ್ಗಾವಣೆ ಮಾಡಲಾಗಿದೆ. ಹೀಗಾಗಿ ರಾಜೀನಾಮೆ ನೀಡಲು ನಿರ್ಧರಿಸಿದ್ದೇನೆಂದು ಹೇಳಿದ್ದಾರೆ. ಇತ್ತೀಚೆಗಷ್ಟೇ ಪತ್ರಿಕಾಗೋಷ್ಠಿ ನಡೆಸಿದ್ದ ನಾನು ಕೆಲವು ಪ್ರಭಾವಿ ವ್ಯಕ್ತಿಗಳ ಹೆಸರು ಬಹಿರಂಗಪಡಿಸಿದ್ದೆ. ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ (ಡಿಸಿಆರ್‌ಇ) ಅಧಿಕಾರಿಯ ಮುಂದೆ ಹಾಜರಾಗುವಂತೆ ಅವರಿಗೆ ನೋಟಿಸ್‌ಗಳನ್ನು ನೀಡಲಾಗಿತ್ತು. ಅಲ್ಲಿ ನಾನು ಒಂದೂವರೆ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದೆ. ಪತ್ರಿಕಾಗೋಷ್ಠಿ ನಡೆಸಿದ ಬಳಿಕ ನನ್ನನ್ನು ಗುರಿ ಮಾಡಲಾಗುತ್ತಿದೆ. ಸರ್ಕಾರವು ನಿಯಮಾವಳಿಗಳನ್ನು ಉಲ್ಲಂಘಿಸಿ ನನ್ನನ್ನು ವರ್ಗಾವಣೆ ಮಾಡಿದೆ ಎಂದಿದ್ದಾರೆ.

ನಿಜವಾದ ಎಸ್‌ಸಿ/ಎಸ್‌ಟಿ ಸಮುದಾಯಕ್ಕೆ ನ್ಯಾಯ ದೊರಕಿಸಿಕೊಡಲು ಡಿಸಿಆರ್‌ಇಯಲ್ಲಿ ಇನ್ನೂ ಕೆಲವು ದಿನ ಕೆಲಸ ಮಾಡುವ ಆಸೆಯಿದೆ. "ಎಸ್‌ಸಿ/ಎಸ್‌ಟಿ ಕೋಟಾದ ಮೂಲಕ ಸರ್ಕಾರಿ ಉದ್ಯೋಗಗಳನ್ನು ಪಡೆಯಲು ನಕಲಿ ಪ್ರಮಾಣಪತ್ರಗಳನ್ನು ಪಡೆದಿರುವ ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳಲು ನಾನು ಬಯಸುತ್ತೇನೆ. ನಾನು ಪ್ರಾಮಾಣಿಕವಾಗಿ ಮತ್ತು ಪಕ್ಷಪಾತವಿಲ್ಲದೆ ಕೆಲಸ ಮಾಡುತ್ತಿದ್ದೇನೆಂದು ಹೇಳಿದ್ದಾರೆ.

ಡಾಬಾದಲ್ಲಿ ಜಗಳ ಬಿಡಿಸಲು ಮುಂದಾದ ಯುವಕನ ಹತ್ಯೆ

● ಮದ್ದೂರಿನ ಕೊಪ್ಪ ಗ್ರಾಮದಲ್ಲಿ ದುರ್ಘಟನೆ ● ಓರ್ವ ಆರೋಪಿ ಬಂಧನ, ಮತ್ತಿಬ್ಬರಿಗೆ ಶೋಧ

ಕ್ರೈಂ ಬಾಕ್ಸ್

ಮದ್ದೂರು, ಮೇ 10–ಡಾಬವೊಂದರಲ್ಲಿ ಜಗಳ ಬಿಡಿಸಲು ಮುಂದಾದ ಯುವಕನನ್ನು ಗುಂಪೊಂದು ಇರಿದು ಹತ್ಯೆಗೈದಿರುವ ಘಟನೆ ತಾಲೂಕಿನ ಕೊಪ್ಪ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಶಿವಣ್ಣ ಪುತ್ರ ಸಾಗರ್ (25) ಹತ್ಯೆಗೀಡಾದ ಯುವಕ. ಘಟನೆಗೆ ಸಂಬಂಧಿಸಿದಂತೆ ಆರೋಪಿ ಸೋಮನಹಳ್ಳಿಯ ರಾಕೇಶ್‌ನನ್ನು ಪೊಲೀಸರು ಬಂಧಿಸಿ ವಿಚಾರಣೆಗೊಳಪಡಿಸಿದ್ದು, ಪರಾರಿಯಾಗಿರುವ ಮತ್ತಿಬ್ಬರಾದ ಹುರುಗಲವಾಡಿಯ ಗಿರೀಶ್ ಹಾಗೂ ನಂಬಿನಾಯಕನಹಳ್ಳಿಯ ಪ್ರತಾಪ್‌ಗಾಗಿ ಶೋಧ ನಡೆಸಿದ್ದಾರೆ. ಬೆಂಗಳೂರಿನ ಖಾಸಗಿ ಕಂಪನಿ ಉದ್ಯೋಗಿ ಸಾಗರ್, ಕಾರ್ಯನಿಮಿತ್ತ ಮೇ 6ರಂದು ಸ್ವಗ್ರಾಮ ಕೊಪ್ಪಕ್ಕೆ ಬಂದಿದ್ದರು. ಭಾನುವಾರ ರಾತ್ರಿ ತನ್ನ ಸ್ನೇಹಿತ ಕುಂಟನಹಳ್ಳಿ ಪ್ರಸಾದ್ ಹುಟ್ಟುಹಬ್ಬ ಆಚರಣೆ ಹಿನ್ನೆಲೆಯಲ್ಲಿ ಉಳಿದ ಸ್ನೇಹಿತರಾದ ಅದೇ ಗ್ರಾಮದ ಪವನ್ ಅಲಿಯಾಸ್ ಜರ್ಸಿ, ಅಭಿ, ಸುಮಂತ್, ಮನು ಅಲಿಯಾಸ್ ಕಾಜಲ್, ಗೂಳೂರುದೊಡ್ಡಿಯ ವೇಲು, ಪ್ರದೀಪ್ ಅವರೊಂದಿಗೆ ಗ್ರಾಮಕ್ಕೆ ಸಮೀಪದ ಡಾಬಾಕ್ಕೆ ತೆರಳಿ ಕೇಕ್ ಕತ್ತರಿಸಿ, ಹುಟ್ಟುಹಬ್ಬ ಆಚರಿಸಿದರಲ್ಲದೆ, ಪಾನಮತ್ತರಾಗಿ ಊಟ ಮಾಡುತ್ತಿದ್ದರು.



ಈ ಸಂದರ್ಭದಲ್ಲಿ ಪಕ್ಕದ ಟೇಬಲ್‌ನಲ್ಲಿದ್ದ ರಾಕೇಶ್, ಗಿರೀಶ್ ಹಾಗೂ ಪ್ರತಾಪ್ ಅವರ ಗುಂಪಿನಲ್ಲಿ ಗಲಾಟೆ ಏರ್ಪಟ್ಟಿದೆ. ಈ ವೇಳೆ ಸಾಗರ್ ಜಗಳ ಬಿಡಿಸಲು ಮುಂದಾಗಿದ್ದಾರೆ. ಈ ವೇಳೆ ಪಾನಮತ್ತರಾಗಿದ್ದ ಗಿರೀಶ್ ಅಲ್ಲೇ ಇದ್ದ ಚಾಕುವಿನಿಂದ ಸಾಗರ್‌ನ ಎದೆಗೆ ಇರಿದು ಪರಾರಿಯಾಗಿದ್ದಾನೆ ಎನ್ನಲಾಗಿದೆ. ಇದರಿಂದ ತೀವ್ರವಾಗಿ ಗಾಯಗೊಂಡ ಸಾಗರ್‌ನನ್ನು ಕೊಪ್ಪ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗೆ ಮಂಡ್ಯಕ್ಕೆ ಕೊಂಡೊಯ್ಯುವ ಮಾರ್ಗ ಮಧ್ಯೆ ಕೊನೆಯುಸಿರೆಳೆದಿದ್ದಾರೆ. ಸ್ಥಳಕ್ಕೆ ಎಎಸ್ಪಿ ವೇಣುಗೋಪಾಲ್, ಡಿವೈಎಸ್ಪಿ ಲಕ್ಷ್ಮಿನಾರಾಯಣ ಪ್ರಸಾದ್, ಸಿಪಿಐ ಹರೀಶ್, ಪಿಎಸ್‌ಐ ಸಾಹೇಬ್‌ಗೌಡ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ಸಂಬಂಧ ಕೊಪ್ಪ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ತಿಪ್ಪೆ ತೆರವಿಗೆ ಹೋದವರ ಮುಂದೆ ರಂಪಾಟ

● ಪಿಡಿಓಗೆ ಕೊಲೆ ಬೆದರಿಕೆ ಆರೋಪ ● ಬಿಳಿಗೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ● ನಂಜನಗೂಡು ತಾಲೂಕು ಆಲತ್ತೂರು ಗ್ರಾಮದಲ್ಲಿ ಹೈ ಡ್ರಾಮಾ

ಮೈಸೂರು, ಮೇ 10– ತಿಪ್ಪೆ ತೆರವಿಗೆ ಹೋದವರಿಗೆ ಕೊಲೆ ಬೆದರಿಕೆ ಹಾಕಿದ ಪ್ರಕರಣ ನಿನ್ನೆ (ಸೋಮವಾರ) ನಂಜನಗೂಡು ತಾಲೂಕಿನ ಆಲತ್ತೂರು ಗ್ರಾಮದ ಪೌರ ಕಾರ್ಮಿಕ ಕಾಲೋನಿಯಲ್ಲಿ ನಡೆದಿದೆ.

ಈ ಸಂಬಂಧ ನಂಜನಗೂಡು ತಾಲೂಕು ಹೊಸಕೋಟೆ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿ (ಪಿಡಿಓ) ಶಿವಕುಮಾರ್, ಬಿಳಿಗೆರೆ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಆರೋಪಿಗಳ ವಿರುದ್ಧ ಕೇಸು ದಾಖಲಾಗಿದೆ. ನಂಜನಗೂಡು ತಾಲೂಕಿನ ಚಿಕ್ಕಯ್ಯನಛತ್ರ ಹೋಬಳಿ ಆಲತ್ತೂರು ಗ್ರಾಮದ ಪೌರಕಾರ್ಮಿಕರ ಕಾಲೋನಿಯಲ್ಲಿ ಸುಮಾರು ಎರಡು ವರ್ಷಗಳಿಂದ ಖಾಲಿ ನಿವೇಶನವೊಂದರ ಮಾಲೀಕತ್ವದ ಸಂಬಂಧ ಶಿವರಾಜ್ ಹಾಗೂ ಪೌರಕಾರ್ಮಿಕ ಮುರುಗನ್ ನಡುವೆ ವಿವಾದವಿತ್ತು. ಈ ಖಾಲಿ ನಿವೇಶನದಲ್ಲಿ ಶಿವರಾಜ್ ಕುಟುಂಬದವರು ಕಸ ಸುರಿದು ತಿಪ್ಪೆ ಮಾಡಿಕೊಳ್ಳುವ ಮೂಲಕ ನಿವೇಶನವನ್ನು ಅತಿಕ್ರಮಿಸಿಕೊಂಡಿದ್ದರು ಎಂದು ಹೇಳಲಾಗಿದೆ.

ಈ ವಿವಾದಿತ ನಿವೇಶನದಲ್ಲಿ ಸುರಿದಿರುವ ಕಸದ ತಿಪ್ಪೆ ರಾಶಿಯನ್ನು ತೆರವುಗೊಳಿಸುವಂತೆ ಬಂದ ದೂರಿನ ಹಿನ್ನೆಲೆಯಲ್ಲಿ ಹೊಸಕೋಟೆ ಗ್ರಾಮ ಪಂಚಾಯಿತಿಯಿಂದ ನೋಟೀಸ್ ನೀಡಲಾಗಿತ್ತು. ಆದರೆ, ಶಿವರಾಜ್ ಕುಟುಂಬ ನೋಟೀಸ್‌ಗೆ ಕ್ಯಾರೆ ಎನ್ನದೆ ಮೊಂಡುತನ ಪ್ರದರ್ಶಿಸಿತ್ತು ಎನ್ನಲಾಗಿದೆ.

ಈ ಹಿನ್ನೆಲೆಯಲ್ಲಿ ನಿನ್ನೆ ಹೊಸಕೋಟೆ ಗ್ರಾಮ ಪಂಚಾಯಿತಿ ಪಿಡಿಓ ಶಿವಕುಮಾರ್ ನೇತೃತ್ವದಲ್ಲಿ ಪಂಚಾಯಿತಿ ಸಿಬ್ಬಂದಿ, ಸ್ಥಳೀಯ ಪೊಲೀಸರ ರಕ್ಷಣೆಯಲ್ಲಿ ತಿಪ್ಪೆ ತೆರವುಗೊಳಿಸಲು ಜೆಸಿಬಿಯೊಂದಿಗೆ ತೆರಳಿದ್ದರು.

ಈ ಸಂದರ್ಭದಲ್ಲಿ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿಪಡಿಸಿದ ಶಿವರಾಜ್ ಕುಟುಂಬದವರು ಏರು ಧ್ವನಿಯಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸಿ ನಿವೇಶನದಲ್ಲಿ ಬಿದ್ದು ಒದ್ದಾಡಿ ಹೈ ಡ್ರಾಮಾ ಸೃಷ್ಟಿಸಿದ್ದಾರೆ. ಅಲ್ಲದೆ, ಹತ್ತಿರ ಹೋದವರ ಮೇಲೆ ಮುಗಿಬಿದ್ದು, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶಿವಕುಮಾರ್ ಅವರನ್ನು ಹಿಡಿದು ಎಳೆದಾಡಿದ್ದಾರೆ. ತಿಪ್ಪೆ ತೆರವಿಗೆ ಅವಕಾಶವಾಗದಂತೆ ಮಲಗಿ ಅಡ್ಡಿಪಡಿಸಿದ್ದಾರೆ. ಶಿವರಾಜ್ ಕುಟುಂಬ ಸದಸ್ಯರ ಆರ್ಭಟ ಹಾಗೂ ಅವಾಚ್ಯ ಶಬ್ದಗಳ ನಿಂದನೆಗೆ ಅಂಜಿ, ಗ್ರಾಮ ಪಂಚಾಯಿತಿ ಸಿಬ್ಬಂದಿ ಹಾಗೂ ಪೊಲೀಸರು ಅಸಹಾಯಕರಾಗಿ ನಿಂತಿದ್ದಾರೆ. ಕೊನೆಗೆ ಬಂದ ದಾರಿಗೆ ಸುಂಕವಿಲ್ಲದಂತೆ ಹಿಂದಿರುಗಿದ್ದಾರೆ.

ಕೊನೆಗೆ ಕರ್ತವ್ಯಕ್ಕೆ ಅಡ್ಡಿಪಡಿಸಿದ ಹಿನ್ನೆಲೆಯಲ್ಲಿ ಪಿಡಿಓ ಶಿವಕುಮಾರ್, ಬಿಳಿಗೆರೆ ಪೊಲೀಸ್ ಠಾಣೆಯಲ್ಲಿ ಶಿವರಾಜ್ ಅವರ ಕುಟುಂಬದ ನಿಂಗರಾಜು, ಮಹೇಶ್, ಗೌರಮ್ಮ, ನಂದಿನಿ, ಇಬ್ಬರು ಸೊಸೆಯಂದಿರು ಹಾಗೂ ಮೂಡಹಳ್ಳಿ ಗ್ರಾಮದ ಮಹದೇವು, ಶೇಖರ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಪ್ರಕರಣ ದಾಖಲಿಸಿದ್ದಾರೆ. ಮತ್ತೊಂದೆಡೆ ಕಸದ ತಿಪ್ಪೆ ರಾಶಿಯನ್ನು ತೆರವುಗೊಳಿಸುವಂತೆ ಆಗ್ರಹಿಸಿ ಪೌರಕಾರ್ಮಿಕ ಮುಖಂಡರು ಬಿಳಿಗೆರೆ ಪೊಲೀಸ್ ಠಾಣೆ ಮುಂದೆ ಪ್ರತಿಭಟನೆ ನಡೆಸಿದ್ದಾರೆ.

ಉಚಿತ ಕಣ್ಣಿನ ತಪಾಸಣಾ ಶಿಬಿರ

ಮೈಸೂರು, ಮೇ 9– ವಿಜಯನಗರ ಸಾಂಸ್ಕೃತಿಕ ಸಂಸ್ಥೆ, ತೆಲುಗು ರೆಡ್ಡಿ ಶ್ರೀರಾಮ ಮಂದಿರ, ರೋಟರಿ ಪಂಚಶೀಲ ಇವರ ಸಹಯೋಗದೊಂದಿಗೆ ಮೇ 16ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 1ರವರೆಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ ಏರ್ಪಡಿಸಿದೆ. ಅಂದು ವೈದ್ಯರು ಕಣ್ಣಿನ ಪರೀಕ್ಷೆ ಮಾಡಿ ಪೊರೆ ಬಂದಿರುವ ರೋಗಿಗಳನ್ನು ಅಂದೇ ಎಂ.ಆರ್.ಸಿ. ಕಣ್ಣಿನ ಆಸ್ಪತ್ರೆಗೆ ಕರೆತಂದು ಮರುದಿನ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ಮಾಡಲಿದ್ದಾರೆ. ಮಾಹಿತಿಗೆ ರಾಮಕೃಷ್ಣ ಮೊ.9972962665, ಎಂ.ಆರ್.ಸಿ. ಆಸ್ಪತ್ರೆ ದೂ.0821–2472532ಗೆ ಸಂಪರ್ಕಿಸಿ.

ಅನಾಥ ಮಕ್ಕಳಿಗೆ ಉಚಿತ ಪದವಿಪೂರ್ವ ಶಿಕ್ಷಣ

ಮೈಸೂರು, ಮೇ 10–ತಂದೆ ಮತ್ತು ತಾಯಿ ಇಬ್ಬರನ್ನು ಕಳೆದುಕೊಂಡ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಅಂತಿಮ ಪರೀಕ್ಷೆಯಲ್ಲಿ ಗಳಿಸಿರುವ ಅಂಕದ ಆಧಾರದ ಮೇಲೆ ಪ್ರಥಮ ಪಿಯುಸಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳಿಗೆ ಇಲವಾಲದಲ್ಲಿರುವ ಕಲಾಭಾರತಿ ಸಂಯುಕ್ತ ಪದವಿಪೂರ್ವ ಕಾಲೇಜಿಗೆ ಉಚಿತ ದಾಖಲಾತಿ ಮಾಡಿಕೊಳ್ಳಲು ನಿರ್ಧರಿಸಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ಮೊ: 9535333467, 8150964055.



ಶಾಸಕ ಎಲ್.ನಾಗೇಂದ್ರ ಅವರ ಆಪ್ತ ಸಹಾಯಕ ಪ್ರವೀಣ್‌ಕುಮಾರ್ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಈ ವೇಳೆ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಕೆ.ಸೋಮಶೇಖರರಾಜು, ಪಾಲಿಕೆ ಸದಸ್ಯ ಚಿಕ್ಕವೆಂಕಟು, ಸಿಟಿ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಸ್.ಬಿ.ಶಿವು, ಆಶ್ರಯ ಸಮಿತಿ ಸದಸ್ಯರಾದ ಅನುಜ್, ಮಹೇಶ್, ಮುಖಂಡರಾದ ನರೇಂದ್ರಬಾಬು, ರಾಜು, ವೇಣು, ಜೀವನ್, ಉಲ್ಲಾಸ್ ಇನ್ನಿತರರಿದ್ದರು.

ವಿಶೇಷಚೇತನರ ಆರೋಗ್ಯ ತಪಾಸಣೆ ಸಾಧನ ಸಲಕರಣೆ ವಿತರಣೆ: ಪೂರ್ವ ಸಿದ್ಧತೆ ಕೈಗೊಳ್ಳಲು ಜಿಲ್ಲಾಧಿಕಾರಿ ಸೂಚನೆ

ಮೈಸೂರು, ಮೇ 10– ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದ ಸಹಯೋಗದೊಂದಿಗೆ ವಿಶೇಷಚೇತನರ ಆರೋಗ್ಯ ತಪಾಸಣೆ ಹಾಗೂ ಸಾಧನ ಸಲಕರಣೆ ವಿತರಿಸುವ ಕಾರ್ಯಕ್ರಮ ಆಯೋಜನೆಗೆ ಪೂರ್ವ ಸಿದ್ದತೆ ಕೈಗೊಳ್ಳುವಂತೆ ಮೈಸೂರು ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಮಂಗಳವಾರ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ವಿಶೇಷಚೇತನರ ಆರೋಗ್ಯ ತಪಾಸಣೆ ಹಾಗೂ ಸಾಧನ ಸಲಕರಣೆ ವಿತರಣೆ ಕುರಿತ ಪೂರ್ವ ಸಿದ್ಧತೆ ಸಭೆಯಲ್ಲಿ ಮಾತನಾಡಿದರು.

ಜಿಲ್ಲೆಯಲ್ಲಿರುವ ವಿಶೇಷಚೇತನರಿಗೆ ಆರೋಗ್ಯ ತಪಾಸಣೆ ಕೈಗೊಂಡು ಅವರಿಗೆ ಅಗತ್ಯವಿರುವ ಸಾಧನ ಸಲಕರಣೆಗಳನ್ನು ನೀಡುವ ಉದ್ದೇಶದಿಂದ ಶಿಬಿರಗಳನ್ನು ಆಯೋಜನೆ ಮಾಡಬೇಕಿದೆ. ಈ ನಿಟ್ಟಿನಲ್ಲಿ ಅಲಿಮ್ಕೋ ಸಂಸ್ಥೆಯು ಜಿಲ್ಲೆಯಲ್ಲಿನ ವಿವಿಧ ಸ್ವರೂಪದ ಎಲ್ಲಾ ವಿಶೇಷ ಚೇತನರಿಗೆ ಅಂದರೆ ದೈಹಿಕ, ವಾಕ್ ಮತ್ತು ಶ್ರವಣ ನ್ಯೂನತೆ, ಬುದ್ದಿ ಮಾಂಧ್ಯ ಮತ್ತು ದೃಷ್ಟಿ ದೋಷವುಳ್ಳ ವಿಶೇಷ ಚೇತನರಿಗೆ ಪರೀಕ್ಷಿಸಿ ಅವರಿಗೆ ಅಗತ್ಯವಿರುವ ಸಾಧನ ಸಲಕರಣೆಗಳನ್ನು ಗುರುತಿಸಲಿದೆ. ಈ ಸಂಬಂಧ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು ಜಿಲ್ಲೆಯಲ್ಲಿನ ವಿಕಲಚೇತನರು ಇರುವ ಬಗ್ಗೆ ಹಾಗೂ ಜಿಲ್ಲೆಯಲ್ಲಿ ತಾಲೂಕುವಾರು ವಿಶೇಷಚೇತನರ ಪಟ್ಟಿ ಮಾಡಬೇಕು. ಯಾರಿಗೆ ಯಾವ ಬಗೆಯ ಸಾಧನ ಸಲಕರಣೆಗಳು ನೀಡಬೇಕಾಗುತ್ತದೆ ಎಂಬ ಬಗ್ಗೆ ಪೂರ್ವಭಾವಿಯಾಗಿ ಮಾಹಿತಿ ಸಂಗ್ರಹಣೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.



ಮೇ 24ರಂದು ನಂಜನಗೂಡು, 25ರಂದು ಹೆಚ್.ಡಿ.ಕೋಟೆ, 26ರಂದು ಟಿ.ನರಸಿಪುರ, 27ರಂದು ಮೈಸೂರಿನಲ್ಲಿ ವೈದ್ಯಕೀಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗುವುದು. ಶಿಬಿರ ಆಯೋಜನೆಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕೆಂದು ಅವರು ನಿರ್ದೇಶನ ನೀಡಿದರು.

ಆರೋಗ್ಯ ಇಲಾಖೆ, ಅಂಗವಿಕಲರ ಕಲ್ಯಾಣ ಇಲಾಖೆಗಳು ವಿಶೇಷ ಗಮನ ನೀಡಿ ಅರ್ಹರಿಗೆ ನೆರವಾಗಿ ಸೌಲಭ್ಯಗಳನ್ನು ಕಲ್ಪಿಸುವ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು. ಇದಕ್ಕಾಗಿ ಅಗತ್ಯ ಸಿದ್ಧತೆ ನಡೆಸಬೇಕು. ಕಾರ್ಯಕ್ರಮದ ರೂಪುರೇಷೆ ತಯಾರಿಸಿ ಸೂಕ್ತ ಯೋಜನೆ ಹಾಕಿಕೊಂಡು ಶಿಬಿರ ಏರ್ಪಾಡು ಮಾಡಬೇಕು ಎಂದರು.

ಸಭೆಯಲ್ಲಿ ಜಿಪಂ ಉಪ ಕಾರ್ಯದರ್ಶಿ ಪ್ರೇಮ್ ಕುಮಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಬಸವರಾಜ್, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಮಾಲಿನಿ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಅಧಿಕಾರಿಗಳು ಸಭೆಯಲ್ಲಿದ್ದರು.

ಇಂದು ಹೆಬ್ಬಸೂರಿಗೆ ಶೃಂಗೇರಿ ಕಿರಿಯ ಶ್ರೀಗಳ ಆಗಮನ


ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ

ಚಾಮರಾಜನಗರ, ಮೇ 10– ಶೃಂಗೇರಿ ಶಾರದಾಪೀಠದ 81ನೇ ಶಾಖಾ ಮಠವಾದ ತಾಲೂಕಿನ ಹೆಬ್ಬಸೂರು ಗ್ರಾಮದ ಶಂಕರ ಮಠಕ್ಕೆ ಮೇ 11ರ ಬುಧವಾರ ಶೃಂಗೇರಿ ಮಠದ ಕಿರಿಯ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಭೇಟಿ ನೀಡಲಿದ್ದು, ಶ್ರೀಗಳನ್ನು ಬರಮಾಡಿಕೊಳ್ಳಲು ಸಕಲ ತಯಾರಿ ನಡೆಸಲಾಗಿದೆ.

ಶೃಂಗೇರಿ ಕಿರಿಯ ಶ್ರೀ ವಿದುಶೇಖರ ಭಾರತೀ ತೀರ್ಥರು ವಿಜಯಯಾತ್ರೆ ಕೈಗೊಂಡಿದ್ದು, ಎರಡು ದಿನ ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಶಂಕರ ಜಯಂತಿ ದಿನದಿಂದ ಮಠದಲ್ಲಿ ನಿತ್ಯ ಹಲವು ಧಾರ್ಮಿಕ ಕಾರ್ಯಕ್ರಮ ನಡೆಸಲಾಗುತ್ತಿದ್ದು,

ಶ್ರೀಶೃಂಗೇರಿ ಶಂಕರ ಮಠ ಹೆಬ್ಬಸೂರು ಗ್ರಾಮದಲ್ಲಿ ಪ್ರತಿಷ್ಠಾಪನೆಗೊಂಡು ಶೃಂಗೇರಿ ಜಗದ್ಗುರುಗಳ ದಿವ್ಯ ಅನುಗ್ರಹದಿಂದ ಶ್ರೀಮಠ ಇಡೀ ಜಿಲ್ಲೆಗೆ ಅತ್ಯಂತ ಶ್ರದ್ಧಾ ಭಕ್ತಿಯ ಕೇಂದ್ರವಾಗಿದೆ. ಇಂದು ರಾಜಗೋಪುರ ವಿಮಾನ ಗೋಪುರ ಕುಂಭಾಭಿಷೇಕ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಅವರ ದಿವ್ಯ ಅನುಗ್ರಹದೊಂದಿಗೆ ನಡೆಯುತ್ತಿರುವುದುರು ನಮ್ಮೆಲ್ಲರ ಪುಣ್ಯ.



– ಶ್ರೀಧರಪ್ರಸಾದ್, ಹೆಬ್ಬಸೂರು ಮಠದ ಧರ್ಮಾಧಿಕಾರಿ.

ಸಾವಿರಾರು ಮಂದಿಗೆ ನಿರಂತರ ಅನ್ನ ಸಂತರ್ಪಣೆ ನಡೆಸಲಾಗುತ್ತಿದೆ ಎಂದು ಮಠದ ಧರ್ಮಾಧಿಕಾರಿ ಶ್ರೀಧರಪ್ರಸಾದ್ ಅವರು ಮಾಹಿತಿ ನೀಡಿದರು.

ಹೆಬ್ಬಸೂರು ಶಾಖಾ ಮಠದಲ್ಲಿ ಕಳೆದ 5 ವರ್ಷಗಳಿಂದ ನಡೆಯುತ್ತಿದ್ದ ನವೀಕರಣ ಕಾರ್ಯ ಮುಕ್ತಾಯಗೊಂಡಿದ್ದು, ಮೇ 11ರಂದು ಸಂಜೆ 5 ಗಂಟೆಗೆ ಆಗಮಿಸುವ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಅವರಿಗೆ ಪೂರ್ಣಕುಂಭ ಸ್ವಾಗತ, ಪಾದ ಪೂಜೆ, ಸಭಾ ಕಾರ್ಯಕ್ರಮ ನಡೆಯಲಿದೆ. ಈ ವೇಳೆ ಸ್ವಾಮೀಜಿ ಅವರು ಅನುಗ್ರಹ ಭಾಷಣ ಮಾಡಲಿದ್ದಾರೆ. ನಂತರ ಶ್ರೀಗಳಿಂದ ಚಂದ್ರಮೌಳೇಶ್ವರ ಪೂಜೆ ನಡೆಯಲಿದೆ 12ರಂದು ಶ್ರೀಗಳಿಂದ ಶಾರದಾಂಬಾ ಹಾಗೂ ಪರಿವಾರ ದೇವತೆಗಳ ಕುಂಬಾಭಿಷೇಕ, ರಾಜಗೋಪುರ, ವಿಮಾನ ಗೋಪುರಗಳ ಕುಂಭಾಭಿಷೇಕ ನಡೆಯಲಿದೆ. ತಮಿಳುನಾಡು, ಆಂಧ್ರಪ್ರದೇಶ, ದೆಹಲಿಯಿಂದ ಸಾವಿರಾರು ಮಂದಿ ಭಕ್ತರಗಳು ಆಗಮಿಸಲಿದ್ದಾರೆ. ಜಿಲ್ಲೆಯ ಶ್ರೀಶಂಕರ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಭಗವಂತನ ಕೃಪೆಗೆ ಪಾತ್ರರಾಗಬೇಕು ಎಂದು ತಿಳಿಸಿದರು.

ಅಂದು ಹಿರಿಯಶ್ರೀ ಮಠದ ಉದ್ಘಾಟನೆ, ಇಂದು ಕಿರಿಯಶ್ರೀ ಕುಂಭಾಭಿಷೇಕ: ಶಾರದಾ ಪೀಠದ ಹಿರಿಯ ಶ್ರೀ ಭಾರತೀ ತೀರ್ಥರು ಶಂಕರ ಮಠವನ್ನು ಉದ್ಘಾಟಿಸಿದ್ದರು. ಈಗ ಕಿರಿಯ ಶ್ರೀಗಳು ರಾಜ ಗೋಪುರಕ್ಕೆ ಕುಂಭಾಭಿಷೇಕ ನಡೆಸುತ್ತಿದ್ದು, ಮೊದಲ ಬಾರಿಗೆ ಹೆಬ್ಬಸೂರಿಗೆ ಬರುತ್ತಿದ್ದಾರೆ ಎಂದರು.



ಬ್ರಾಹ್ಮಣ ಎಂಬ ಹಿಂಜರಿಕೆಯಿಂದ ಸಂಘಟನೆ ಕೊರತೆ

ಅಖಿಲ ಕರ್ನಾಟಕ ಬ್ರಾಹ್ಮಣ ಸಂಘದ ರಾಜ್ಯಾಧ್ಯಕ್ಷ ಅಶೋಕ ಹಾರನಹಳ್ಳಿ ಬೇಸರ

ಚಾಮರಾಜನಗರ, ಮೇ 10– ಬ್ರಾಹ್ಮಣ ಎಂದರೆ ಸಮಾಜದ ಹಿತವನ್ನು ಕಾಪಾಡುವ ನಮ್ಮ ಸಂಸ್ಕೃತಿ ಪರಂಪರೆಯನ್ನು ಉಳಿಸಿ ಬೆಳೆಸುವವ ಎಂದರ್ಥ. ಇಂದು ಬೇರೆ ಸಮಾಜದ ಸಂಘಟನೆಗಳಿಗೆ ಹೋಲಿಸಿದರೆ ನಮ್ಮ ಸಂಘಟನೆ ಅತ್ಯಂತ ಹಿಂದೆ ಬಿದ್ದಿದೆ. ಇದಕ್ಕೆ ನಮ್ಮ ಹಿಂಜರಿಕೆಯೇ ಕಾರಣ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಸಂಘದ ರಾಜ್ಯಾಧ್ಯಕ್ಷ ಅಶೋಕ ಹಾರನಹಳ್ಳಿ ಬೇಸರ ವ್ಯಕ್ತಪಡಿಸಿದರು. ತಾಲೂಕಿನ ಹೆಬ್ಬಸೂರು ಗ್ರಾಮದಲ್ಲಿರುವ ಶ್ರೀ ಶೃಂಗೇರಿ ಶಂಕರ ಮಠದ ಸಭಾಂಗಣದಲ್ಲಿ ಜಿಲ್ಲಾ ಬ್ರಾಹ್ಮಣ ಸಂಘ ಆಯೋಜಿಸಿದ್ದ ಅಭಿನಂದಾನಾ ಹಾಗೂ ಸದಸ್ಯತ್ವ ಅಭಿಯಾನ ಸಮಾರಂಭವನ್ನು ಉದ್ಘಾಟಿಸಿ, ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಬ್ರಾಹ್ಮಣ ಸಮುದಾಯವನ್ನು ಇಡೀ ಸಮಾಜವೇ ಗಮನಿಸುತ್ತದೆ. ನಾವು ತಪ್ಪು ದಾರಿಗೆ ಹೋದರೆ, ಬೇರೆಯವರು ಅವರೇ ಹೋಗಿದ್ದಾರೆ ನಮ್ಮದೇನು ಎನ್ನುತ್ತಾರೆ. ಆದ್ದರಿಂದ ಬ್ರಾಹ್ಮಣರು ಚಿಂತಿಸಬೇಕಾಗಿದೆ.


ಜಿಲ್ಲಾ ಬ್ರಾಹ್ಮಣ ಸಂಘದಿಂದ ಅಖಿಲ ಕರ್ನಾಟಕ ಬ್ರಾಹ್ಮಣ ಸಂಘದ ರಾಜ್ಯಾಧ್ಯಕ್ಷ ಅಶೋಕ ಹಾರನಹಳ್ಳಿ ಅವರಿಗೆ ಗೌರವಿಸಲಾಯಿತು.

ಸಮಾಜದಲ್ಲಿ ವಿಪ್ರರ ಜವಾಬ್ದಾರಿ ಹೆಚ್ಚಿನದು, ಆತ್ಮ ಚಿಂತನೆ ಮಾಡದೆ ಹಿಂಜರಿಯುತ್ತಿರುವುದರಿಂದ ಸಂಘಟನೆ ಅತ್ಯಂತ ಅವಶ್ಯಕವಾಗಿದೆ ಎಂದರು.

ಸದಸ್ಯತ್ವ ಅಭಿಯಾನಕ್ಕೆ ಎಲ್ಲರು ಸಹಕರಿಸಬೇಕು, ಅದರಲ್ಲೂ ಯುವಕರು ಮುಂದೆ ಬರಬೇಕು. ಮಹಿಳೆಯರು ತಮ್ಮ ಮನೆಗಳಲ್ಲಿ ಪುರುಷರಿಗೆ ಮನವರಿಕೆ ಮಾಡಿಕೊಡಬೇಕು. ಜಿಲ್ಲೆಯಲ್ಲಿ 1000ಕ್ಕೂ ಹೆಚ್ಚು ಮಂದಿ ಸದಸ್ಯರಾದರೆ ನಿಮ್ಮ ಅಧ್ಯಕ್ಷರು ನೀವೆ ಆಯ್ಕೆ ಮಾಡಿಕೊಳ್ಳಬಹುದು. ಈ ನಿಟ್ಟಿನಲ್ಲಿ ಚಿಂತಿಸಿ ಸನಾತನ ಧರ್ಮವನ್ನು ಉಳಿಸಿ ಬೆಳೆಸೋಣ ಎಂದು ತಿಳಿಸಿದರು.

ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಜಿ.ಎಂ.ಹೆಗ್ಗಡೆ ಮಾತನಾಡಿ, ರಾಜ್ಯದಲ್ಲಿ ಬ್ರಾಹ್ಮಣ ಸಂಘಕ್ಕೆ ಹೊಸ ರೂಪವನ್ನು ಕೊಡುತ್ತಿರುವ ರಾಜ್ಯಾಧ್ಯಕ್ಷ ಅಶೋಕ ಹಾರನಹಳ್ಳಿ ಅವರನ್ನು ಅಭಿನಂದಿಸಬೇಕು. ಅವರಲ್ಲಿರುವ ಚಿಂತನೆಗಳ ಬಗ್ಗೆ ನಮ್ಮ ಜನರಿಗೆ ಮನವರಿಕೆಂಯಾಗಬೇಕು, ಸದಸ್ಯತ್ವ ಅಭಿಯಾನವನ್ನು ಯಶಸ್ವಿಗೊಳಿಸಬೇಕು ಎಂಬ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲಾಯಿತು ಎಂದರು.

ಸಮಾರಂಭದಲ್ಲಿ ಬ್ರಾಹ್ಮಣ ಮಹಾ ಸಭಾದ ಹಿರಿಯಣ್ಣಸ್ವಾಮಿ, ಸಂಘಟನಾ ಕಾರ್ಯದರ್ಶಿ ರಾಘವೇಂದ್ರಭಟ್, ಎನ್.ಎನ್. ವಿಶ್ವನಾಥ್, ಚಾಮರಾಜನಗರ ತಾಲೂಕು ಹೆಚ್.ವಿ.ನಾಗರಾಜು, ಗುಂಡ್ಲುಪೇಟೆ ತಾಲೂಕು ಗೋಪಾಲಕೃಷ್ಣಭಟ್, ಕೊಳ್ಳೇಗಾಲ ತಾಲೂಕು ಮುರಳಿ, ತಾಳವಾಡಿ ಫಿರ್ಕಾದ ಆರ್.ಗಣೇಶ್, ಧರ್ಮಾಧಿಕಾರಿ ಶ್ರೀಧರ್‌ಪ್ರಸಾದ್, ಎಸ್.ಬಾಲಸುಬ್ರಹ್ಮಣ್ಯಂ, ಶೇಖರ್‌ಶಾಸ್ತ್ರೀ, ಮಹಿಳಾ ಘಟಕದ ಅನುರಾಧ ವತ್ಸಲಾ, ಗೀತಾ, ಗಾಯತ್ರಿ, ಸೀತಾಬಾಯಿ ಇತರರು ಇದ್ದರು. ಸುರೇಶ್ ಎನ್.ಋಗ್ವೇದಿ ಸ್ವಾಗತಿಸಿ, ನಿರೂಪಿಸಿದರು.


ಶ್ರೀಸಾಲೂರು ಬೃಹನ್ಮಠದಿಂದ ಸಿದ್ಧಗಂಗಾ, ಚಾಮರಾಜನಗರ, ಬೆಂಗಳೂರು ಸೇರಿದಂತೆ ವಿವಿಧೆಡೆಗೆ ಮಂಗಳವಾರದಿಂದ ಆರಂಭವಾದ ಕೆಎಸ್‌ಆರ್‌ಟಿಸಿ ಬಸ್ ಸಂಚಾರಕ್ಕೆ ಶ್ರೀಸಾಲೂರು ಬೃಹನ್ಮಠದ ಶ್ರೀಶಾಂತಮಲ್ಲಿಕಾರ್ಜುನ ಸ್ವಾಮೀಜಿ ಚಾಲನೆ ನೀಡಿದರು. ಚಿತ್ರ: ಹನೂರು ಸೋಮು

ದಿನವಿಡೀ ಮೋಡ ಕವಿದ ವಾತಾವರಣ

ಚಾಮರಾಜನಗರ, ಮೇ 10(ಎಸ್‌ಎಸ್)– ಜಿಲ್ಲಾ ಕೇಂದ್ರವಾದ ಚಾಮರಾಜನಗರದಲ್ಲಿರ ಮಂಗಳವಾರ ದಿನವಿಡೀ ಮೋಡಕವಿದ ವಾತಾವರಣ ಇದ್ದು, ಬೆಳಗ್ಗೆ ಮತ್ತು ಸಂಜೆ ಮಳೆಯಾಯಿತು.

ಬೆಳಗ್ಗೆ 6.15ಕ್ಕೆ ಆರಂಭವಾದ ಮಳೆ 7ಗಂಟೆಯವರೆಗೆ ಸುರಿಯಿತು. ನಂತರ ಸಂಜೆವರೆಗೂ ಮೋಡ ಕವಿದ ವಾತಾವರಣವಿತ್ತು. ಸಂಜೆ 5 ಗಂಟೆಯಲ್ಲಿ ಮತ್ತೇ ಅರ್ಧ ತಾಸು ಮಳೆ ಸುರಿಯಿತು. ನಂತರ ರಾತ್ರಿವರೆಗೂ ತುಂತುರು ಹನಿ ಬೀಳುತ್ತಿತ್ತು.


ನಗರದ ಖಾಸಗಿ ಬಸ್‌ನಿಲ್ದಾಣದ ಪಕ್ಕದಲ್ಲಿರುವ ಗಣಪತಿ ದೇವಸ್ಥಾನದ ಕೊಳ ಬಹುತೇಕ ಭರ್ತಿಯಾಗಿದೆ.

ಕೊಳ್ಳೇಗಾಲದ ಪಾಳ್ಯ ಗ್ರಾಮದಲ್ಲಿ ಸೀಗಮಾರಮ್ಮನ ಬಲಿ ಹಬ್ಬ ಆಚರಣೆ

● 8 ಗಂಟೆಗಳ ಕಾಲ ಉಸಿರು ಚೆಲ್ಲಿ, ಮತ್ತೆ ಜೀವ ಪಡೆಯುವ ವ್ಯಕ್ತಿ ● 19 ವರ್ಷಗಳ ಬಳಿಕ ನಡೆದ ವಿಶಿಷ್ಟ ಹಬ್ಬ

ಚಾಮರಾಜನಗರ, ಮೇ 10(ಎಸ್‌ಎಸ್)– ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಪಾಳ್ಯ ಗ್ರಾಮದಲ್ಲಿ 19 ವರ್ಷಗಳ ಬಳಿಕ ಸೀಗಮಾರಮ್ಮನ ನರಬಲಿ ಹಬ್ಬ ನಡೆಯಿತು. ಮೃತಪಟ್ಟ ವ್ಯಕ್ತಿಗೆ 8 ತಾಸುಗಳ ಬಳಿಕ ಮತ್ತೆ ಜೀವ ಬರುತ್ತದೆ ಎಂಬ ನಂಬಿಕೆಯಿಂದ ಹಬ್ಬ ಆಚರಿಸುವುದು ವಿಶೇಷವಾಗಿದೆ.

ಪಾಳ್ಯ ಗ್ರಾಮದಲ್ಲಿರುವ ಎಲ್ಲಾ 15 ಜಾತಿಗಳ ಜನರು ಒಗ್ಗೂಡಿ ಹಬ್ಬ ಆಚರಿಸುವುದು ಮತ್ತೊಂದು ವಿಶೇಷ. ಕಳೆದ 19 ವರ್ಷಗಳಿಂದ ನಾನಾ ಕಾರಣಗಳಿಂದ ಈ ಹಬ್ಬ ನಡೆದಿರಲಿಲ್ಲ. ನರಬಲಿ ಆಚರಣೆ ಈ ಹಬ್ಬದ ವಿಶೇಷವಾಗಿದ್ದು, ಇದರಿಂದ ಗ್ರಾಮಕ್ಕೆ ಒಳ್ಳೆಯದಾಗುತ್ತದೆ ಎಂದು ಗ್ರಾಮಸ್ಥರು ನಂಬಿದ್ದಾರೆ. ಸೋಮವಾರ ಮಧ್ಯರಾತ್ರಿಯಿಂದ ಮಂಗಳವಾರ ಬೆಳಗ್ಗೆವರೆಗೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ಈ ವಿಶಿಷ್ಟ ಹಬ್ಬ ಆಚರಿಸಲಾಯಿತು.



ಗ್ರಾಮದ ಸೀಗಮಾರಮ್ಮನ ಗುಡಿಯ ಮುಂದೆ ಬಲಿಕೊಟ್ಟ ವ್ಯಕ್ತಿಯನ್ನು ಭಕ್ತರ ದರ್ಶನಕ್ಕೆ ಇರಿಸಿ, ಬೆಳಗ್ಗೆ ಸಮೀಪದ ಗುಂಡೇಗಾಲ ಗ್ರಾಮದ ಬಳಗೆರೆ ಹುಚ್ಚಮ್ಮ ದೇವಿಯ ತೀರ್ಥವನ್ನು ಪ್ರೋಕ್ಷಣೆ ಮಾಡಿದ ನಂತರ ಮೃತಪಟ್ಟ ವ್ಯಕ್ತಿಗೆ ಮತ್ತೆ ಜೀವ ಬರುತ್ತದೆ ಎಂಬ ಬಲವಾದ ನಂಬಿಕೆ ಭಕ್ತರದ್ದಾಗಿದೆ. ಹೀಗಾಗಿ, ಈ ವಿಶಿಷ್ಟ ಹಬ್ಬವನ್ನು ಕಣ್ಣಾರೆ ನೋಡಲು ಸಾವಿರಾರು ಭಕ್ತರು ಆಗಮಿಸಿದ್ದರು.

ಗ್ರಾಮದ ವಿವಿಧ ದೇವಾಲಯಗಳಿಂದ ಹೊರಟ ಐದು ಮೆರವಣಿಗೆಗಳು ಗ್ರಾಮದ ಮಧ್ಯಭಾಗದ ರಸ್ತೆಯಲ್ಲಿ ಸೇರುತ್ತದೆ. ಈ ವೇಳೆ ದೇವರಿಗೆ ಬಲಿಯಾಗುವ ವ್ಯಕ್ತಿಗೆ ತೀರ್ಥವನ್ನು, ಬಲಿಯಾಗುವ ವ್ಯಕ್ತಿಗೆ ಪ್ರೋಕ್ಷಣೆ ಮಾಡಿದಾಗ ಆತ ಪ್ರಜ್ಞೆ ಕಳೆದುಕೊಳ್ಳುತ್ತಾರೆ. ನಂತರ ಅವರನ್ನು ಗ್ರಾಮದ ಬಲಿ ದೇವರ ಮನೆಗೆ ಕರೆದ್ಯೊಯಲಾಗುತ್ತದೆ. ಬಲಿ ದೇವರ ಮನೆಗೆ ಸೀಗಮಾರಮ್ಮ ದೇವಾಲಯದ ಅರ್ಚಕರು ಬಂದು ಪ್ರಜ್ಞೆ ಕಳೆದುಕೊಂಡಿದ್ದ ವ್ಯಕ್ತಿಯ ಎದೆ ಮೇಲೆ ಕಾಲಿಟ್ಟಾಗ ಪ್ರಾಣ ಹೋಗುತ್ತದೆ ಎಂಬ ನಂಬಿಕೆ ಭಕ್ತರದ್ದು.

ಬಲಿ ನೀಡಿದ ವ್ಯಕ್ತಿಯನ್ನು ಬಲಿ ದೇವರ ಮನೆಯಿಂದ ಮಾರಮ್ಮನ ದೇವಾಲಯಕ್ಕೆ ಮೆರವಣಿಗೆಯಲ್ಲಿ ಕರೆತರಲಾಯಿತು. ಈ ವೇಳೆ ಅವರನ್ನು ಮೇಲಕ್ಕೆ ಎಸೆಯಲಾಯಿತು. ಮಾರಮ್ಮನ ಗುಡಿ ಎದುರು ಒಣ ಹುಲ್ಲಿನ ಮೇಲೆ ಮಲಗಿಸಿ, ಪೂಜೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಅವರ ಕಣ್ಣು, ಮುಖ ಹಾಗೂ ಬಾಯಿಗೆ ಅರಿಸಿಣ, ಕುಂಕುಮವನ್ನು ಹಚ್ಚಲಾಯಿತು. ನಂತರ ಭಕ್ತರಿಗೆ ದರ್ಶನ ಮಾಡಲು ಅವಕಾಶ ಕಲ್ಪಿಸಲಾಗಿತ್ತು.

ಬಳಿಕ, ಸೀಗಮಾರಮ್ಮ ದೇವಿಯ ತಂಗಿಯಾದ ಗುಂಡೇಗಾಲದ ಬಳಗೆರೆ ಹುಚ್ಚಮ್ಮ ದೇವಸ್ಥಾನದಿಂದ ತೀರ್ಥವನ್ನು ಮೆರವಣಿಗೆಯ ಮೂಲಕ ತರಲಾಯಿತು. ನಂತರ ಬಲಿಯಾಗಿದ್ದ ವ್ಯಕ್ತಿಗೆ ಪೂಜೆ ಮಾಡಿ ಅವರ ಮುಖಕ್ಕೆ ತೀರ್ಥ ಪ್ರೋಕ್ಷಣೆ ಮಾಡಲಾಯಿತು. ನಂತರ ಬಲಿಯಾಗಿದ್ದ ವ್ಯಕ್ತಿ ಕಣ್ಣು ಬಿಟ್ಟರು. ಬಳಿಕ ಅವರನ್ನು ಹೊತ್ತುಕೊಂಡು ಸೀಗಮಾರಮ್ಮನ ದೇವಾಲಯಕ್ಕೆ ಕರೆತಂದು ಪೂಜೆ ಸಲ್ಲಿಸಲಾಯಿತು.

ಮೇ 19 ರಂದು ಹಿಂದೂ ಸಮಾಜೋತ್ಸವ

ವಿರಾಜಪೇಟೆ, ಮೇ 10– ವಿಶ್ವ ಹಿಂದೂ ಪರಿಷತ್, ಭಜರಂಗ ದಳ, ದುರ್ಗಾವಾಹಿನಿ ಮಾತೃಶಕ್ತಿ ವಿರಾಜಪೇಟೆ ಸಂಯುಕ್ತ ಆಶ್ರಯದಲ್ಲಿ ಮೇ 19 ರಂದು ವಿರಾಜಪೇಟೆ ತಾಲೂಕು ಮೈದಾನದಲ್ಲಿ ಬೃಹತ್ ಹಿಂದೂ ಸಮಾಜೋತ್ಸವ ನಡೆಯಲಿದೆ ಎಂದು ವಿಶ್ವ ಹಿಂದೂ ಪರಿಷತ್ ತಾಲೂಕು ಕಾರ್ಯದರ್ಶಿ ಕೇತಿರ ಯತೀಶ್ ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಮೇ 19 ರಂದು ಬೆಳಗ್ಗೆ 10.15 ಗಂಟೆಗೆ ತೆಲುಗರ ಬೀದಿಯಲ್ಲಿರುವ ಮಾರಿಗುಡಿಯಲ್ಲಿ ಗೋಪೂಜೆ ನಡೆಸಿ ಬಳಿಕ ಪಟ್ಟಣದ ಮುಖ್ಯರಸ್ತೆಯಲ್ಲಿ ಚಂಡೆವಾದ್ಯಗಳೊಂದಿಗೆ ಶೋಭಾಯಾತ್ರೆ ನಡೆಯಲಿದೆ. ನಂತರ ಅರಕಲಗೂಡು ತಾಲೂಕಿನ ತೋಂಟದಾರ್ಯ ಸಂಸ್ಥಾನ ಮಠ ಬಸವಾಪಟ್ಟಣದ ಸ್ವತಂತ್ರ ಬಸವಲಿಂಗ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ. ವಿಶ್ವ ಹಿಂದೂ ಪರಿಷತ್‌ನ ಜಿಲ್ಲಾಧ್ಯಕ್ಷ ಜಿ. ಕೃಷ್ಣಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆ. ಬಿ.ಎಂ. ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಬಾಲವಾಗ್ಮಿ ಹಾರಿಕಾ ಮಂಜುನಾಥ್, ಬೈತೂರು ದೇವಸ್ಥಾನದ ತಕ್ಕ ಮುಖ್ಯಸ್ಥ ಪುಗ್ಗೆರ ಪೊನ್ನಪ್ಪ ಉಪಸ್ಥಿತರಿರುವರು. ಸಮಾಜೋತ್ಸವದಲ್ಲಿ ಅಂದಾಜು 2 ಸಾವಿರ ಜನರು ಸೇರುವ ನಿರೀಕ್ಷೆ ಇರುವುದಾಗಿ ಅವರು ತಿಳಿಸಿದರು.

ನಗರ ಅಧ್ಯಕ್ಷ ಬಿ.ಎಂ.ಕುಮಾರ್ ಮಾತನಾಡಿ, ಮೇ 18 ರಂದು ಬೈಕ್ ಜಾಥಾ ನಡೆಯಲಿದೆ. ಪೂರ್ವಾಹ್ನ 10 ಗಂಟೆಗೆ ಛತ್ರಕೆರೆ ಬಳಿ ಇರುವ ಶ್ರೀ ಆಂಜನೇಯ ಸ್ವಾಮಿ ದೇವಾಲಯದಿಂದ ನಗರದ ಪ್ರಮುಖ ಬೀದಿಗಳಲ್ಲಿರುವ ದೇವಾಲಯಗಳಿಗೆ ಭೇಟಿ ನೀಡಿ ತಾಲೂಕು ಮೈದಾನದಲ್ಲಿ ಸಮಾರೋಪ ಗೊಳ್ಳಲಿದೆ. ಅಂದಾಜು 100 ಬೈಕ್‌ಗಳು ಪಾಲ್ಗೊಳ್ಳಲಿವೆ ಎಂದರು.

ಗೋಷ್ಠಿಯಲ್ಲಿ ನಗರ ಕಾರ್ಯದರ್ಶಿ ಟಿ.ಪಿ.ಗಣೇಶ್,ಉಪ ಕಾರ್ಯದರ್ಶಿ ಎಲ್.ಜಿ. ಭಾಸ್ಕರ್, ಮಾತೃಮಂಡಳಿ ತಾಲೂಕು ಕಾರ್ಯದರ್ಶಿ ಧನಲಕ್ಷ್ಮಿ ಉಪಸ್ಥಿತರಿದ್ದರು.

ಮಡಿಕೇರಿಯಲ್ಲಿ ಶ್ರೀ ಕಂಚಿಕಾಮಾಕ್ಷಿಯಮ್ಮ ಕರಗೋತ್ಸವ



ಮಡಿಕೇರಿ,ಮೇ 10– ನಗರದ ನಾಲ್ಕು ಶಕ್ತಿ ದೇವಾಲಯಗಳಲ್ಲೊಂದಾದ ಶ್ರೀ ಕಂಚಿಕಾಮಾಕ್ಷಿಯಮ್ಮ ದೇವಾಲಯದಲ್ಲಿ ಶ್ರೀ ಮಾರಿಯಮ್ಮ ಕರಗೋತ್ಸವಕ್ಕೆ ಚಾಲನೆ ದೊರೆಯಿತು.

ಅರ್ಚಕರ ನೇತೃತ್ವದಲ್ಲಿ ಪಂಪಿನ ಕೆರೆಯಿಂದ ಶೃಂಗಾರಗೊಂಡ ಶ್ರೀ ಕಂಚಿ ಕಾಮಾಕ್ಷಿಯಮ್ಮ, ಶ್ರೀ ಮಾರಿಯಮ್ಮ ಶಕ್ತಿ ಕರಗಗಳ ಬೇವಿನ ಮೆರವಣಿಗೆ ಭಕ್ತರಿಂದ ಪೂಜೆ ಸ್ವೀಕರಿಸಿಕೊಂಡು ದೇವಾಲಯ ತಲುಪಿತು. ನಂತರ ದೇವಾಲಯದಲ್ಲಿ ವಿಶೇಷ ಪೂಜೆಗಳು ಜರುಗಿದವು.

ಮೆರವಣಿಗೆಯಲ್ಲಿ ನಾಲ್ಕು ಶಕ್ತಿ ದೇವಾಲಯಗಳ ಅರ್ಚಕರಿಂದ ಶ್ರೀ ಮಾರಿಯಮ್ಮ ದೇವಿಯನ್ನು ವಾದ್ಯದೊಂದಿಗೆ ಆಹ್ವಾನಿಸುವ ಭಕ್ತಿ ಗಾಯನ ವಿಶೇಷವಾಗಿತ್ತು. ಕರಗ ಮೆರವಣಿಗೆಯಲ್ಲಿ ದೇವಾಲಯಗಳ ಅರ್ಚಕರು, ದೇವಾಲಯ ಸಮಿತಿಯ ಅಧ್ಯಕ್ಷ ರವಿಕುಮಾರ್ ಜಿ.ವಿ, ಸಮಿತಿಯ ಗೌರವ ಅಧ್ಯಕ್ಷರುಗಳು, ಪದಾಧಿಕಾರಿಗಳು ಹಾಗೂ ಸದಸ್ಯರು ಹಾಜರಿದ್ದರು.

ಮೇ.11ರಂದು ಸಂಜೆ ದೇವಾಲಯದಲ್ಲಿ ದೇವಿಗೆ ವಿಶೇಷವಾದ ದೀಪಗಳ ಆರಾಧನೆಯ ನಂತರ ಕರಗಗಳ ವಿಸರ್ಜನೋತ್ಸವ ನಡೆಯಲಿದೆ.

ಕರಗ ಇತಿಹಾಸ: ಹಿಂದಿನ ಕಾಲದಲ್ಲಿ ಭೀಕರ ಸಾಂಕ್ರಾಮಿಕ ರೋಗಗಳಿಂದ ಊರಿನಲ್ಲಿ ಸಾವು ನೋವುಗಳ ಸಂಖ್ಯೆ ಹೆಚ್ಚಾಗುತ್ತಿದ್ದ ಸಂದರ್ಭದಲ್ಲಿ ರೋಗವನ್ನು ಹೋಗಲಾಡಿಸಲು ರಾಜರ ಕಾಲದಿಂದಲೇ ಊರಿನ ಹಿರಿಯರು ಸೇರಿ ನಾಡಿನ ಸುಭಿಕ್ಷೆಗಾಗಿ ಶಕ್ತಿ ದೇವತೆಗಳ ಪ್ರಾರ್ಥನೆಯೊಂದಿಗೆ ಕರಗ ಆರಾಧನೆ ಆರಂಭವಾಯಿತು. ಅದರಲ್ಲೂ ವಿಶೇಷವಾಗಿ ಶ್ರೀ ಕಂಚಿ ಕಾಮಾಕ್ಷಿ ದೇವಾಲಯದಲ್ಲಿ ಆಗಿನ ಕಾಲದಿಂದಲೇ ಸಾಂಕ್ರಮಿಕ ರೋಗಗಳನ್ನು ಊರಿನಿಂದ ಹೊರಗಟ್ಟಲು ಬೇವಿನ ಸೊಪ್ಪಿನ ಶಕ್ತಿ ಕರಗೋತ್ಸವ ಆರಂಭಿಸಲಾಯಿತು ಎಂಬ ಪ್ರತೀತಿ ಇದೆ.

ಸುಂಟಿಕೊಪ್ಪದಲ್ಲಿ ಟೆಂಪೋ ಪಲ್ಟಿ



ಮಡಿಕೇರಿ,ಮೇ 10– ಚಾಲಕನ ನಿಯಂತ್ರಣ ಕಳೆದುಕೊಂಡ ಟೆಂಪೋ ವಿದ್ಯುತ್ ಕಂಬಗಳಿಗೆ ಡಿಕ್ಕಿಯಾಗಿ ಮಗುಚಿರುವ ಘಟನೆ ಮಂಗಳವಾರ ಬೆಳಗಿನ ಜಾವ ಸುಂಟಿಕೊಪ್ಪದಲ್ಲಿ ನಡೆದಿದೆ. ಅದೃಷ್ಟವಶಾತ್ ಟೆಂಪೋದಲ್ಲಿದ್ದವರು ಹಾಗೂ ರಸ್ತೆ ಬದಿಯ ಮನೆಯಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮೈಸೂರಿನಿಂದ ಮೂಡಬಿದರೆಗೆ ತೆರಳುತ್ತಿದ್ದ ಟೆಂಪೋ ನಿಯಂತ್ರಣ ಕಳೆದುಕೊಂಡು ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿರುವ ಪತ್ರಕರ್ತ ಎಂ.ಬಿ. ವಿನ್ಸೆಂಟ್ ಎಂಬವರ ಮನೆ ಸಮೀಪದ ವಿದ್ಯುತ್ ಕಂಬಕ್ಕೆ ಅಪ್ಪಳಿಸಿ, ನಂತರ ಮನೆ ಮುಂಭಾಗದ ಮತ್ತೊಂದು ಕಂಬಕ್ಕೆ ಡಿಕ್ಕಿ ಹೊಡೆದು ಪಲ್ಟಿಯಾಗಿದೆ.

ವಿದ್ಯುತ್ ಕಂಬಗಳಿಗೆ ಡಿಕ್ಕಿಯಾಗದೆ ಟೆಂಪೋ ಮುನ್ನುಗ್ಗಿದ್ದರೆ ಮನೆಗೆ ಹಾನಿಯಾಗುವುದರೊಂದಿಗೆ ಮನೆಮಂದಿಗೂ ಅಪಾಯ ಸಂಭವಿಸುವ ಸಾಧ್ಯತೆ ಇತ್ತೆನ್ನಲಾಗಿದೆ. ಅದೃಷ್ಟವಶಾತ್ ಮನೆಯವರು ಸುರಕ್ಷಿತವಾಗಿದ್ದು, ಟೆಂಪೋದಲ್ಲಿದ್ದವರು ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅಪಘಾತದ ತೀವ್ರತೆಗೆ ವಿದ್ಯುತ್ ಕಂಬ ತುಂಡರಿಸಿದ್ದರೆ, ಗೂಡ್ಸ್ ಆಟೋ ಸಂಪೂರ್ಣ ಜಖಂಗೊಂಡಿದೆ. ಈ ಬಗ್ಗೆ ಸುಂಟಿಕೊಪ್ಪ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅಮೃತ ಮೊಗೇರ ಪ್ರಿಮಿಯರ್ ಲೀಗ್ ಕ್ರಿಕೆಟ್

ಪ್ರೆಸಿಡೆಂಟ್ ಲೆವೆನ್ ತಂಡ ಚಾಂಪಿಯನ್

ಮಡಿಕೇರಿ, ಮೇ 10– ಸಿದ್ದಾಪುರ ಅಮೃತ ಯುವ ಮೊಗೇರ ಸಂಘ ಆಯೋಜಿಸಿದ್ದ ಅಮೃತ ಮೊಗೇರ ಪ್ರಿಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಸೋಮವಾರಪೇಟೆಯ ಪ್ರೆಸಿಡೆಂಟ್ ಲೆವೆನ್ ತಂಡ ಚಾಂಪಿಯನ್ ಆಗಿದ್ದು, ಮಡಿಕೇರಿ ಜನನಿ ವಾರಿಯರ್ಸ್ ತಂಡ ರನ್ನರ್ ಅಪ್‌ಗೆ ತೃಪ್ತಿಪಟ್ಟುಕೊಂಡಿದೆ.

ಸೆಮಿಫೈನಲ್ ಪಂದ್ಯಾವಳಿಯಲ್ಲಿ ಜನನಿ ವಾರಿಯರ್ಸ್ ತಂಡ ಹಂಚಿಕಾಡು ಹೆಚ್‌ಎಫ್‌ಸಿ ತಂಡವನ್ನು ಮಣಿಸಿ ಫೈನಲಿಗೇರಿದರೆ, ಸೋಮವಾರಪೇಟೆಯ ಪ್ರೆಸಿಡೆಂಡ್ ಲೆವೆನ್ ತಂಡವು ಹೆಬ್ಬೆಟ್ಟಗೇರಿಯ ಷಣ್ಮುಗ ಕ್ರಿಕೆಟರ್ಸ್ ತಂಡವನ್ನು ಸೋಲಿಸಿ ಫೈನಲ್‌ಗೆ ಲಗ್ಗೆಯಿಟ್ಟಿತು.



ಅಂತಿಮ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಪ್ರೆಸಿಡೆಂಟ್ ಲೆವೆನ್ ತಂಡ ನಿಗದಿತ ಆರು ಓವರ್ ನಲ್ಲಿ ತನ್ನೆಲ್ಲ ವಿಕೆಟ್ ಕಳೆದುಕೊಂಡು 38 ರನ್ ಗಳಿಸಿತು.

ನಂತರ ಬ್ಯಾಟ್ ಮಾಡಿದ ಜನನಿ ವಾರಿಯರ್ಸ್ ತಂಡ 26 ರನ್‌ಗಳಿಗೆ ತನ್ನೆಲ್ಲ ವಿಕೆಟ್ ಕಳೆದುಕೊಂಡು 13 ರನ್ ನಿಂದ ಸೋಲೊಪ್ಪಿಕೊಂಡಿತು.

ಪ್ರಶಸ್ತಿಗಳು: ಪಂದ್ಯ ಪುರುಷೋತ್ತಮ ಹಾಗೂ ಸರಣಿ ಪುರುಷೋತ್ತಮ ಪ್ರಶಸ್ತಿ ಪ್ರದೀಪ್ ಹಾಗೂ ಉತ್ತಮ ಬ್ಯಾಟ್ಸ್‌ಮ್ಯಾನ್ ಪ್ರಶಸ್ತಿಯನ್ನು ಮೇಘನ್ ಪಡೆದುಕೊಂಡರು.

ಸಮಾರೋಪ ಸಮಾರಂಭದಲ್ಲಿ ಮೊಗೇರ ಸಮಾಜದ ಜಿಲ್ಲಾಧ್ಯಕ್ಷ ಗೌತಮ್ ಶಿವಪ್ಪ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಸದಸ್ಯ ಪಿ.ಎಂ.ರವಿ, ಸೋಮವಾರಪೇಟೆ ಪ.ಪಂ ಅಧ್ಯಕ್ಷ ಪಿ.ಕೆ.ಚಂದ್ರು, ಜಿಲ್ಲಾ ಕಾರ್ಯದರ್ಶಿ ಪಿ.ಬಿ.ಜನಾರ್ಧನ್, ಅಮೃತ ಮೊಗೇರ ಸಮಾಜದ ಅಧ್ಯಕ್ಷ ಪಿ.ಬಿ. ಮಂಜು, ಜಿಪಂ ಮಾಜಿ ಸದಸ್ಯ ವಿಜು ಸುಬ್ರಮಣಿ, ಮಡಿಕೇರಿ ತಾಲೂಕು ಮೊಗೇರ ಸಮಾಜದ ಅಧ್ಯಕ್ಷ ಪಿ.ಬಿ.ಸುರೇಶ್, ಚೆಟ್ಟಳ್ಳಿ ಗ್ರಾ.ಪಂ ಅಧ್ಯಕ್ಷ ಮುತ್ತಪ್ಪ, ಸದಸ್ಯ ಗಣೇಶ್, ಮೊಗೇರ ಸಮಾಜದ ಹಿರಿಯ ಸದಸ್ಯ ಪೊಡಿಯ, ಜಿಲ್ಲಾ ಖಜಾಂಚಿ ಪಿ.ಕೆ. ಚಂದ್ರು, ದಾನಿಗಳಾದ ಮುತ್ತಪ್ಪ, ಪ್ರವೀಣ್, ವಿರಾಜಪೇಟೆ ತಾಲೂಕು ಮೊಗೇರ ಸಮಾಜದ ಗೌರವಾಧ್ಯಕ್ಷ ಜಿ.ಮೋಹನ್ ಸೇರಿದಂತೆ ಅಮೃತ ಮೊಗೇರ ಸಂಘದ ಸದಸ್ಯರು ಉಪಸ್ಥಿತರಿದ್ದರು. ಪಿ.ಸಿ. ರಮೇಶ್ ನಿರೂಪಿಸಿ, ವಂದಿಸಿದರು. ಅಮ್ಮತ್ತಿಯ ಸರಕಾರಿ ಮಾದರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ಮೂರು ದಿನಗಳ ಕಾಲ ಪಂದ್ಯಾವಳಿ ನಡೆಯಿತು.

ಅಕ್ರಮ ಬೀಟೆ ನಾಟಾ ಸಾಗಣೆ: ಓರ್ವನ ಬಂಧನ

ವಿರಾಜಪೇಟೆ, ಮೇ 10– ಅಕ್ರಮವಾಗಿ ಬೀಟೆ ಮರದ ನಾಟಾಗಳನ್ನು ಕೇರಳಕ್ಕೆ ಸಾಗಿಸುತ್ತಿದ್ದ ಓರ್ವ ಆರೋಪಿಯನ್ನು ವಿರಾಜಪೇಟೆ ಸಿಐಡಿ ಪೊಲೀಸ್ ಅರಣ್ಯ ಘಟಕ ಬಂಧಿಸಿದೆ.

ಕೇರಳ ಮಲಪುರಂ ಜಿಲ್ಲೆಯ ನಿವಾಸಿ ಎ.ಕೆ. ರಾಜು ಬಂಧಿತ ಆರೋಪಿ. ಆರೋಪಿಯಿಂದ 3.5 ಲಕ್ಷ ರೂ. ಮೌಲ್ಯದ 5 ಬೀಟೆ ನಾಟ ಮತ್ತು ಮರ ಸಾಗಿಸಲು ಬಳಸಿದ ಬೊಲೆರೋ ಪಿಕ್‌ಅಪ್ ವಾಹನವನ್ನು ವಶಕ್ಕೆ ಪಡೆಯಲಾಗಿದೆ.

ಘಟನೆ ವಿವರ: ಮೇ.9ರಂದು ಸಂಜೆ 4.30ರ ವೇಳೆಯಲ್ಲಿ ಈಚೂರು ಕಂದಾ ಗ್ರಾಮದ ಕಡೆಯಿಂದ ಕೇರಳ ರಾಜ್ಯದ ನೋಂದಣಿ ಹೊಂದಿದ್ದ ವಾಹನದಲ್ಲಿ 5 ಬೀಟೆ ಮರದ ನಾಟಾಗಳನ್ನು ಕೇರಳದ ಕೊಚ್ಚಿಗೆ ಸಾಗಿಸುತ್ತಿರುವ ಬಗ್ಗೆ ವಿರಾಜಪೇಟೆ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳಕ್ಕೆ ಖಚಿತ ಮಾಹಿತಿ ಲಭಿಸಿತ್ತು. ಈ ಮಾಹಿತಿ ಆಧರಿಸಿ ದಾಳಿ ನಡೆಸಿದ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳದ ಸಿಬ್ಬಂದಿಗಳು, ಓರ್ವ ಆರೋಪಿಯನ್ನು ಮಾಲು ಸಹಿತ ಬಂಧಿಸಿದ್ದಾರೆ. ಆರೋಪಿಯ ವಿರುದ್ಧ ಅರಣ್ಯ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿಐಡಿ ಅರಣ್ಯ ಸಂಚಾರಿ ದಳದ ಪೊಲೀಸ್ ಮಹಾ ನಿರೀಕ್ಷಕ ಕೆ.ಎ.ಶರತ್ ಚಂದ್ರ ನಿರ್ದೇಶನದ ಮೇರೆಗೆ, ವಿರಾಜಪೇಟೆ ಸಿಐಡಿ ಪೊಲೀಸ್ ಅರಣ್ಯ ಘಟಕದ ಅಧೀಕ್ಷಕ ಎನ್.ಟಿ. ಶ್ರೀನಿವಾಸ್ ರೆಡ್ಡಿ ಮಾರ್ಗದರ್ಶನದಲ್ಲಿ ವಿರಾಜಪೇಟೆ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳದ ಉಪನಿರೀಕ್ಷಕಿ ವೀಣಾ ನಾಯಕ್, ಸಿಬ್ಬಂದಿಗಳಾದ ಟಿ.ಪಿ. ಮಂಜುನಾಥ್, ಕೆ.ಎಸ್.ದೇವಯ್ಯ, ಸಿ.ಬಿ.ಬೀನ, ಎಸ್.ಎಂ ಯೋಗೇಶ್, ಪಿ.ಯು. ಮುನೀರ್, ಆರ್.ನಂದಕುಮಾರ್ ಕಾರ್ಯಾಚರಣೆಯಲ್ಲಿದ್ದರು.



ಪೊನ್ನಂಪೇಟೆ ನಾಗರಿಕ ವೇದಿಕೆಯ ಪದಾಧಿಕಾರಿಗಳ ಆಯ್ಕೆ



ಪೊನ್ನಂಪೇಟೆ, ಮೇ 10– ಇಲ್ಲಿನ ನಾಗರಿಕ ವೇದಿಕೆಯ ನೂತನ ಅಧ್ಯಕ್ಷರಾಗಿ ಸಮಾಜ ಸೇವಕ ಚಿಮ್ಮಣಮಾಡ ವಾಸು ಉತ್ತಪ್ಪನವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ನಾಗರಿಕ ವೇದಿಕೆಯ ಅಧ್ಯಕ್ಷ ಪಿ.ಬಿ.ಪೂಣಚ್ಚ ಅಧ್ಯಕ್ಷತೆಯಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ನಡೆದಿದ್ದು, ಉಪಾಧ್ಯಕ್ಷರಾಗಿ ಸಿ.ಎಸ್. ವಿಶ್ವನಾಥ್, ಗೌರವ ಕಾರ್ಯದರ್ಶಿಯಾಗಿ ಟಿ.ಎಂ. ಕೃಷ್ಣರಾಜೇಂದ್ರ, ಉಪಗೌರವ ಕಾರ್ಯದರ್ಶಿಯಾಗಿ ಶ್ರೀಮತಿ ಅಡ್ಡಂಡ ಅನಿತಾ ಕಾರ್ಯಪ್ಪರವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ನಿರ್ದೇಶಕರುಗಳಾಗಿ ಪಿ.ಟಿ. ದಿನೇಶ್ ಪೂಣಚ್ಚ, ತಾಣಚೀರ ಪೂಣಚ್ಚ, ಎಂ.ಸಿ. ಲಕ್ಷ್ಮಣ್, ಎನ್.ಪಿ. ಉತ್ತಪ್ಪ, ಶ್ರೀಮತಿ ಸಿ.ಸಿ. ಆಶಾ ಪ್ರಕಾಶ್ ಹಾಗು ಸಲಹೆಗಾರರಾಗಿ ಎ.ಎ. ಎರ್ಮುಹಾಜಿ, ಎ.ಬಿ. ದೇವಯ್ಯ, ಪಿ.ಬಿ. ಪೂಣಚ್ಚರವರನ್ನು ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಸಮಾರಂಭದಲ್ಲಿ ನಿರ್ದೇಶಕ ಮೂಕಳೇರ ಕುಸಾಲಪ್ಪನವರು ನಾಗರಿಕ ವೇದಿಕೆ ನಡೆದು ಬಂದ ದಾರಿ ಹಾಗೂ ನೂತನ ತಾಲೂಕು ರಚನೆಯಲ್ಲಿ ನಾಗರಿಕ ವೇದಿಕೆಯ ಸಫಲತೆ ಹಾಗೂ ಕಾರ್ಯವನ್ನು ವಿವರಿಸಿದರು. ವೇದಿಕೆಯ ಕಾನೂನು ಸಲಹೆಗಾರ ಎಂ.ಪಿ. ಅಪ್ಪಚ್ಚು ಮಾತನಾಡಿ, ನೂತನ ಆಡಳಿತ ಮಂಡಳಿಯ ಕರ್ತವ್ಯ ಹಾಗೂ ಜವಾಬ್ದಾರಿಯ ಬಗ್ಗೆ ವಿವರಿಸಿದರು. ಪಿ.ಬಿಪೂಣಚ್ಚರವರು ನೂತನ ಅಧ್ಯಕ್ಷ ವಾಸು ಉತ್ತಪ್ಪನವರಿಗೆ ಅಧಿಕಾರ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ನಿರ್ದೇಶಕರುಗಳಾದ ವಿಮಲ ಬೋಪಯ್ಯ, ಶ್ರೀಮತಿ ರೇಖಾಶ್ರೀಧರ್, ಉಪಾಧ್ಯಕ್ಷ ಸಿ.ಕೆ ಸೋಮಯ್ಯ, ಗೌರವ ಕಾರ್ಯದರ್ಶಿ ಚೆಲುವರಾಜ್, ನಿರ್ದೇಶಕರಾದ ಕೆ.ಎಂ ಗಣಪತಿ, ಐನಂಡ ಕೆ ಬೋಪಣ್ಣ ಸೇರಿದಂತೆ ದಾನಿಗಳಾದ ಕಾಕಮಡ ಅರ್ಜುನ, ಮಾಣಿಪಂಡ ದೇವಯ್ಯ ಹಾಜರಿದ್ದರು.

ಕಾರ್ಯಕ್ರಮದಲ್ಲಿ ಶ್ರೀಮತಿ ರೇಖಾ ಶ್ರೀಧರ್ ಪ್ರಾರ್ಥಿಸಿ ನಿರೂಪಿಸಿದರು. ಉಪಾಧ್ಯಕ್ಷ ಸಿ.ಕೆ.ಸೋಮಯ್ಯ ಸ್ವಾಗತಿಸಿ, ವಂದಿಸಿದರು.

ಮೈಸೂರು ಮಿತ್ರ

ಒಂದನೇ ಪುಟದಿಂದ

ಸುಪ್ರೀಂ ಸೂಚನೆ

ಅವಧಿದ್ದ ಸುಪ್ರೀಂನ ತ್ರಿಸದಸ್ಯ ಪೀಠ ಮಹತ್ವದ ತೀರ್ಪು ನೀಡಿದೆ. ಯಾವುದೇ ವಿಳಂಬ ವಿಲ್ಲದೇ ಅವಧಿ ಮುಗಿದಿರುವ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಬೇಕು. ಈಗ ಇರುವ ವಾರ್ಡ್‌ಗಳ ಸಂಖ್ಯೆ ಆಧರಿಸಿಯೇ ಚುನಾವಣೆ ನಡೆಸಿ. ಎರಡು ವಾರದಲ್ಲಿ ಚುನಾವಣೆ ಅಧಿಸೂಚನೆ ಹೊರಡಿಸಿ ಎಂದು ಮಧ್ಯಪ್ರದೇಶ ಚುನಾವಣಾ ಆಯೋಗಕ್ಕೆ ಸೂಚನೆ ನೀಡಿದೆ. ಅದಲ್ಲದೇ ಸುಪ್ರೀಂಕೋರ್ಟ್ ತನ್ನ ತೀರ್ಪಿನಲ್ಲಿ ಮತ್ತೊಂದು ಅಂಶವನ್ನು ಸ್ಪಷ್ಟಪಡಿಸಿದ್ದು, ಈ ಆದೇಶ ಕೇವಲ ಮಧ್ಯಪ್ರದೇಶಕ್ಕೆ ಮಾತ್ರ ಸೀಮಿತವಲ್ಲ. ದೇಶದ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಅನ್ವಯವಾಗಲಿದೆ. ಅಲ್ಲಿನ ಚುನಾವಣಾ ಆಯೋಗಗಳು ಯಾವುದೇ ವಿಳಂಬವಿಲ್ಲದೇ ಅವಧಿ ಮುಗಿದಿರುವ ಸ್ಥಳೀಯ ಸಂಸ್ಥೆಗಳಿಗೆ ತಕ್ಷಣ ಚುನಾವಣೆ ನಡೆಸಬೇಕು ಎಂದು ನಿರ್ದೇಶನ ನೀಡಿದೆ.

ಶೀಘ್ರದಲ್ಲಿಯೇ ಬಿಬಿಎಂಪಿ ಚುನಾವಣೆ!: ವಾರ್ಡ್ ವಿಂಗಡಣೆ ಸೇರಿ ಹಲವು ಕಾರಣಗಳಿಂದ ಬಾಕಿ ಇರುವ ಎರಡು ವರ್ಷ ವಿಳಂಬವಾಗಿದ್ದ ಬಿಬಿಎಂಪಿ ಚುನಾವಣೆಗೆ ರಾಜ್ಯ ಸರ್ಕಾರ ಅನಿವಾರ್ಯವಾಗಿ ಸಿದ್ಧತೆ ನಡೆಸಬೇಕಿದೆ. ಈ ಹಿಂದಿನ ಜನಪ್ರತಿನಿಧಿಗಳ ಆಡಳಿತ ಅವಧಿ ಸೆಪ್ಟೆಂಬರ್ 2020ರಲ್ಲಿಯೇ ಅಂತ್ಯವಾಗಿತ್ತು. ಆದರೆ, ಕೊರೊನಾ ಕಾಟ, ವಾರ್ಡ್ ವಿಂಗಡಣೆ ವಿಚಾರವಾಗಿ ಚುನಾವಣೆ ಮುಂದೂಡಲ್ಪಟ್ಟಿತ್ತು.

ರಾಜ್ಯ ಸರ್ಕಾರ 243 ವಾರ್ಡ್‌ಗಳಿಗೆ ಚುನಾವಣೆ ನಡೆಸಲು ಚಿಂತಿಸುತ್ತಿತ್ತು. ಆದರೆ, ಸುಪ್ರೀಂ ಕೋರ್ಟ್ ಆದೇಶದಂತೆ ಸದ್ಯ ಇರುವ 198 ವಾರ್ಡ್‌ಗಳಿಗೆ ಚುನಾವಣಾ ಆಯೋಗ ಶೀಘ್ರ ಚುನಾವಣೆ ನಡೆಸುವ ಸಾಧ್ಯತೆ ಇದೆ.

ಚುನಾವಣೆಗೆ ನಾವ್ ರೆಡಿ: ಸುಪ್ರೀಂಕೋರ್ಟ್ ಆದೇಶದ ಬಗ್ಗೆ ಪ್ರತಿಕ್ರಿಯಿಸಿರುವ ಕಂದಾಯ ಸಚಿವ ಆರ್ ಅಶೋಕ್ ಬಿಬಿಎಂಪಿ ಚುನಾವಣೆ ನಡೆಸಲು ಸರ್ಕಾರ ಸಿದ್ಧವಿದೆ ಎಂದು ಹೇಳಿದ್ದಾರೆ. ಸುಪ್ರೀಂಕೋರ್ಟ್ ಆದೇಶದ ಬಳಿಕ ಮಾತನಾಡಿದ ಅವರು, ಬಿಬಿಎಂಪಿ ಚುನಾವಣೆ ಸಂಬಂಧ ಪ್ರತ್ಯೇಕ ಪ್ರಕರಣವಿತ್ತು ಲಿಸ್ಟ್ ಆಗಲು 3 ತಿಂಗಳು ಇತ್ತು. ಆದರೆ, ಮಧ್ಯ ಪ್ರದೇಶಕ್ಕೆ ನೀಡಿದ ಆದೇಶವಾದರೂ ಅದು ಎಲ್ಲ ರಾಜ್ಯಕ್ಕೂ ಅನ್ವಯ ಅಂತ ಕೋರ್ಟ್ ಸ್ಪಷ್ಟಪಡಿಸಿದೆ. ಕಳೆದ ಬಾರಿ ನಡೆದ ಚುನಾವಣೆ ಪ್ರಕಾರವೇ ಚುನಾವಣೆ ನಡೆಸಲು ಸೂಚಿಸಿದೆ. ಹೀಗಾಗಿ 198 ವಾರ್ಡ್ ಪ್ರಕಾರವೇ ಬಿಬಿಎಂಪಿ ಚುನಾವಣೆ ನಡೆಯಬೇಕಿದೆ. ಮೀಸಲಾತಿ ಪ್ರಕಾರ ಚುನಾವಣೆ ನಡೆಯಲಿದೆ ಎಂದು ಹೇಳಿದ್ದಾರೆ.

ಪರಿಶೀಲನಾ ಅರ್ಜಿ ಸಲ್ಲಿಕೆ: ಶಿವರಾಜಸಿಂಗ್ ಚೌಹಾಣ್

ಭೋಪಾಲ್: ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸಿದ ನಂತರವೇ ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲಾಗುವುದು ಎಂಬ ಬಗ್ಗೆ ಸುಪ್ರೀಂ ಕೋರ್ಟ್‌ಗೆ ಮರುಪರಿಶೀಲನಾ ಅರ್ಜಿ ಸಲ್ಲಿಸಲಾಗುವುದು ಎಂದು ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜಸಿಂಗ್ ಚೌಹಾಣ್ ಹೇಳಿದರು. ರಾಜ್ಯದ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವ ಸಂಬಂಧ 2 ವಾರಗಳ ಒಳಗಾಗಿ ಅಧಿಸೂಚನೆ ಹೊರಡಿಸುವಂತೆ ಸುಪ್ರೀಂಕೋರ್ಟ್ ನಿರ್ದೇಶನ ನೀಡಿರುವ ಕುರಿತು ಅವರು ಪ್ರತಿಕ್ರಿಯಿಸಿದರು.

ಮುಂಜಾನೆ 6ರವರೆಗೆ ನಿಷಿದ್ಧ

ಕಮಿಷನರ್ ಜುರಿಸ್ಡಿಕ್ಷನಲ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರತಿನಿಧಿ. ಇತರ ಪ್ರದೇಶಗಳಲ್ಲಿ ಡಿವೈಎಸ್‌ಪಿ, ತಾಲೂಕು ದಂಡಾಧಿಕಾರಿ (ತಹಸೀಲ್ದಾರ್). ಲೌಡ್ ಸ್ಪೀಕರ್‌ಗಳು ಮತ್ತು ಸಾರ್ವಜನಿಕ ವಿಳಾಸ ವ್ಯವಸ್ಥೆಯನ್ನು ಬಳಸುವ ಎಲ್ಲಾ ಆವರಣಗಳಿಗೆ ಇದು ಅನ್ವಯಿಸುತ್ತದೆ. ಇದನ್ನು ತಕ್ಷಣ ಪರಿಣಾಮದೊಂದಿಗೆ ಕಾರ್ಯಗತಗೊಳಿಸಲು ಅಗತ್ಯವಿರುವ ಸರ್ಕಾರಿ ನಿರ್ದೇಶನಗಳನ್ನು ಸಂಬಂಧಪಟ್ಟವರಿಗೆ ನೀಡಲಾಗುತ್ತದೆ ಎಂದು ಹೇಳಲಾಗಿದೆ. ನಿರ್ಬಂಧಿಸಿದ ವೇಳೆಗಳಲ್ಲಿ ಪ್ರಾರ್ಥನಾ ಮಂದಿರಗಳಲ್ಲಿ ಆಜಾನ್‌ಗೆ ಲೌಡ್ ಸ್ಪೀಕರ್ ಬಳಕೆ ನಿಲ್ಲಿಸಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹಿಂದೂಪರ ಸಂಘಟನೆಗಳು ಒತ್ತಾಯಿಸಿ ದೇವಸ್ಥಾನಗಳಲ್ಲಿ ಸುಪ್ರಭಾತ, ಭಜನೆ ಮತ್ತು ಹನುಮಾನ್ ಚಾಲೀಸ್ ಅನ್ನು ಮೇ 9ರ ಬೆಳಗ್ಗಿನ ಜಾವದಿಂದ ಆರಂಭಿಸಿವೆ ಎಂಬುದನ್ನು ಸ್ಮರಿಸಬಹುದು. ಜನವಸತಿ ಪ್ರದೇಶದಲ್ಲಿ ವಾಹನಗಳ ಶಬ್ಧ ಕೂಡ ರಾತ್ರಿ 10ರಿಂದ ಮುಂಜಾನೆ 6ರವರೆಗೆ ಕೆಲವೊಂದು ವಿಶೇಷ ಸಂದರ್ಭಗಳನ್ನು ಹೊರತುಪಡಿಸಿ ನಿರ್ಬಂಧಿಸಲಾಗಿದೆ.

ಸಿಎಂಗೆ ವರಿಷ್ಠರ ಸಲಹೆ

ಯಾವ ಸಚಿವರನ್ನು, ಶಾಸಕರನ್ನು ಕರೆದುಕೊಂಡು ಹೋಗಿಲ್ಲ. ಮುಖ್ಯಮಂತ್ರಿಗಳು ದೆಹಲಿಗೆ ತೆರಳುತ್ತಾರೆ ಎಂದರೆ ಸಂಪುಟ ವಿಸ್ತರಣೆ ಇಲ್ಲವೇ ಪುನರ್ರಚನೆಯಾಗುತ್ತದೆ ಎಂದು ಹಲವಾರು ಆಕಾಂಕ್ಷಿಗಳ ಹಿಂಡೇ ಅವರ ಹಿಂದೆ ತೆರಳುತ್ತಿತ್ತು. ಆದರೆ ಈ ಬಾರಿ ಯಾವ ಆಕಾಂಕ್ಷಿಯು ತೆರಳಿಲ್ಲ. ಸಂಪುಟ ವಿಸ್ತರಣೆ ಇಲ್ಲವೇ ಪುನರ್ರಚನೆಗಾಗಿ ಮುಖ್ಯಮಂತ್ರಿಯವರು ಈ ಹಿಂದೆ ಹಲವಷ್ಟು ಬಾರಿ ದೆಹಲಿ ಪ್ರವಾಸ ಕೈಗೊಂಡಿದ್ದರು.

ಆದರೆ ಅದು ಯಶಸ್ವಿ ಆಗಲಿಲ್ಲ. ಇದನ್ನು ಅರಿತ ಯಾವ ಆಕಾಂಕ್ಷಿಗಳು ದೆಹಲಿಗೆ ತೆರಳಿಲ್ಲ. ಸಿಎಂ ದೆಹಲಿಯಲ್ಲಿ ಕೇಂದ್ರ ಕಾನೂನು ಮತ್ತು ಸಂಸದೀಯ ಸಚಿವ ಪ್ರಹ್ಲಾದ್ ಜೋಶಿ ಅವರೊಟ್ಟಿಗೆ ಪ್ರತ್ಯೇಕವಾಗಿ ಸಮಾಲೋಚನೆ ನಡೆಸಿ, ನಂತರ ಕೇಂದ್ರ ಆರೋಗ್ಯ ಸಚಿವರನ್ನು ಭೇಟಿಯಾಗಿ ಸಂಜೆ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಅವರು ಏರ್ಪಡಿಸಿದ್ದ ಹೂಡಿಕೆದಾರರ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ತಂದೆ-ಮಗ ಸಾವು

ಚಿಕಿತ್ಸೆ ಪಡೆಯುತ್ತಿದ್ದಾರೆ. ಶಶಿಕುಮಾರ್ ತಮ್ಮ ಬೈಕ್‌ನಲ್ಲಿ ಪತ್ನಿ ಹಾಗೂ ಇಬ್ಬರು ಮಕ್ಕಳೊಂದಿಗೆ ಬೇಗೂರಿನಿಂದ ಮೈಸೂರಿಗೆ ಕಾರ್ಯ ನಿಮಿತ್ತ ಹೋಗುತ್ತಿದ್ದಾಗ ಎದುರಿನಿಂದ ಬಂದ ಕಾರೊಂದು ಬೇಗೂರು ಸಮೀಪದ ಹಿರಿಕಾಟಿ ಗೇಟ್‌ನ ಪೆಟ್ರೋಲ್ ಬಂಕ್ ಬಳಿಯ ತಿರುವಿನಲ್ಲಿ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರವಾಗಿ ಗಾಯಗೊಂಡ ಶಶಿಕುಮಾರ್ ಹಾಗೂ ಅವರ ಮೊದಲ ಪುತ್ರ ದರ್ಶನ್ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ಇವರ ಪತ್ನಿ ಚೈತ್ರಾ ಹಾಗೂ ಮತ್ತೊಬ್ಬ ಪುತ್ರ ಗಗನ್ ಗಂಭೀರವಾಗಿ ಗಾಯಗೊಂಡಿದ್ದು, ಇವರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳಕ್ಕಾಗಮಿಸಿದ ಬೇಗೂರು ಠಾಣೆ ಪೊಲೀಸರು ಮೃತರ ದೇಹವನ್ನು ಬೇಗೂರು ಆರೋಗ್ಯ ಕೇಂದ್ರಕ್ಕೆ ರವಾನಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜೂ.3ರಂದು ಮತದಾನ

ಕೋವಿಡ್ ಮಾರ್ಗಸೂಚಿ ಪಾಲಿಸುವಂತೆ ಆಯೋಗ ಸೂಚಿಸಿದೆ. ನಿವೃತ್ತಿಯಾಗುತ್ತಿರುವ ಏಳು ಸದಸ್ಯರ ಪೈಕಿ ಕಾಂಗ್ರೆಸ್‌ನ ಮೂರು, ಬಿಜೆಪಿ ಹಾಗೂ ಜೆಡಿಎಸ್‌ನ ತಲಾ ಇಬ್ಬರು ಸದಸ್ಯರು ಸೇರಿದ್ದಾರೆ. ವಿಧಾನಸಭೆಯಲ್ಲಿ ಮೂರೂ ಪಕ್ಷಗಳು ಹೊಂದಿರುವ ಬಲಾಬಲದ ಆಧಾರದ ಮೇಲೆ ಈಗ ಆಡಳಿತಾರೂಢ ಬಿಜೆಪಿ ನಾಲ್ಕು, ಕಾಂಗ್ರೆಸ್ ಎರಡು ಹಾಗೂ ಜೆಡಿಎಸ್ ಒಂದು ಸ್ಥಾನವನ್ನು ಗೆಲ್ಲಬಹುದಾಗಿದೆ.

ಈ ಚುನಾವಣೆ ನಂತರ ಪರಿಷತ್ ಸದಸ್ಯರ ಸಂಖ್ಯೆಯಲ್ಲೂ ವ್ಯತ್ಯಾಸವಾಗಲಿದ್ದು, ಆಡಳಿತಾರೂಢ ಬಿಜೆಪಿಗೆ ಬಹುಮತ ದೊರೆಯಲಿದೆ. 75 ಸದಸ್ಯ ಬಲದ ಪರಿಷತ್‌ನಲ್ಲಿ ಪ್ರಸ್ತುತ ಬಿಜೆಪಿ 37, ಕಾಂಗ್ರೆಸ್ 26, ಜೆಡಿಎಸ್ 10 ಸದಸ್ಯರನ್ನು ಹೊಂದಿದೆ. ಚುನಾವಣಾ ಫಲಿತಾಂಶದ ನಂತರ ಬಿಜೆಪಿ 39, ಕಾಂಗ್ರೆಸ್ 24, ಜೆಡಿಎಸ್ 9 ಸದಸ್ಯರನ್ನು ಹೊಂದುವ ಸಾಧ್ಯತೆಗಳಿವೆ. ವಿಧಾನಸಭೆಯಲ್ಲಿ ಬಿಜೆಪಿ 119, ಕಾಂಗ್ರೆಸ್ 69, ಜೆಡಿಎಸ್ 32 ಶಾಸಕರನ್ನು ಹೊಂದಿವೆ. ಬಿಎಸ್‌ಪಿ 1, ಇಬ್ಬರು ಪಕ್ಷೇತರರು, ಸಭಾಧ್ಯಕ್ಷರು ಹಾಗೂ ಒಬ್ಬರು ನಾಮ ನಿರ್ದೇಶಿತ ಸದಸ್ಯರಿದ್ದಾರೆ. ಚುನಾಯಿತರಾಗಲು ಕನಿಷ್ಠ 33 ಶಾಸಕರ ಮತಗಳ ಅವಶ್ಯಕತೆ ಇದೆ. ರಹಸ್ಯ ಮತದಾನವಾಗಿರುವುದರಿಂದ ಅಡ್ಡಮತದಾನವಾದರೂ ಆಶ್ಚರ್ಯಪಡಬೇಕಿಲ್ಲ. 7 ಸದಸ್ಯರಿಗಿಂತ ಹೆಚ್ಚು ಅಭ್ಯರ್ಥಿಗಳು ಚುನಾವಣಾ ಕಣದಲ್ಲಿ ಉಳಿದರೆ ಮತದಾನ ನಡೆಯಲಿದೆ. ಇಲ್ಲದಿದ್ದರೆ ಅವಿರೋಧ ಆಯ್ಕೆಯಾಗುವ ಸಾಧ್ಯತೆಯಿದೆ.

1.15 ಎಕರೆ ಭೂಮಿ ಮುಡಾ ವಶಕ್ಕೆ

ಬಡಾವಣೆಯ ಹಿನಕಲ್ ಗ್ರಾಮದ ಸರ್ವೆ ನಂ.105 ರ ಪೈಕಿ ಕೋಟ್ಯಾಂತರ ರೂ. ಬೆಲೆಬಾಳುವ 1.15 ಎಕರೆ ಭೂಮಿಯನ್ನು ಮುಡಾ ಅಧಿಕಾರಿಗಳೇ ಶಾಮೀಲಾಗಿ, ಖಾಸಗಿ ವ್ಯಕ್ತಿ ಹೆಸರಿಗೆ ಖಾತೆ ಮಾಡಿದ್ದು, ಸದರಿ ಆಸ್ತಿಯನ್ನು ರಕ್ಷಿಸಲು ಪಣತೊಟ್ಟಿದ್ದ ಮುಡಾದ ಈ ಹಿಂದಿನ ಆಯುಕ್ತ ಡಾ.ಡಿ.ಬಿ. ನಟೇಶ್, ಇದರ ಖಾತೆ ರದ್ದುಪಡಿಸುವಂತೆ ಕೋರಿ ಉಪವಿಭಾಗಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಸದರಿ ಆಸ್ತಿಯನ್ನು ಪ್ರಾಧಿಕಾರದ ವಶಕ್ಕೆ ಪಡೆಯಲು ಕ್ರಮಕೈಗೊಳ್ಳುವಂತೆ ಮಾರ್ಚ್ 4 ರಂದು ಅಧೀನ ಅಧಿಕಾರಿಗಳಿಗೆ ಸೂಚಿಸಿ, ಆದೇಶಿಸಿದ್ದಾರೆ. ಹಿನಕಲ್ ಸರ್ವೆ ನಂ.105ರಲ್ಲಿ ಬರುವ ಈ 1.15 ಎಕರೆ ಭೂಮಿಯನ್ನು 1984ರ ಮಾರ್ಚ್ 29ರಂದು ಅಧಿಸೂಚನೆ ಹೊರಡಿಸಿ, 1985 ರ ಆಗಸ್ಟ್ 6 ರಂದು ಭೂ ಸ್ವಾಧೀನ ಪಕ್ರಿಯೆ ಮುಗಿದ ನಂತರ ಆರ್‌ಟಿಸಿಯಲ್ಲಿ ಮುಡಾಗೆ ಭೂಸ್ವಾಧೀನ ಎಂದು ಇಂಡೀಕರಣವಾಗಿತ್ತು. ಆದರೆ ನಂತರ 2006 ರ ಫೆಬ್ರವರಿ 7ರಂದು ಅಂದಿನ ಪ್ರಾಧಿಕಾರದ ವಿಶೇಷ ಭೂಸ್ವಾಧೀನ ಅಧಿಕಾರಿಗಳು ಯಾವುದೇ ಸರ್ಕಾರಿ ಆದೇಶ ಅಥವಾ ನ್ಯಾಯಾಲಯದ ನಿರ್ದೇಶನ ಇಲ್ಲದೆಯೂ ಸದರಿ ಭೂಮಿಯನ್ನು ಡಿ-ನೋಟಿಫೈ ಮಾಡಿದ್ದರು. ಆ ಡಿ-ನೋಟಿಫಿಕೇಷನ್ ಆದೇಶ ಪ್ರತಿ ಆಧರಿಸಿ ಅಂದಿನ ಮೈಸೂರು ತಾಲೂಕು ತಹಸೀಲ್ದಾರ್, ಬೇರೊಬ್ಬ ಮಹಿಳೆಗೆ ಖಾತೆ ಮಾಡಿಕೊಟ್ಟಿದ್ದರು. ನಂತರವೂ ತಪ್ಪು ಮಾಹಿತಿ ನೀಡಿ, ವೆಂಕಟಾಚಲ ರೆಡ್ಡಿ ಬಿನ್ ಲೇಟ್ ಕೊಂಡಾರೆಡ್ಡಿ ಎಂಬುವವರ ಹೆಸರಿಗೆ ಎಂಆರ್‌ಹೆಚ್4/2014-15 ರಂತೆ 20-2-2021 ರಂತೆ ಪಹಣಿಯಲ್ಲಿ ಬದಲಾವಣೆ ಮಾಡಿ ಅಕ್ರಮವೆಸಗಲಾಗಿದೆ.


ಮುಡಾ ವಸತಿ ಬಡಾವಣೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ನ್ಯಾಯಾಲಯದ ಆದೇಶ ಹೊರತುಪಡಿಸಿ ಡಿ-ನೋಟಿಫೈ ಮಾಡುವ ಅಧಿಕಾರ ಯಾರಿಗೂ ಇಲ್ಲ ಎಂಬುದು ಗೊತ್ತಿದ್ದೂ, ವಿಶೇಷ ಭೂ ಸ್ವಾಧೀನಾಧಿಕಾರಿ ಅಧಿಸೂಚನೆಯಿಂದ ಕೈಬಿಟ್ಟಿದ್ದಲ್ಲದೇ ಭೂ ಮಾಲೀಕರಿಗೂ ಖಾತೆ ಮಾಡದೇ ಸದರಿ ಜಮೀನನ್ನು ಬೇರೊಬ್ಬರ ಹೆಸರಿಗೆ ಖಾತೆ ಮಾಡಿಕೊಟ್ಟಿದ್ದುದು ಭಾರೀ ಅನುಮಾನಕ್ಕೆ ಆಸ್ಪದ ಮಾಡಿಕೊಟ್ಟಿತ್ತು. ಈ ಎಲ್ಲಾ ಬೆಳವಣಿಗೆಯಿಂದಾಗಿ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದ ಮುಡಾ ಹಿಂದಿನ ಆಯುಕ್ತ ಡಾ.ಡಿ.ಬಿ. ನಟೇಶ್, ಅಕ್ರಮವಾಗಿ ಮಾಡಿರುವ ಖಾತೆಯನ್ನು ರದ್ದುಪಡಿಸಿ ತಕ್ಷಣದಿಂದಲೇ ವಶಕ್ಕೆ ಪಡೆಯುವಂತೆ ಆದೇಶಿಸಿದ್ದಾರೆ.


ಚಾಮುಂಡಿಬೆಟ್ಟದ ತಪ್ಪಲಿನ ಕಲ್ಯಾಣಿಯ ಶಿವನ ವಿಗ್ರಹವುಳ್ಳ ಸ್ತಂಭ ಕುಸಿತ

ಕಂಬ ಚೂರು-ಚೂರು, ಶಿವನ ಮೂರ್ತಿಯ ಕೈ, ನಾಗರಹಾವಿಗೆ ಸಣ್ಣ ಪ್ರಮಾಣದ ಹಾನಿ

- ಭಾರೀ ಗಾಳಿಯ ರಭಸಕ್ಕೆ ಬಿದ್ದಿರುವ ಶಂಕೆ
- ಇತ್ತೀಚೆಗಷ್ಟೇ ಯುವ ಬ್ರಿಗೇಡ್‌ನಿಂದ ಕಲ್ಯಾಣಿ ಸ್ವಚ್ಛ







ಮೈಸೂರು, ಮೇ 10(ಎಂಟಿವೈ)- ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹೂಳುವ ಸ್ಮಶಾನದ ಪುರಾತನ ಕಲ್ಯಾಣಿಯಲ್ಲಿದ್ದ ಶಿವನ ವಿಗ್ರಹವುಳ್ಳ ಸ್ತಂಭವೊಂದು ಕುಸಿದು ಬಿದ್ದಿದೆ.

ಕಳೆದ ವಾರವಷ್ಟೇ ಯುವ ಬ್ರಿಗೇಡ್ ಕಾರ್ಯಕರ್ತರು ಕಲ್ಯಾಣಿಯಲ್ಲಿ ತುಂಬಿದ್ದ ಹೂಳೆತ್ತಿ ಸ್ವಚ್ಛಗೊಳಿಸಿದ್ದರು. ಆದರೆ ಎರಡು ದಿನಗಳ ಹಿಂದೆ ಕಲ್ಯಾಣಿ ಮಧ್ಯ ಭಾಗದಲ್ಲಿ ಸ್ತಂಭ ಕುಸಿದಿರುವುದು ಸಾರ್ವಜನಿಕರಲ್ಲಿ ಬೇಸರವನ್ನುಂಟು ಮಾಡಿದೆ.

ಪುರಾತನ ಕಲ್ಯಾಣಿಗಳಲ್ಲಿ ಒಂದಾಗಿರುವ ಬೆಟ್ಟದ ತಪ್ಪಲಿನಲ್ಲಿರುವ ಸ್ಮಶಾನದಲ್ಲಿದ್ದ ಕಲ್ಯಾಣಿ ನಿರ್ವಹಣೆಯ ಕೊರತೆಯಿಂದಾಗಿ ಹೂಳು ತುಂಬಿಕೊಂಡಿತ್ತು. ಅಲ್ಲದೇ ಮೆಟ್ಟಿಲುಗಳ ಮೇಲೆ ಗಿಡ, ಪೊದೆ ಬೆಳೆದುಕೊಂಡಿತ್ತು. ಇದರಿಂದ ಪುರಾತನ ಕಲ್ಯಾಣಿ ಜೀವ ಕಳೆದುಕೊಂಡಿತ್ತು. ಇದನ್ನು ಗಮನಿಸಿದ ಯುವ ಬ್ರಿಗೇಡ್‌ನ 50ಕ್ಕೂ ಹೆಚ್ಚು ಕಾರ್ಯಕರ್ತರು ಕಳೆದ ಭಾನುವಾರ ಸ್ವಚ್ಛತಾ ಅಭಿಯಾನ ನಡೆಸಿ ಸ್ವಚ್ಛಗೊಳಿಸಿದ್ದರು. ಈ ವೇಳೆ ಕಲ್ಯಾಣಿಯ ತಳಭಾಗದಲ್ಲಿ ಸ್ತಂಭದ ಸುತ್ತಲೂ ಇದ್ದ ಮಣ್ಣನ್ನು ಮೇಲೆತ್ತಿದ್ದರು.

ಇದರಿಂದ ಕಲ್ಯಾಣಿ ಕಂಗೊಳಿಸುತ್ತಿತ್ತು. ಅಲ್ಲದೆ ತಳಭಾಗದಲ್ಲಿ ಮಣ್ಣು ತೆಗೆದ ನಂತರ ಅಂತರ್ಜಲ ನಿಧಾನವಾಗಿ ಉಕ್ಕತೊಡಗಿತ್ತು. ಇದರಿಂದ ಸೇವಾ ಕಾರ್ಯ ನಡೆಸಿದ ಯುವ ಬ್ರಿಗೇಡ್ ಕಾರ್ಯಕರ್ತರು ಸಾರ್ಥಕಭಾವದಿಂದ ವಾಪಸ್ಸಾಗಿದ್ದರು.

ಸ್ವಚ್ಛತೆ ಮಾಡಿದ ಬಳಿಕ ಕಳೆದ ಎರಡು ದಿನದ ಹಿಂದೆ ಕಲ್ಯಾಣಿ ಮಧ್ಯದಲ್ಲಿದ್ದ ಸ್ತಂಭ ಗಾಳಿ ರಭಸಕ್ಕೆ ಬಿದ್ದಿದೆ. ಕಾಂಕ್ರಿಟ್‌ನಿಂದ ನಿರ್ಮಿಸಲಾಗಿದ್ದ ಸ್ತಂಭ ಬಿದ್ದ ರಭಸಕ್ಕೆ ಚೂರು ಚೂರಾಗಿದೆ. ಸ್ತಂಭದ ತುತ್ತತುದಿಯಲ್ಲಿದ್ದ ಶಿವನ ವಿಗ್ರಹವೂ ನೆಲಕ್ಕೆ ಉರುಳಿದೆ. ಇದರಿಂದ ಮೂರ್ತಿಯ ಕೈ ಹಾಗೂ ನಾಗರ ಹಾವಿಗೆ ಸಣ್ಣ ಪ್ರಮಾಣದಲ್ಲಿ ಹಾನಿಯಾಗಿದೆ. ಅದನ್ನು ಹೊರತುಪಡಿಸಿದರೆ ವಿಗ್ರಹಕ್ಕೆ ಯಾವುದೇ ಹಾನಿಯಾಗಿಲ್ಲ.

ಕಲ್ಯಾಣಿ ಪಕ್ಕ ಮರು ನಿರ್ಮಾಣಕ್ಕೆ ಚಿಂತನೆ

ಪುರಾತನ ಕಲ್ಯಾಣಿಯಲ್ಲಿ ಸ್ವಚ್ಛತಾ ಅಭಿಯಾನ ನಡೆಸಲಾಗಿತ್ತು. ಹಲವು ವರ್ಷಗಳಿಂದ ಕಲ್ಯಾಣಿಯಲ್ಲಿ ಹೂಳು ತುಂಬಿಕೊಂಡಿತ್ತು. ಮೆಟ್ಟಿಲುಗಳ ಮೇಲೆ ಗಿಡ ಬೆಳೆದುಕೊಂಡಿತ್ತು. ಇದರಿಂದ ಕಲ್ಯಾಣಿ ಇರುವಿಕೆ ತಿಳಿಯುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಕಳೆದ ಭಾನುವಾರ ಸ್ವಚ್ಛಗೊಳಿಸಲಾಗಿತ್ತು. ಈ ವೇಳೆ ಕಲ್ಯಾಣಿ ತಳ ಭಾಗದಲ್ಲಿದ್ದ ಮಣ್ಣನ್ನು ಮೇಲೆತ್ತಿದ್ದರಿಂದ ಅಂತರ್ಜಲ ಉಕ್ಕಲಾರಂಭಿಸಿತ್ತು. ಕಲ್ಯಾಣಿಯಲ್ಲಿ ಸಂಗ್ರಹವಾದ ನೀರಿಗೆ ಆಮೆಯೊಂದನ್ನು ನಾವೇ ಬಿಟ್ಟು ಬಂದಿದ್ದೆವು. ಆದರೆ ಎರಡು ದಿನದ ಹಿಂದಷ್ಟೇ ಸ್ತಂಭ ಬಿದ್ದಿದೆ. ಅದು ನಮ್ಮ ಗಮನಕ್ಕೆ ಬಂದಿದೆ. ಮೈಸೂರು ಮಹಾನಗರ ಪಾಲಿಕೆ ಅಥವಾ ಇತರೆ ಸಂಸ್ಥೆಗಳ ನೆರವಿನೊಂದಿಗೆ ಕಲ್ಯಾಣಿಯಲ್ಲಿದ್ದ ಮಾದರಿಯಲ್ಲೇ ಕಲ್ಯಾಣಿಯ ಪಕ್ಕದಲ್ಲಿ ಸ್ತಂಭ ಮರು ನಿರ್ಮಾಣಕ್ಕೆ ಚಿಂತನೆ ನಡೆಸಿದ್ದೇವೆ. ಕಂಬ ಬಿದ್ದಾಗ ಯುವ ಬ್ರಿಗೇಡ್ ಕಾರ್ಯಕರ್ತರು ಇರಲಿಲ್ಲ. ಅಲ್ಲದೆ ಈಶ್ವರನ ಮೂರ್ತಿಗೆ ದೊಡ್ಡ ಪ್ರಮಾಣದ ಹಾನಿಯಾಗಿಲ್ಲ.

- ಚಂದ್ರಶೇಖರ್, ಯುವ ಬ್ರಿಗೇಡ್

ಕೃಷಿ ಭೂಮಿಯನ್ನು ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ನೀಡುವ ಸಂಚು: ಕುರುಬೂರು ಶಾಂತಕುಮಾರ್ ಆರೋಪ



ಮೈಸೂರು, ಮೇ 10(ಎಂಟಿವೈ)- ಸರ್ಕಾರ ಭೂ ಮಾಫಿಯಾಗಳೊಂದಿಗೆ ಕೈ ಜೋಡಿಸಿ ನೂರಾರು ಎಕರೆ ಕೃಷಿ ಭೂಮಿಯನ್ನು ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ನೀಡುವ ಮೂಲಕ ರೈತರನ್ನು ಒಕ್ಕಲೆಬ್ಬಿಸಿ ಗ್ರಾಮಗಳನ್ನು ಸ್ಮಶಾನ ಮಾಡಲು ಸಂಚು ರೂಪಿಸುತ್ತಿದೆ ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಆರೋಪಿಸಿದ್ದಾರೆ.

ಮೈಸೂರು ತಾಲೂಕಿನ ವಾಜಮಂಗಲದಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಗ್ರಾಮ ಘಟಕವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇಶದ ಆಹಾರ ಉತ್ಪಾದನೆ ಏರಿಕೆಯಾಗಿದ್ದರೂ ರೈತರ ಸಮಸ್ಯೆಗಳು ಕಡಿಮೆಯಾಗುತ್ತಿಲ್ಲ. ರಸಗೊಬ್ಬರ ಬೆಲೆ ಏರಿಕೆ, ವಿದ್ಯುತ್ ಸಮಸ್ಯೆ, ಬೆಳೆದ ಬೆಳೆಗೆ ಸೂಕ್ತ ಬೆಲೆ ಸಿಗದೇ ಪರಿತಪಿಸುತ್ತಿರುವ ಸಂದರ್ಭದಲ್ಲೇ ಸರ್ಕಾರವೇ ರೈತರನ್ನು ಶೋಷಣೆ ಮಾಡಲು ಮುಂದಾಗಿದೆ ಎಂದರು.

ವಿವಿಧ ಕಾರಣಗಳನ್ನು ಮುಂದೊಡ್ಡಿ ರೈತರನ್ನು ಕೃಷಿಯಿಂದ ಒಕ್ಕಲೆಬ್ಬಿಸುವ ತಂತ್ರಗಾರಿಕೆ ನಡೆಸಲಾಗುತ್ತಿದೆ. ಹಳ್ಳಿಗಳು ಸ್ಮಶಾನವಾಗುವ ಮೊದಲು ರೈತರು ಎಚ್ಚೆತ್ತುಕೊಂಡು ಸಂಘಟಿತರಾಗಿ ನಿಲ್ಲಬೇಕು. ಕೃಷಿ ಜಮೀನು ಮೂರು ವರ್ಷ ವ್ಯವಸಾಯ ಮಾಡದಿದ್ದರೆ ಅದನ್ನು ಬೀಳು ಜಮೀನು ಎಂದು ಹೇಳುತ್ತಾರೆ. ಭೂ ಮಾಫಿಯಾದವರು ಕೃಷಿ ಜಮೀನು ಖರೀದಿಸಿ ಸಾವಿರಾರು ಎಕರೆ ಕೃಷಿ ಭೂಮಿಯನ್ನು ತಮ್ಮಲ್ಲಿಟ್ಟುಕೊಂಡಿದ್ದಾರೆ ಎಂದು ಆರೋಪಿಸಿದರು.

ಸರ್ಕಾರ ಬೀಳು ಜಮೀನನ್ನೂ ವಶಕ್ಕೆ ಪಡೆದುಕೊಳ್ಳುವುದಕ್ಕೆ ಮುಂದಾಗದೇ ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ನೀಡಲು ಮುಂದಾಗಿರುವುದು ಖಂಡನೀಯ. ರೈತರಿಂದ ಕಡಿಮೆ ಬೆಲೆಗೆ ಜಮೀನು ಕಿತ್ತುಕೊಂಡು ಹಳ್ಳಿಗಳ ಸುತ್ತ ಮೋಜಿನ ತಾಣಗಳನ್ನೂ ನಿರ್ಮಿಸಲಾಗುತ್ತಿವೆ. ಈ ಸಂಚನ್ನು ಅರಿಯದೆ ರೈತರು ಜಾತಿ, ಪಕ್ಷ, ರಾಜಕಾರಣಕ್ಕೆ ಜೋತು ಬಿದ್ದಿದ್ದಾರೆ. ಇನ್ನಾದರೂ ಎಚ್ಚೆತ್ತುಕೊಂಡು ಕೃಷಿ ಭೂಮಿ ಉಳಿಸಿಕೊಳ್ಳಬೇಕಾಗಿದೆ ಎಂದರು.

ಬಸವಣ್ಣ, ಡಾ.ಅಂಬೇಡ್ಕರ್, ಬುದ್ಧ, ವಾಲ್ಮೀಕಿ ಅವರಿಗೆ ಕೇವಲ ಪೂಜೆ ಮಾಡಿದರೆ ಸಾಲದು. ಅವರ ತತ್ವ-ಸಿದ್ಧಾಂತಗಳನ್ನು ಅಳವಡಿಸಿಕೊಳ್ಳಬೇಕು. ಆಗ ಮಾತ್ರ ದೇಶದಲ್ಲಿ ಸಮಸಮಾಜ ನಿರ್ಮಾಣ ಮಾಡಲು ಸಾಧ್ಯ. ವಾಮ ಮಾರ್ಗಗಳಿಂದ ಹಣ ಸಂಪಾದಿಸಿ ಅಧಿಕಾರ ಪಡೆಯುತ್ತಿರುವ ಜನಪ್ರತಿನಿಧಿಗಳು ಜನರ ಮೇಲೆ ಪೊಲೀಸ್ ಬಲ ಪ್ರಯೋಗಿಸುತ್ತಿದ್ದಾರೆ. ಇಂದಿನ ಸರ್ಕಾರಗಳು ರೈತರ ಸಮಾಧಿ ಮೇಲೆ ಅಧಿಕಾರ ನಡೆಸುತ್ತಿದ್ದು, ಸಂಪತ್ತು ಅಧಿಕಾರದ ದಾಹಕ್ಕಾಗಿ ರೈತರನ್ನು ಬಲಿಕೊಡುತ್ತಿದ್ದಾರೆ ಎಂದು ದೂರಿದರು.

ಇದೇ ವೇಳೆ ವಾಜಮಂಗಲ ಗ್ರಾಮದ ನೂರಾರು ರೈತರು ಸಂಘಟನೆಗೆ ಸೇರ್ಪಡೆಯಾದರು. ಕಾರ್ಯಕ್ರಮದಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಳ್ಳಿ ದೇವರಾಜ್, ಜಿಲ್ಲಾ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಗಸೂರು ಶಂಕರ್, ಮಂಡ್ಯ ಜಿಲ್ಲೆ ಸಂಚಾಲಕ ಕೆ.ಆರ್.ಎಸ್ ರಾಮೇಗೌಡ, ಬಿ.ಪಿ.ಪರಶಿವಮೂರ್ತಿ, ಮೈಸೂರು ತಾಲೂಕು ಅಧ್ಯಕ್ಷ ವೆಂಕಟೇಶ್, ತಾಲೂಕು ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ನಗರಾಧ್ಯಕ್ಷ ದೇವೇಂದ್ರ ಕುಮಾರ್ ಆರಾಧ್ಯ, ಪುಟ್ಟೇಗೌಡನಹುಂಡಿ ರಾಜು, ವಾಜಮಂಗಲ ಮಹಾದೇವು, ಮಾಲಿಂಗ ನಾಯಕ, ಶಿವಪ್ಪ, ದೊಡ್ಡ ಮಾದಪ್ಪ, ರಂಗಪ್ಪ, ಭಾಗ್ಯಮ್ಮ, ಸಾಕಮ್ಮ ವರಕೋಡು ಜಯರಾಮ್, ನಾಗೇಶ್, ಬೋರೇಗೌಡ, ಮುಖಂಡರಾದ ಕುರುಬೂರು ಸಿದ್ದೇಶ್, ಹೆಗ್ಗೂರು ರಂಗರಾಜು, ಗೌರಿಶಂಕರ್, ರಾಜೇಂದ್ರ, ಲಿಂಗರಾಜು, ಪಾಳ್ಯ ಸ್ವಾಮಿ ಇನ್ನಿತರರು ಪಾಲ್ಗೊಂಡಿದ್ದರು.

ಜೂ.4ರಂದು ಮೈಸೂರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಣೆ



ಮೈಸೂರು. ಮೇ 10(ಆರ್‌ಕೆಬಿ)- ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿಯನ್ನು ಜೂ.4ರಂದು ಮೈಸೂರಿನಲ್ಲಿ ರಾಜ್ಯ ಮಟ್ಟದ ಕಾರ್ಯಕ್ರಮವಾಗಿ ಅರ್ಥಪೂರ್ಣವಾಗಿ ಆಚರಿಸಲು ಮಂಗಳವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಯಿತು.

ಅಂದು ಬೆಳಗ್ಗೆ ಮೈಸೂರಿನ ಕೆ.ಆರ್.ವೃತ್ತದಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಗೆ ಮಾಲಾರ್ಪಣೆ, ಬಳಿಕ ಅರಮನೆ ಆವರಣದಲ್ಲಿರುವ ಪ್ರಸನ್ನ ಲಕ್ಷ್ಮಿ ವೆಂಕಟರಮಣಸ್ವಾಮಿ ದೇವಸ್ಥಾನದಿಂದ ನಾಲ್ವಡಿ ಅವರ ಅಲಂಕೃತ ಭಾವಚಿತ್ರದ ಮೆರವಣಿಗೆ ಆರಂಭವಾಗಲಿದ್ದು, ವಿವಿಧ ಜಾನಪದ ಕಲಾತಂಡಗಳು, ಸಂಘ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಲು ಅವಕಾಶ ನೀಡಲು ನಿರ್ಧರಿಸಲಾಯಿತು.

ನಂತರ ಕಲಾಮಂದಿರದಲ್ಲಿ ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರಿಂದ ನಾಲ್ವಡಿ ಅವರನ್ನು ಕುರಿತ ಉಪನ್ಯಾಸ ಏರ್ಪಡಿಸಲಾಗುವುದು. ನಾಲ್ವಡಿ ಕೃಷ್ಣರಾಜ ಒಡೆಯರ್ ಕುರಿತ ಗೀತ ಗಾಯನ, ನಾಟಕ ಇನ್ನಿತರೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಕ್ರಮ ವಹಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ತಿಳಿಸಲಾಯಿತು.

ಆಧುನಿಕ ಮೈಸೂರಿನ ಶಿಲ್ಪಿ ಎಂದೇ ಹೆಸರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿಯಲ್ಲಿ ಸಮಾಜದ ಎಲ್ಲಾ ವರ್ಗದವರೂ ಹಾಗೂ ಸರ್ಕಾರಿ ನೌಕರರು ಕಡ್ಡಾಯವಾಗಿ ಭಾಗವಹಿಸಲು ಸಭೆಯಲ್ಲಿ ಮನವಿ ಮಾಡಲಾಯಿತು. ಇದೇ ವೇಳೆ ನಾಲ್ವಡಿ ಅವರ ಜೀವನ ಹಾಗೂ ಸಾಧನೆಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸುವ ನಿಟ್ಟಿನಲ್ಲಿ ಕಿರುಹೊತ್ತಿಗೆಯನ್ನು ಮುದ್ರಿಸಿ ವಿತರಿಸಲು ತೀರ್ಮಾನಿಸಲಾಯಿತು.

ನಾಲ್ವಡಿಯವರ ಜಯಂತಿ ಕಾರ್ಯಕ್ರಮಕ್ಕೆ ಸರ್ಕಾರ 5 ಲಕ್ಷ ರೂ. ಬಿಡುಗಡೆ ಮಾಡಿದ್ದು, ಕಾರ್ಯಕ್ರಮ ಯಶಸ್ವಿಯಾಗಿ ಆಚರಿಸಲು ಎಲ್ಲರೂ ಸಹಕರಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಸಭೆಯಲ್ಲಿ ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪೂರ್ಣಿಮಾ, ಅಪರ ಜಿಲ್ಲಾಧಿಕಾರಿ ಡಾ.ಮಂಜುನಾಥಸ್ವಾಮಿ, ಅಪರ ಪೊಲೀಸ್ ವರಿಷ್ಠಾಧಿಕಾರಿ ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಹೆಚ್.ಚನ್ನಪ್ಪ ರಂಗಕರ್ಮಿ ರಾಜಶೇಖರ ಕದಂಬ, ಕನ್ನಡ ಹೋರಾಟಗಾರ ತಾಯೂರು ವಿಠ್ಠಲಮೂರ್ತಿ, ಪ್ರೊ.ನಂಜರಾಜ ಅರಸ್ ಇನ್ನಿತರೆ ಮುಖಂಡರು ಉಪಸ್ಥಿತರಿದ್ದರು.

ಮೃತರ ಅವಲಂಬಿತರ ನೇಮಕಾತಿಗೆ ಕೆಎಸ್‌ಐಸಿಗೆ 6 ವಾರ ಗಡುವು



ಮೈಸೂರು, ಮೇ 10(ಆರ್‌ಕೆಬಿ)- ಮೃತರ ಕುಟುಂಬಕ್ಕೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡದೆ ಕೆಎಸ್‌ಐಸಿ ಅನ್ಯಾಯ ಮಾಡಿದೆ ಎಂದು ಕೆಎಸ್‌ಐಸಿ ಮತ್ತು ಇತರೆ ಸಂಸ್ಥೆಗಳ ನೌಕರರ ಸಂಘ ಆಪಾದಿಸಿದೆ.

ಮೈಸೂರು ಸಿಲ್ಕ್ ಎಂದು ಪ್ರಸಿದ್ಧವಾದ ಸರ್ಕಾರಿ ಸ್ವಾಮ್ಯದ ಪ್ರಸಿದ್ಧ ಕೆಎಸ್‌ಐಸಿಯ ಬೆಂಗಳೂರಿನ ಕೇಂದ್ರ ಕಚೇರಿ, ಮೈಸೂರಿನ ರೇಷ್ಮೆ ನೇಯ್ಗೆ ಕಾರ್ಖಾನೆ ಹಾಗೂ ತಿ.ನರಸೀಪುರದ ರೇಷ್ಮೆ ನೂಲು ತೆಗೆಯುವ ಕಾರ್ಖಾನೆಗಳಲ್ಲಿ ಸೇವೆಯಲ್ಲಿರುವಾಗ ಮೃತಪಟ್ಟ 98 ನೌಕರರ ಅವಲಂಬಿತರಿಗೆ 22 ವರ್ಷದಿಂದ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿ ಉದ್ಯೋಗ ನೀಡದೆ ಕೆಎಸ್‌ಐಸಿ ನಿಗಮದ ಆಡಳಿತ ವರ್ಗದವರು ಅವಲಂಬಿತರನ್ನು ಬಲಿಪಶು ಮಾಡಿದ್ದಾರೆ ಎಂದು ಕೆಎಸ್‌ಐಸಿ ಹಾಗೂ ಇತರೆ ಸಂಸ್ಥೆಗಳ ನೌಕರರ ಸಂಘದ ಅಧ್ಯಕ್ಷ ಬಿ.ಸುಂದರ ಮಂಗಳವಾರ ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಆಪಾದಿಸಿದರು.

ಈ ಸಂಬಂಧ ಈಗಾಗಲೇ ರಾಜ್ಯ ಉಚ್ಛ ನ್ಯಾಯಾಲಯ ನೇಮಕಾತಿ ಮಾಡುವಂತೆ ಸರ್ಕಾರಕ್ಕೆ ಮತ್ತು ಕೆಎಸ್‌ಐಸಿ ಆಡಳಿತ ವರ್ಗಕ್ಕೆ ಆದೇಶ ನೀಡಿದ್ದರೂ ಕೆಎಸ್‌ಐಸಿ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ. ಹೀಗಾಗಿ ಅವಲಂಬಿತರು ಅನ್ಯಾಯಕ್ಕೊಳಗಾಗಿದ್ದಾರೆ. ಸರ್ಕಾರ ಕೂಡಲೇ ಅವಲಂಬಿತರಿಗೆ ಸರ್ಕಾರದ ಆದೇಶದ ಪ್ರಕಾರವೇ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಬೇಕು. 6 ವಾರದೊಳಗೆ ನೇಮಕಾತಿಗೆ ಕ್ರಮ ಕೈಗೊಳ್ಳದಿದ್ದರೆ ಚಳುವಳಿಯ ಹಾದಿ ಹಿಡಿಯಬೇಕಾಗುತದೆ ಎಂದು ಎಚ್ಚರಿಸಿದರು.

ಇದಕ್ಕೆ ಅವಕಾಶ ನೀಡದೆ ಕೆಎಸ್‌ಐಸಿ ಅಧಿಕಾರಿಗಳು 98 ಅವಲಂಬಿತರನ್ನು ನೇಮಕಾತಿ ಮಾಡಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಗೌರವಾಧ್ಯಕ್ಷ ಡಿ.ಎಸ್.ಸಿದ್ದರಾಜು, ಪ್ರಧಾನ ಕಾರ್ಯದರ್ಶಿ ನಾಗರಾಜು ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಜೆಎಸ್‌ಎಸ್ ವೈದ್ಯಕೀಯ ಮಹಾ ವಿದ್ಯಾಲಯದ ಪದವೀಧರ ದಿನಾಚರಣೆ

- 10 ಶ್ರೇಷ್ಠ ವಿದ್ಯಾರ್ಥಿಗಳಿಗೆ 9 ಚಿನ್ನದ ಪದಕ, 15 ನಗದು ಬಹುಮಾನ ಹಂಚಿಕೆ
- ಅತ್ಯುನ್ನತ 4 ಚಿನ್ನದ ಪದಕ, 5 ನಗದು ಬಹುಮಾನ ಪಡೆದ ಡಾ.ಆರ್.ಶ್ರೇಯಾನ್ಸ್ ಡರ್ಲಾಗೆ ಉನ್ನತ ಗೌರವ



ಮೈಸೂರು, ಮೇ 10(ಆರ್‌ಕೆಬಿ)- ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಅಂಗ ಸಂಸ್ಥೆಯಾದ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಪದವೀಧರ ದಿನಾಚರಣೆ ಮೇ 12ರಂದು ಸಂಜೆ 4.30 ಗಂಟೆಗೆ ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿ ನಡೆಯಲಿದೆ ಎಂದು ಪ್ರಾಂಶುಪಾಲ ಡಾ.ಹೆಚ್.ಬಸವನಗೌಡಪ್ಪ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 150 ಪದವೀಧರರಿಗೆ ಪದವಿ ಪ್ರಮಾಣಪತ್ರ ನೀಡಲಾಗುತ್ತಿದ್ದು, ಈ ಪೈಕಿ 10 ಶ್ರೇಷ್ಠ ವಿದ್ಯಾರ್ಥಿಗಳು 9 ಚಿನ್ನದ ಪದಕ ಮತ್ತು 15 ನಗದು ಬಹುಮಾನಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಅತ್ಯುನ್ನತ ಪದಕಗಳು ಮತ್ತು ಬಹುಮಾನಗಳನ್ನು ಪಡೆದ ಉನ್ನತ ಗೌರವಗಳನ್ನು ಈ ಬಾರಿ ಡಾ.ಆರ್.ಶ್ರೇಯಾನ್ಸ್ ಡರ್ಲಾ 4 ಚಿನ್ನದ ಪದಕ ಮತ್ತು 5 ನಗದು ಬಹುಮಾನಗಳಿಗೆ ಭಾಜನರಾಗಿದ್ದಾರೆ ಎಂದು ಹೇಳಿದರು.

ಪದವಿ ಪ್ರದಾನ ಸಮಾರಂಭದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ್‌ಮಠ ಅಧ್ಯಕ್ಷತೆ ವಹಿಸಲಿದ್ದಾರೆ. ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಸಮಕುಲಾಧಿಪತಿ ಡಾ.ಬಿ.ಸುರೇಶ್, ಕುಲಪತಿ ಡಾ.ಸುರಿಂದರ್ ಸಿಂಗ್ ಗೌರವ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಕೋಲಾರದ ದೇವರಾಜ ಅರಸ್ ವಿಶ್ವವಿದ್ಯಾನಿಲಯದ ಮಾಜಿ ಕುಲಾಧಿಪತಿ ಹಾಗೂ ಬೆಂಗಳೂರಿನ ಹಾಲಿ ಶೈಕ್ಷಣಿಕ ವಿಷಯ ಅಭಿವೃದ್ಧಿ ಮತ್ತು ಮೌಲ್ಯ ಗುಣಮಟ್ಟ ಮಾಪನ ಸಂಸ್ಥೆಯ ಮುಖ್ಯಸ್ಥ ಡಾ.ಎಸ್.ಕುಮಾರ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಪದವಿ ಪ್ರಮಾಣ ಪತ್ರ ನೀಡುವ ಸಲುವಾಗಿ ಪದವೀಧರರ ಸ್ವಾಗತ ಕಾರ್ಯಕ್ರಮವನ್ನು ಆಚರಿಸುತ್ತಿದ್ದು, ಎಂಬಿಬಿಎಸ್ ಪದವಿ ಮತ್ತು ಇಂಟರ್ನ್‌ಶಿಪ್ ಪೂರ್ಣಗೊಳಿಸಿದ ಎಲ್ಲಾ ನೂತನ ಪದವೀಧರರಿಗೆ ಹಿಪೊಕ್ರಟಿಕ್ ಪ್ರಮಾಣವನ್ನು ನೀಡಲಾಗುತ್ತದೆ ಎಂದು ತಿಳಿಸಿದರು.


ಇಂದಿನಿಂದ 'ಸೇತುಬಂಧ' ಪ್ರಾರಂಭ: ಯುದ್ಧದ ದುಷ್ಪರಿಣಾಮದಿಂದ ಸ್ಥಾನಪಲ್ಲಟಗೊಂಡ ಉಕ್ರೇನ್, ರಷ್ಯಾ ಮತ್ತು ಚೈನಾದಲ್ಲಿ ವ್ಯಾಸಂಗ ಮಾಡುತ್ತಿದ್ದ ಭಾರತೀಯ ವೈದ್ಯಕೀಯ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಆರಂಭಿಸಲಾಗಿರುವ ಸೇತುಬಂಧ ಪಠ್ಯಕ್ರಮದ ಯೋಜನೆಯಡಿ ಈಗಾಗಲೇ ಸೇರ್ಪಡೆಯಾಗಿರುವ ವಿದ್ಯಾರ್ಥಿಗಳಿಗೆ ಮೇ 11ರಿಂದ ತರಗತಿಗಳು ಪ್ರಾರಂಭಿಸಲಾಗುತ್ತಿದೆ ಎಂದು ಅವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕುಲಸಚಿವ ಡಾ.ಬಿ.ಮಂಜುನಾಥ, ಉಪ ಪ್ರಾಂಶುಪಾಲರಾದ ಡಾ.ಎಂ.ಎನ್.ಸುಮ, ಅಕಾಡೆಮಿ ನಿರ್ದೇಶಕ ಕುಶಾಲಪ್ಪ, ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಡಾ.ದಯಾನಂದ, ಆಡಳಿತಾಧಿಕಾರಿ ಎಸ್.ಆರ್.ಸತೀಶ್‌ಚಂದ್ರ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಬುಧವಾರ 11 ಮೇ 2022

12 ಚುನಾವಣೆ ಎದುರಿಸಿರುವ ವಿಶ್ವನಾಥ್ ಗಟ್ಟಿತನ ಮೆಚ್ಚಬೇಕು

ಧರ್ಮ ಸಂಸತ್ ಸಭೆಯಲ್ಲಿ ಶಾಸಕ ಸಾ.ರಾ.ಮಹೇಶ್ ಮೆಚ್ಚುಗೆ



ಕೆ.ಆರ್.ನಗರ ಪುರಸಭೆ ಬಯಲು ರಂಗಮಂದಿರದಲ್ಲಿ ಏರ್ಪಡಿಸಿದ್ದ ವಿಶ್ವನಾಥ್ ಅವರ 75ರ ಸಂಭ್ರಮಾಚರಣೆ ಅಂಗವಾಗಿ ನಡೆದ ಧರ್ಮ ಸಂಸತ್ ಸಭೆಯಲ್ಲಿ ಎಂಎಲ್‌ಸಿ ವಿಶ್ವನಾಥ್ ದಂಪತಿಯನ್ನು ಸನ್ಮಾನಿಸಲಾಯಿತು.

ಕೆ.ಆರ್.ನಗರ, ಮೇ 10– ಪ್ರಸ್ತುತ ದಿನನಿತ್ಯದ ಜೀವನ ನಿರ್ವಹಣೆಗೂ ಕಷ್ಟ ಪಡುತ್ತಿರುವ ಅನೇಕ ಚುನಾಯಿತ ಜನಪ್ರತಿನಿಧಿಗಳನ್ನು ಕಾಣುತ್ತಿದ್ದೇವೆ. ಇಂತಹ ವ್ಯವಸ್ಥೆಯಲ್ಲಿ 12 ಚುನಾವಣೆ ಎದುರಿಸಿರುವ ಎ.ಹೆಚ್. ವಿಶ್ವನಾಥ್ ಅವರ ಗಟ್ಟಿತನ ಮೆಚ್ಚಬೇಕು ಎಂದು ಶಾಸಕ ಸಾ.ರಾ.ಮಹೇಶ್ ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದ ಪುರಸಭೆ ಬಯಲು ರಂಗಮಂದಿರದಲ್ಲಿ ಏರ್ಪಡಿಸಿದ್ದ ವಿಧಾನಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್‌ರವರ 75ರ ಸಂಭ್ರಮಾಚರಣೆ ಅಂಗವಾಗಿ ನಡೆದ ಧರ್ಮ ಸಂಸತ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಚುನಾಯಿತ ಸದಸ್ಯರು ರಾಜಕೀಯ ಜೀವನದಲ್ಲಿ ಜನರು ಬದುಕು ಕಟ್ಟಿಕೊಳ್ಳಲು ಸಹಕಾರ ನೀಡಬೇಕು ಎಂದರು.

ವಿಶ್ವನಾಥ್ ತಮ್ಮ ಅಧಿಕಾರವಧಿಯಲ್ಲಿ ರಾಜ್ಯದ ಜನತೆಯ ಅನುಕೂಲಕ್ಕಾಗಿ ಅನೇಕ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಚುನಾವಣೆ ಸಂದರ್ಭ ರಾಜಕೀಯವಾಗಿ ಟೀಕೆ ಮಾಡುವುದು ಸಹಜ. ಆದರೆ ವೈಯಕ್ತಿಕವಾಗಿ ಕ್ಷೇತ್ರದ ಹಿರಿಯ ರಾಜಕಾರಣಿಯಾದ ವಿಶ್ವನಾಥ್ ಅವರನ್ನು ಸದಾ ಗೌರವಿಸುತ್ತೇನೆ ಎಂದರು.

ಇದಕ್ಕೂ ಮುನ್ನಾ, ವಿಶ್ವನಾಥ್ ಅವರು ಪಟ್ಟಣದ ಮೀನಾಕ್ಷಿ ಸಮೇತ ಅರ್ಕೇಶ್ವರ ಸ್ವಾಮಿ ದೇವಾಲಯ, ಖಾದರ್ ಲಿಂಗಾವಳಿಯವರ ದರ್ಗಾಕ್ಕೆ ಪೂಜೆ ಸಲ್ಲಿಸಿದರು. ನಂತರ ಡೋರ್ನಹಳ್ಳಿಯ ಸಂತ ಅಂತೋಣಿಯವರ ಚರ್ಚ್‌ನಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಪಟ್ಟಣದ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ಸಾರ್ವಜನಿಕ ಆಸ್ಪತ್ರೆ ಒಳ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದರು.

ಕಾಗಿನೆಲೆ ಕನಕಗುರು ಪೀಠದ ಶ್ರೀನಿರಂಜನಾನಂದಪುರಿ ಸ್ವಾಮೀಜಿ, ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಸೋಮನಾಥಸ್ವಾಮೀಜಿ, ಉರಿಲಿಂಗ ಪೆದ್ದಿ ಮಹಾಸಂಸ್ಥಾನ ಮಠದ ಶ್ರೀಜ್ಞಾನಪ್ರಕಾಶ ಸ್ವಾಮೀಜಿ, ವಿಶ್ವಕರ್ಮ ಮಹಾ ಸಂಸ್ಥಾನ ಅರೆ ಮಾದನಹಳ್ಳಿ ಮಠದ ಶಿವಸುಜ್ಞಾನಪ್ರಭು ಮಹಾ ಸ್ವಾಮೀಜಿ, ಹುಣಸೂರು ತಾಲೂಕು ಮಾದಳ್ಳಿ ಮಠದ ಸಾಂಬ ಸದಾಶಿವ ಸ್ವಾಮೀಜಿ, ಫಾದರ್ ಜೆ.ಜೋಸೆಫ್, ಜಾಮಿಯಾ ಮಸೀದಿ ಧರ್ಮಗುರು ಹಜರತ್ ಆಲೀ ಹಸನ್ ಹಿಮಾಮ್, ಗಾವಡಗೆರೆ ಗುರುಲಿಂಗ ಜಂಗಮ ಮಠದ ಶ್ರೀನಟರಾಜ ಸ್ವಾಮೀಜಿ, ಕನಕಗುರು ಪೀಠದ ಶ್ರೀಶಿವಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಲಾಲನಹಳ್ಳಿ ಗುರುಮಲ್ಲೇಶ್ ಮಠದ ಜಯದೇವಿ ತಾಯಿ, ಅರಕೆರೆ ವಿರಕ್ತ ಮಠದ ಸಿದ್ದೇಶ್ವರ ಸ್ವಾಮೀಜಿ, ಕರ್ಪೂರವಳ್ಳಿ ಜಂಗಮ ಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಸೇರಿದಂತೆ ಇನ್ನಿತರ ಮಠಾಧೀಶರು ಹಾಜರಿದ್ದರು. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಗೈರು ಹಾಜರಿಯಲ್ಲಿ ಮಠದ ಕಾರ್ಯದರ್ಶಿ ಮಂಜುನಾಥ್ ಹಾಜರಿದ್ದು ವಿಶ್ವನಾಥ್ ದಂಪತಿಯನ್ನು ಸನ್ಮಾನಿಸಿದರು.

ವೇದಿಕೆಯಲ್ಲಿ ಗುಜರಾತ್ ರಾಜ್ಯಸಭಾ ಸದಸ್ಯ ಸಾಗರ್ ರಾಯ್ಕ, ಕುರುಬ ಸಮಾಜ ಅಧ್ಯಕ್ಷ ಹರಿಭಾಯ್, ಆಂಧ್ರ ಪ್ರದೇಶದ ಕುರುಬ ಸಮಾಜ ಅಧ್ಯಕ್ಷ ಶ್ರೀನಿವಾಸಲು, ಶಾಸಕ ಹೆಚ್.ಪಿ.ಮಂಜುನಾಥ್, ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ, ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್, ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಟಿ.ಕೆ.ಚಿನ್ನಸ್ವಾಮಿ, ಕೆ.ಸಿ.ಪುಟ್ಟಸಿದ್ದ ಶೆಟ್ಟಿ, ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ, ಪುರಸಭೆ ಅಧ್ಯಕ್ಷ ಪ್ರಕಾಶ್, 75ರ ಸಂಭ್ರಮಾಚರಣೆ ಪದಾಧಿಕಾರಿಗಳಾದ ಎ.ಎಸ್.ಚನ್ನಬಸಪ್ಪ, ಡಾ.ಮೋಹನ್‌ದಾಸ್ ಭಟ್, ಹೆಚ್.ಪಿ.ಸಂಪತ್, ಡಾ.ಮೆಹಬೂಬ್ ಖಾನ್, ಕೆ.ಪಿ.ಪ್ರಭುಶಂಕರ್, ಹೆಚ್.ಎನ್.ವಿಜಯ್‌ಕುಮಾರ್, ಶಿವಣ್ಣ, ಕೆ.ಎನ್. ಬಸಂತ್, ಕಾಗಿನೆಲೆ ಕನಕ ಗುರುಪೀಠದ ಗಾಜೀಗೌಡ, ಜಿಪಂ ಮಾಜಿ ಸದಸ್ಯ ಸಿ.ಜೆ.ದ್ವಾರಕೀಶ್, ಅಚ್ಚುತಾನಂದ ಸೇರಿದಂತೆ ರಾಜ್ಯ ಹಾಗೂ ಅಕ್ಕಪಕ್ಕದ ರಾಜ್ಯಗಳ ಕುರುಬ ಸಮಾಜದ ಮುಖಂಡರು ಪಾಲ್ಗೊಂಡಿದ್ದರು.

ಇರುವವರೆಗೂ ಸಾಮರಸ್ಯ ರಾಜಕಾರಣ ಮಾಡುತ್ತೇನೆ

ಕೆ.ಆರ್.ನಗರ: ಮಾಜಿ ಸಿಎಂ ಡಿ.ದೇವರಾಜ ಅರಸರ ಕೃಪಾ ಕಟಾಕ್ಷದಿಂದ ರಾಜಕೀಯ ಕ್ಷೇತ್ರಕ್ಕೆ ಬಂದ ನಾನು 50 ವರ್ಷಗಳ ಕಾಲ ರಾಜಕೀಯ ಜೀವನದಲ್ಲಿದ್ದು, ಸಾಮರಸ್ಯ ರಾಜಕಾರಣ ಮಾಡಿಕೊಂಡು ಬಂದಿದ್ದೇನೆ. ನಾನು ಇರುವವರೆಗೂ ಸಾಮರಸ್ಯ ರಾಜಕಾರಣವನ್ನೇ ಮಾಡುತ್ತೇನೆ ಎಂದು ವಿಧಾನ ಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್ ತಿಳಿಸಿದರು.

ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ಜನತೆ ಆರ್ಶಿವಾದದಿಂದ 50 ವರ್ಷಗಳ ಕಾಲ ರಾಜಕಾರಣ ಮಾಡಲು ಸಾಧ್ಯವಾಗಿದ್ದು ಇವರ ಋಣ ತೀರಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. 1978ರಲ್ಲಿ ಕಾಂಗ್ರೆಸ್ ಪಕ್ಷ ಬಿ.ಫಾರಂ ಕೊಟ್ಟಾಗ ನನ್ನ ಜೊತೆಯಲ್ಲಿದ್ದವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು. ಈ ವೇಳೆ ವಿವಿಧ ಸಮಾಜದ ಮುಖಂಡರು ಮತ್ತು ಮಠಾಧೀಶರು ಹೆಚ್.ವಿಶ್ವನಾಥ್ ಮತ್ತು ಶಾಂತಮ್ಮ ದಂಪತಿಯನ್ನು ಅಭಿನಂದಿಸಿದರು.

ನಿವೃತ್ತ ಯೋಧನಿಗೆ ಅದ್ದೂರಿ ಸ್ವಾಗತ



ತಿ.ನರಸೀಪುರ, ಮೇ 10 (ಎಸ್‌ಕೆ)– ದೇಶದ ಸೈನಿಕನಾಗಿ 17 ವರ್ಷ ಸೇವೆ ಸಲ್ಲಿಸಿ ನಿವೃತ್ತರಾಗಿ ತವರಿಗೆ ಆಗಮಿಸಿದ 46ನೇ ಆರ್ಮಿ ರೆಜಿಮೆಂಟಿನ ಯೋಧ ಶಿವಕುಮಾರ್ ಅವರನ್ನು ತಾಲೂಕು ಯುವ ಬ್ರಿಗೇಡ್ ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಪಟ್ಟಣದಲ್ಲಿ ಅದ್ದೂರಿಯಾಗಿ ಸ್ವಾಗತಿಸಿದರು.

ತಿ.ನರಸೀಪುರದ ಮಾದಯ್ಯ ಹಾಗೂ ಪುಟ್ಟಮಾದಮ್ಮ ಅವರ ಪುತ್ರ ಶಿವಕುಮಾರ್ 2005ರ ಮೇ 29 ರಂದು ಭಾರತೀಯ ಸೇನೆಗೆ ಸೇರ್ಪಡೆಯಾದರು. ಮೊದಲಿಗೆ ಆರ್ಮಿ ಸೆಂಟರ್ ಮಹಾರಾಷ್ಟ್ರದ ಅಹಮದ್ ನಗರದ ಆರ್ಮಾಡ್ಕೋರ್‌ನಲ್ಲಿ ತರಬೇತಿ ಮುಗಿಸಿ, ಪಂಜಾಬಿನ ಪಟಿಯಾಲ, ಹರಿಯಾಣದ ಇಸಾರೆಲ್, ಕಾಶ್ಮೀರದ ರಾಷ್ಟ್ರೀಯ ರೈಫಲ್ಸ್, ಜಮ್ಮು, ನಸೀರಾಬಾದ್ ಹಾಗೂ ಲೇಹ್ ಲಡಾಕ್‌ಗಳಲ್ಲಿ ಸೇವೆ ಸಲ್ಲಿಸಿದರು. ನಂತರ ತರಬೇತಿ ಕೇಂದ್ರದ ಇನ್ಸ್‌ಪೆಕ್ಟರ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಬಳಿಕ ತವರಿಗೆ ಆಗಮಿಸಿದ ಇವರಿಗೆ ತಾಲೂಕು ಯುವ ಬ್ರಿಗೇಡ್ ಸೇರಿದಂತೆ ಹಲವಾರು ಸಂಘ ಸಂಸ್ಥೆಗಳು ಪಟ್ಟಣದ ಶ್ರೀಗುಂಜಾನರಸಿಂಹಸ್ವಾಮಿ ದೇವಸ್ಥಾನದ ಬಳಿ ಸನ್ಮಾನಿಸಿ, ಭಗವಾನ್ ವೃತ್ತ, ವಿದ್ಯೋದಯ ವೃತ್ತ, ಬಸ್ ನಿಲ್ದಾಣದ ವೃತ್ತದ ಮುಖಾಂತರ ಭಾರತ ಮಾತಾಕೀ ಜೈ, ವಂದೇ ಮಾತರಂ ಘೋಷಣೆಯೊಂದಿಗೆ ಬೈಕ್ ಜಾಥಾ ಮೂಲಕ ಸ್ವಾಗತ ಕೋರಲಾಯಿತು. ಜಾಥಾದಲ್ಲಿ ಯುವ ಬ್ರಿಗೇಡ್ ಕಾರ್ಯಕರ್ತರು ಹಾಗೂ ವಿವಿಧ ಸಂಘಟನೆಗಳ ದೇಶಭಕ್ತರು ಸೇರಿದಂತೆ ಯೋಧ ಶಿವಕುಮಾರ್ ಅವರ ತಾಯಿ, ಪತ್ನಿ, ಮಕ್ಕಳು ಸೇರಿದಂತೆ ಇತರರು ಭಾಗವಹಿಸಿದ್ದರು.

ಸರಗೂರಲ್ಲಿ ಪಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷರ ಪುಣ್ಯಸ್ಮರಣೆ



ಸರಗೂರು, ಮೇ10(ನಾಗೇಶ್)– ವ್ಯಕ್ತಿ ಬದುಕಿದ್ದಾಗ ಮಾಡುವ ಸಮಾಜಮುಖಿ ಕೆಲಸಗಳಿಂದ ಆತ ಸಾವನ್ನಪ್ಪಿದರೂ, ಜನಸಾಮಾನ್ಯರ ಮನದಲ್ಲಿ ಚಿರಸ್ಥಾಯಿಯಾಗಿರುತ್ತಾನೆ ಎಂದು ಮೈಸೂರು ರಕ್ಷಣಾ ವೇದಿಕೆ ಅಧ್ಯಕ್ಷ ಮೈ.ಕಾ.ಪ್ರೇಮಕುಮಾರ್ ತಿಳಿಸಿದರು.

ಪಟ್ಟಣದ ಚಿಕ್ಕದೇವಮ್ಮನವರ ಸರ್ಕಲ್‌ನಲ್ಲಿ ಆಯೋಜಿಸಿದ್ದ ಪಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಹನುಮನಾಯಕ (ಕವಿತಾ) ಅವರ ಮೊದಲ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಹನುಮನಾಯಕ ಪಕ್ಷಾತೀತರಾಗಿ ಹೆಚ್ಚು ಸ್ನೇಹಿತರನ್ನು ಹೊಂದಿದ್ದರು. ಯುವ ಮುಖಂಡರಾಗಿ, ಜನಪ್ರತಿನಿಧಿಯಾಗಿ ಉತ್ತಮ ಸೇವೆ ಸಲ್ಲಿಸಿದರು. ಅಂತಾರಾಷ್ಟ್ರೀಯ ವಾಲಿಬಾಲ್ ಆಟಗಾರರಾಗಿದ್ದ ಅವರು ಯುವಪೀಳಿಗೆಗೆ ವಾಲಿಬಾಲ್ ತರಬೇತಿ ನೀಡುತ್ತಿದ್ದರು. ಇವರ ಅಗಲಿಕೆಯಿಂದ ಸಮಾಜಕ್ಕೆ ತುಂಬಲಾರದ ನಷ್ಟ ಎಂದರು.

ಕಾರ್ಯಕ್ರಮದಲ್ಲಿ ಹನುಮ ನಾಯಕರ ಪತ್ನಿ ಲೋಲಿತಾ, ಪುತ್ರ ಧನುಷ್, ಸಹೋದರ ಎಸ್.ಹೆಚ್.ರಮೇಶ್, ಮಂಜುನಾಥ್, ಮಾಜಿ ಶಾಸಕ ಚಿಕ್ಕಣ್ಣ ಅವರ ಪುತ್ರ ಜಯಪ್ರಕಾಶ್, ನಾಯಕ ಸಮಾಜದ ಯಜಮಾನರಾದ ಚನ್ನಪ್ಪನಾಯಕ, ಬೆಟ್ಟನಾಯಕ, ತಾಲೂಕು ಬಿಜೆಪಿ ಅಧ್ಯಕ್ಷ ಗುರುಸ್ವಾಮಿ, ಬಾಬೂ ನಾಯಕ್, ಪಪಂ ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸದಸ್ಯರಾದ ಶ್ರೀನಿವಾಸ್, ನೂರಾಳಸ್ವಾಮಿ, ವೀರೇಶ್, ತಾಲೂಕು ಆರೋಗ್ಯಾಧಿಕಾರಿಗಳಾದ ಡಾ.ಟಿ.ರವಿಕುಮಾರ್, ಡಾ.ಸೋಮಣ್ಣ, ಡಾ.ಶರತ್, ದೈಹಿಕ ಶಿಕ್ಷಕ ಬಿ.ಚನ್ನಪ್ಪ, ಜುನಾಯಿದ್, ಮುಖಂಡರಾದ ಸಿ.ಬಸವರಾಜು, ಎಸ್.ಎ.ನಾಗೇಂದ್ರ, ಎನ್.ರವಿಕುಮಾರ್, ಮಹೇಂದ್ರ, ವಾಹನ ಚಾಲಕರ ಸಂಘದ ಮಾಜಿ ಅಧ್ಯಕ್ಷ ಎಸ್.ಹೆಚ್.ಲಿಂಗರಾಜು, ಭಜರಂಗದಳ ರಾಮು, ನವೀನ್, ಎಂ.ರವಿಕುಮಾರ್, ಮಾಯಿ, ಎಂ. ನಾಗರಾಜು, ರಂಗಸ್ವಾಮಿ, ಅನಿಲ್, ವಿಜಯ್, ಸ್ವಾಮಿ ಇನ್ನಿತರರಿದ್ದರು.

ನೇರಳೆ–ಹಂಪಾಪುರದಲ್ಲಿ ಸಂಪೂರ್ಣ ಜೀರ್ಣೋದ್ಧಾರಗೊಂಡ ಶ್ರೀ ಕಾರ್ನಾಡ್ ಮಾಲಮ್ಮ ದೇವಸ್ಥಾನ ಉದ್ಘಾಟನೆ

ನಂಜನಗೂಡು, ಮೇ 10– ನಂಜನಗೂಡು ತಾಲೂಕು, ದೊಡ್ಡ ಕವಲಂದೆ ಹೋಬಳಿ ನೇರಳೆ– ಹಂಪಾಪುರ ಗ್ರಾಮದಲ್ಲಿ ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿರುವ ಶ್ರೀ ಕಾರ್ನಾಡ್ ಮಾಲಮ್ಮ ದೇವಸ್ಥಾನದ ಉದ್ಘಾಟನೆ ಮತ್ತು ಕಳಸ ಪ್ರತಿಷ್ಠಾಪನೆ ಕಾರ್ಯಕ್ರಮ ಮೇ 21 ರಿಂದ 23 ರವರೆಗೆ ಏರ್ಪಡಿಸಲಾಗಿದೆ.

ಮೇ 21ರಂದು ಸಂಜೆ 7 ಗಂಟೆಗೆ ಗಂಗಾಪೂಜೆ, ಯಾಗಶಾಲಾ ಪ್ರವೇಶ, ಗಣಪತಿ ಹೋಮ ಇತ್ಯಾದಿ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಮೇ 22 ರಂದು ಬೆಳಗ್ಗೆ ಪುಣ್ಯಾಹ, ಕುಂಭಾವಾಹನ, ಅಷ್ಟದಿಕ್ಪಾಲಕರ ಹೋಮ, ಅಷ್ಟಬಂಧನ, ಬಲಿಹರಣ ಕಾರ್ಯಕ್ರಮಗಳು ಜರುಗಲಿವೆ.

ಮೇ 23 ರಂದು ಬೆಳಗ್ಗೆ 6.20 ರಿಂದ 7.20ರೊಳಗೆ ಸಲ್ಲುವ ಶುಭ ವೃಷಭ ಲಗ್ನದಲ್ಲಿ ಕುಂಭಾಭಿಷೇಕ, ಮಹಾಮಂಗಳಾರತಿಯೊಂದಿಗೆ ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡ ಶ್ರೀ ಕಾರ್ನಾಡ್ ಮಾಲಮ್ಮ ದೇವಸ್ಥಾನವನ್ನು ಉದ್ಘಾಟಿಸಲಾಗುವುದು.

ಹಂಪಾಪುರದಲ್ಲಿ ನೆಲೆಸಿರುವ ಶ್ರೀ ಬೇಗೂರು ಮಾಲರಸಮ್ಮ, ಶ್ರೀ ಚಿಕ್ಕ ಮಾಲರಸಮ್ಮ, ಶ್ರೀ ಕಾರ್ನಾಡು ಮಾಲಮ್ಮ, ಶ್ರೀ ಹೊಳೆ ಮಸಣಮ್ಮ, ಶ್ರೀ ಪವಾಡ ಮಾಲಾರಸಮ್ಮ ಮತ್ತು ಶ್ರೀ ಸಿದ್ದರಾಮೇಶ್ವರ ಹಾಗೂ ಚಿಕ್ಕಮ್ಮ ಚಿಕ್ಕದೇವಿಯವರ ಪೂಜೆ ಮತ್ತು ಉತ್ಸವ ಮೆರವಣಿಗೆಯನ್ನು ಏರ್ಪಡಿಸಲಾಗಿದೆ. ನಂತರ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಮಾಡಲಾಗುವುದು ಎಂದು ದೇವಸ್ಥಾನದ ಪ್ರಕಟಣೆ ತಿಳಿಸಿದೆ.

ಬಿಎಸ್‌ಪಿ ತೊರೆದು ಹಲವು ಮುಖಂಡರು ಬಿಜೆಪಿ ಸೇರ್ಪಡೆ



ಪಿರಿಯಾಪಟ್ಟಣ, ಮೇ 10 (ವೀರೇಶ್)– ಬಿಜೆಪಿ ದಲಿತ ವಿರೋಧಿ ಪಕ್ಷ ಇದು ಕೇವಲ ಬ್ರಾಹ್ಮಣರಿಗೆ ಸೀಮಿತವಾದ ಸಂಘಟನೆ ಎಂಬ ಅಪವಾದ ಪ್ರಸ್ತುತ ದೇಶಾದ್ಯಂತ ಅಳಿಸಿ ಹೋಗಿದೆ ಎಂದು ತಾಲೂಕು ಬಿಜೆಪಿ ಅಧ್ಯಕ್ಷ ಎಂ.ಎಂ. ರಾಜೇಗೌಡ ತಿಳಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಬಿಎಸ್‌ಪಿ ತೊರೆದು ಬಿಜೆಪಿಗೆ ಸೇರ್ಪಡೆಗೊಂಡ ಶಾಸಕ ಎನ್.ಮಹೇಶ್ ಅನುಯಾಯಿಗಳನ್ನು ಪಕ್ಷಕ್ಕೆ ಬರಮಾಡಿಕೊಂಡು ಅವರು ಮಾತನಾಡಿದರು.

ದಲಿತ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರ ಹೆಸರಿನಲ್ಲಿ ದೇಶ ಆಳಿದ ಕಾಂಗ್ರೆಸ್ ಈ ವರ್ಗಕ್ಕೆ ನೀಡಿದ ಕೊಡುಗೆ ಏನು ಎಂದು ಪ್ರಶ್ನಿಸಿದ ಅವರು, ಕೇಂದ್ರದಲ್ಲಿ ಈಗ 64% ಹಿಂದುಳಿದ ವರ್ಗದ ಸಚಿವರಿದ್ದಾರೆ. ಇದು ಭಾಜಪದಲ್ಲಿ ಮಾತ್ರ ಸಾಧ್ಯ, ಅಧಿಕಾರ ವಿಕೇಂದ್ರಿಕರಣ ನಮ್ಮ ಪಕ್ಷದಲ್ಲಿ ಮಾತ್ರ ಕಾಣಲು ಸಾಧ್ಯ. ಮುಂಬರುವ ವಿಧಾನಸಭಾ ಚುನಾವಣೆಗೆ ಈಗಿನಿಂದಲೇ ಕಾರ್ಯಕರ್ತರು ಸನ್ನದ್ಧರಾಗಿ ಪಕ್ಷದ ಅಭ್ಯರ್ಥಿ ಗೆಲ್ಲಿಸುವ ಮೂಲಕ ಪ್ರಧಾನಿ ಮೋದಿ ಕೈ ಬಲಪಡಿಸಬೇಕು ಎಂದು ಮನವಿ ಮಾಡಿದರು.

ಪಕ್ಷಕ್ಕೆ ಸೇರ್ಪಡೆಗೊಂಡ ಬಿಎಸ್ಪಿ ಮಾಜಿ ಅಧ್ಯಕ್ಷ ವಕೀಲ ಲೋಕೇಶ್ ಮಾತನಾಡಿದರು. ಈ ವೇಳೆ ಬಿಎಸ್‌ಪಿ ಮುಖಂಡರಾದ ಚಿನ್ನಸ್ವಾಮಿ, ರಾಜಪ್ಪ, ಮಹೇಶ್, ಶಿವಪ್ಪ, ಲೋಕೇಶ್ ಸೇರಿದಂತೆ ಹಲವು ಮುಖಂಡರು ಬಿಎಸ್‌ಪಿ ತೊರೆದು ಬಿಜೆಪಿಗೆ ಸೇರ್ಪಡೆಗೊಂಡರು. ಈ ವೇಳೆ ಬಿಜೆಪಿ ಮುಖಂಡರಾದ ಸೋಮಶೇಖರ್, ಸತೀಶ್, ಚಂದ್ರು, ವೀರಭದ್ರ, ರವಿ, ನಿರ್ಮಲ, ನಾರಾಯಣ, ಶುಭಗೌಡ, ಲೋಕೇಶ್ ಮಧು, ಜವರಪ್ಪ ಸೇರಿದಂತೆ ಹಲವು ಮುಖಂಡರು ಹಾಜರಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮೇ 16ಕ್ಕೆ ಪ್ರತಿಭಟನೆ

ಸರಗೂರು, ಮೇ 10(ನಾಗೇಶ್)– ವಿವಿಧ ಬೇಡಿಕೆ ಈಡೇರಿಕೆ ಹಾಗೂ ನಾಯಕ ಸಮುದಾಯಕ್ಕೆ ಶೇ.7.5ರಷ್ಟು ಮೀಸಲಾತಿ ನೀಡಬೇಕೆಂದು ಆಗ್ರಹಿಸಿ ರಾಜನಹಳ್ಳಿ ಮಠದ ಶ್ರೀವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ನಡೆಸುತ್ತಿರುವ ಧರಣಿ ಸತ್ಯಾಗ್ರಹ ಬೆಂಬಲಿಸಿ ತಾಲೂಕಿನ ನಾಯಕ ಸಂಘದಿಂದ ಮೇ 16 ರಂದು ಬೃಹತ್ ಶಾಂತಿಯುತ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಗಿದೆ ಎಂದು ನಾಯಕರ ಸಂಘದ ಅಧ್ಯಕ್ಷ ಪುರದಕಟ್ಟೆ ಬಸವರಾಜು ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ನಡೆದ ತಾಲೂಕು ನಾಯಕ ಸಂಘದ ಸಭೆಯಲ್ಲಿ ಮಾತನಾಡಿದ ಅವರು, ಶ್ರೀವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ಸತ್ಯಾಗ್ರಹ ನಡೆಸುತ್ತಿದ್ದರೂ, ಸರ್ಕಾರ ಕಣ್ಮುಚ್ಚಿ ಕುಳಿತಿದೆ. ಹೀಗಾಗಿ ಅವರನ್ನು ಬೆಂಬಲಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

ಸಭೆಯಲ್ಲಿ ನಾಯಕರ ಸಂಘದ ಗೌರವಾಧ್ಯಕ್ಷ ಬಸವ ನಾಯಕ, ಉಪಾಧ್ಯಕ್ಷ ಶ್ರೀನಿವಾಸ್, ಅಂಕನಾಯಕ ಇತರರಿದ್ದರು.

ಹುಣಸೂರು ತಾಲೂಕಿನಲ್ಲಿ ಭಾರೀ ಮಳೆ, ಲಕ್ಷಾಂತರ ರೂ. ನಷ್ಟ

ಜನರಿಗೆ ಸ್ಪಂದಿಸದ ಅಧಿಕಾರಿಗಳಿಗೆ ಶಾಸಕರಿಂದ ತರಾಟೆ



ಹುಣಸೂರು, ಮೇ10(ಕೆಕೆ)– ನಮ್ಮ ಅಧಿಕಾರಾವಧಿಯಲ್ಲಿ ದಿನದ 24 ಗಂಟೆ ಜನಸಾಮಾನ್ಯರ ಕೆಲಸ ಮಾಡುತ್ತಿದ್ದು, ಪ್ರಕೃತಿ ವಿಕೋಪದಂತಹ ಹಾನಿ ಪ್ರದೇಶಗಳಿಗೆ ರಾತ್ರಿಯೇ ಭೇಟಿ ನೀಡಿ ಬೆಳಗ್ಗೆಯೇ ಪರಿಹಾರ ಕೊಡಿಸುತ್ತಿದ್ದೇವು. ಆದರೆ ಇದೀಗ ಎರಡ್ಮೂರು ದಿನಗಳಾದರೂ ಜನರಿಗೆ ಸ್ಪಂದಿಸದೆ ತಾತ್ಕಾಲಿಕ ಪರಿಹಾರ ನೀಡಿಲ್ಲ ಎಂದು ಶಾಸಕ ಹೆಚ್.ಪಿ.ಮಂಜುನಾಥ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಕಳೆದ ಎರಡು ಮೂರು ದಿನಗಳಿಂದ ಸುರಿಯುತ್ತಿರುವ ಭಾರೀ ಮಳೆ ಮತ್ತು ಬಿರುಗಾಳಿಗೆ ತಾಲೂಕಿನಲ್ಲಿ ಸಾಕಷ್ಟು ಹಾನಿಯಾಗಿದ್ದು, ಹಾನಿ ಪ್ರದೇಶಗಳಿಗೆ ಭೇಟಿ ನೀಡಿ ಸಂಜೆ ತಹಸೀಲ್ದಾರ್ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿ ಶಾಸಕರು ತರಾಟೆಗೆ ತೆಗೆದುಕೊಂಡು ಕಿಡಿಕಾರಿದರು.

ಕಮಿಷನ್ ನೋಡಬೇಡಿ: ಪ್ರಕೃತಿ ವಿಕೋಪ ದಂತಹ ಹಾನಿ ಪ್ರದೇಶಗಳ ಅಸಹಾಯಕರಿಗೆ ಸಹಾಯ ಮಾಡಿ. ಇದರಲ್ಲಿ ಕಮಿಷನ್ ನೋಡಬೇಡಿ. ನೊಂದ ವರಗೋಳು ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ. ನಿಮ್ಮ ನಿರ್ಲಕ್ಷ್ಯದಿಂದ ಅಮಾಯಕರ ಪ್ರಾಣಹಾನಿಯಾದರೆ ಯಾರು ಹೊಣೆ. ಸರ್ಕಾರ ಶ್ರೀಸಾಮಾನ್ಯರ ಕಾಯುವ ವ್ಯಕ್ತಿ ಎಂಬುದನ್ನು ಮರೆಯಬೇಡಿ ಎಂದರು.

ಜನರ ಬಗ್ಗೆ ಬದ್ಧತೆ, ಕಾಳಜಿ ಇಲ್ಲ: ಪ್ರಕೃತಿ ವಿಕೋಪದಿಂದ ಇಡೀ ತಾಲೂಕಿನ ಬಹುತೇಕ ಭಾಗ ತತ್ತರಿಸಿ ಹೋಗಿದೆ. ಶಾಸಕನಾಗಿ ನಾನು ಬೆಳಗ್ಗೆ 6 ಗಂಟೆಗೆ ಎದ್ದು ಬಂದು ಗ್ರಾಮೀಣ ಪ್ರದೇಶಗಳಿಗೆ ಭೇಟಿ ನೀಡಿ ಸಂತ್ರಸ್ತರಿಗೆ ಸಾಂತ್ವನ ಹೇಳಿ ನನ್ನ ಕೈಲಾದಷ್ಟು ಸಹಾಯ ಮಾಡುತ್ತಿದ್ದೇನೆ. ಆದರೆ ನೀವುಗಳು ಏಕೆ ಬರುತ್ತಿಲ್ಲ, ಜವಾಬ್ದಾರಿ ಏಕೆ ಇಲ್ಲ, ನಿಮಗೇನಾದರೂ ಸರ್ಕಾರದ ಗೈಡ್‌ಲೈನ್ ಇದೆಯೇ? ಅಧಿಕಾರಿಗಳಾದ ನಿಮಗೆ ಏಕೆ ಬದ್ಧತೆ ಇಲ್ಲ. ಜನರ ಬಗ್ಗೆ ಕಾಳಜಿ ಇಲ್ಲ. ಜನರು ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ. ಜನತೆಗೆ ಹೆದರಿ ಕೆಲಸ ಮಾಡಿ ಎಂದರು.

ರೈತರ ಶಾಪ ತಟ್ಟುತ್ತದೆ: ಮಳೆ ಹಾನಿ ಪ್ರದೇಶಗಳಿಗೆ ತೆರಳಿ ನೊಂದ ಅಸಹಾಯಕರಿಗೆ ಸಹಾಯ ಮಾಡಿ ಸರ್ಕಾರಕ್ಕೆ ಮಾಹಿತಿ ನೀಡಿ. ಕಚೇರಿಯಲ್ಲೇ ಕುಳಿತು ಸುಳ್ಳು ಮಾಹಿತಿ ನೀಡಿ ಸರ್ಕಾರದ ದಿಕ್ಕು ತಪ್ಪಿಸಬೇಡಿ. ಗ್ರಾಮವೊಂದರಲ್ಲಿ 23 ಎಕರೆ ಬಾಳೆ ಹಾನಿಯಾಗಿರುವುದಕ್ಕೆ 4 ಎಕರೆ ಎಂದು ಸುಳ್ಳು ಮಾಹಿತಿ ನೀಡಿದ್ದೀರಿ. ರೈತರ ನೋವಿನ ಶಾಪ ನಿಮಗೆ ತಟ್ಟುತ್ತದೆ ಎಂದು ಅಧಿಕಾರಿಗಳನ್ನು ಜಾಡಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕರು, ಕಳೆದ 15 ದಿನದಿಂದ ತಾಲೂಕಿನಲ್ಲಿ ಸುರಿಯುತ್ತಿರುವ ಭಾರೀ ಬಿರುಗಾಳಿ ಮಳೆಗೆ ಶೀಟ್, ಹೆಂಚಿನ ಮನೆಗಳ ಮೇಲ್ಛಾವಣಿ ಹಾರಿ ಹೋಗಿದೆ. ಅಲ್ಲದೆ 40–50 ವರ್ಷಗಳ ಹಳೆ ಮನೆಗಳು ಕುಸಿದಿವೆ. 200–250 ವರ್ಷದ ಹಳೆ ಮರಗಳು ಬುಡಮೇಲಾಗಿವೆ. ಒಟ್ಟಾರೆ ತಾಲೂಕಿನಾದ್ಯಂತ 189 ಮನೆಗಳು ಭಾಗಶಃ ಹಾಗೂ 46 ಮನೆಗಳು ಶೇ.75ಕ್ಕೂ ಹೆಚ್ಚು ಹಾನಿಗೆ ಒಳಗಾಗಿವೆ.

ಎನ್‌ಡಿಆರ್‌ಎಫ್ ನಿಧಿಯಿಂದ ಪರಿಹಾರ: ಎನ್‌ಡಿಆರ್‌ಎಫ್ ನಿಧಿಯಿಂದ ಭಾಗಶಃ ಹಾನಿಯಾಗಿರುವ ಮನೆಗಳಿಗೆ 5400 ರೂ., ಶೇ.75ಕ್ಕೂ ಹೆಚ್ಚು ಹಾನಿಗೆ ಒಳಗಾಗಿರುವ ಮನೆಗಳಿಗೆ 95,100 ರೂ. ನೀಡಲಾಗುವುದು. ಜೊತೆಗೆ ಎಸ್‌ಸಿ, ಎಸ್‌ಟಿ ಸಮುದಾಯದ ಫಲಾನುಭವಿಗಳಿಗೆ ತಾಪಂ ಶೇ.25ರ ನಿಧಿಯಿಂದ 5 ಸಾವಿರ ನೀಡಲಾಗುವುದು ಹಾಗೂ ಜಾನುವಾರು ಕೊಟ್ಟಿಗೆಗಳಿಗೆ 2200 ರೂ. ನೀಡಲಾಗುವುದು ಎಂದು.

ಟ್ಯಾಂಕ್ ಮೂಲಕ ಕುಡಿಯುವ ನೀರು: ತಾಲೂಕಿನಾದ್ಯಂತ ವಿದ್ಯುತ್ ಕಂಬಗಳು ನೆಲಕ್ಕುರುಳಿ ಸಾಕಷ್ಟು ಹಾನಿಯಾಗಿದ್ದು, ವಿದ್ಯುತ್ ನೀಡಲು ಚೆಸ್ಕಾಂ ಇಲಾಖೆ ಸಾಕಷ್ಟು ಹರಸಾಹಸ ಮಾಡುತ್ತಿದೆ. ಇದರಿಂದ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದ್ದು, ಅಂತಹ ಕಡೆಗಳಲ್ಲಿ ಟ್ಯಾಂಕ್ ಮೂಲಕ ಕುಡಿಯುವ ನೀರು ನೀಡಲಾಗುತ್ತಿದೆ ಎಂದರು.

ಸರ್ಕಾರ ವಿಶೇಷ ಪ್ಯಾಕೇಜ್ ಘೋಷಣೆ ಮಾಡಲಿ: ಪ್ರಕೃತಿ ವಿಕೋಪದಂತಹ ಸಂದರ್ಭ ಸರ್ಕಾರ ವಿಶೇಷ ಪ್ಯಾಕೇಜ್ ಘೋಷಣೆ ಮಾಡಿ ತಕ್ಷಣ ನೊಂದವರಿಗೆ ಸ್ಪಂದಿಸಬೇಕು. ಕಳೆದೆರಡು ವರ್ಷಗಳ ಹಿಂದೆ ಮಳೆ ಹಾನಿಯಿಂದ ತತ್ತರಿಸಿದ ಫಲಾನುಭವಿಗಳಿಗೆ ಸರ್ಕಾರ ಘೋಷಿಸಿದ ಪರಿಹಾರದ ಹಣ ಇನ್ನೂ ಬಂದಿಲ್ಲ ಎಂದು ಆರೋಪಿಸಿದರು.

ಇಂದು ಬೆಳಗ್ಗೆಯಿಂದ ಸಂಜೆವರೆಗೆ ತಾಲೂಕಿನ ಹರಿನಹಳ್ಳಿ, ಕಲ್ಕುಡ, ಹೆಬ್ಬಾಳ ಹಾಡಿ, ಹೆಮ್ಮಿಗೆ ಹಾಡಿ, ಹೆಮ್ಮಿಗೆ ಗ್ರಾಮ, ಹೆಮ್ಮಿಗೆ ಕಾಲೋನಿ, ಕಾಳಬೂಚನಹಳ್ಳಿ, ತಟ್ಟೆಕೆರೆ, ಹನಗೋಡು, ನಿಲುವಾಗಿಲು, ಕರ್ಣಕುಪ್ಪೆ, ವದ್ದಿಮನುಗನಹಳ್ಳಿ, ಸೇರಿದಂತೆ ಸಾಕಷ್ಟು ಗ್ರಾಮಗಳಿಗೆ ಭೇಟಿ ಮಾಡಿದ್ದು, ಎಲ್ಲಾ ಕಡೆ ಸಾಕಷ್ಟು ಹಾನಿಯಾಗಿದೆ. ತಾಲೂಕು ಮಟ್ಟದ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಗ್ರಾಮಕ್ಕೆ ಭೇಟಿ ನೀಡಿ ಹಾನಿ ಬಗ್ಗೆ ಪರಿಶೀಲಿಸಿ ವರದಿ ಬಂದ ನಂತರ ಸರ್ಕಾರದ ಪರಿಹಾರ ಸಿಗಲಿದೆ ಎಂದರು.

ಸಭೆಯಲ್ಲಿ ತಹಸೀಲ್ದಾರ್ ಡಾ. ಅಶೋಕ್, ತಾಪಂ ಇಓ ಗಿರೀಶ್, ನಗರಸಭೆ ಪೌರಾಯುಕ್ತ ರವಿಕುಮಾರ್ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಬೆ.9.30ಕ್ಕೆ, ಮ.12ಕ್ಕೆ, ಮ.2.25ಕ್ಕೆ, ಸಂ.4.50ಕ್ಕೆ, ರಾ.7.20ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ದ್ವಿಮುಖ (ಕ): ಬೆ.10.30ಕ್ಕೆ, ಅವತಾರ ಪುರುಷ (ಕ): ಮ.1.15ಕ್ಕೆ, ರಾ.7.15ಕ್ಕೆ, ಕೆಜಿಎಫ್ 2 (ಕ): ಮ.3.55ಕ್ಕೆ, ಸಿಬಿಐ 5: ದಿ ಬ್ರೈನ್ (ಮ): ರಾ.10ಕ್ಕೆ.
ಸ್ಕ್ರೀನ್ 3	ಪುರುಷೋತ್ತಮ (ಕ): ಬೆ.10.15ಕ್ಕೆ, ಟಕ್ಕರ್ (ಕ): ಮ.1.15ಕ್ಕೆ, ರನ್‌ವೇ 34 (ಹಿಂ): ಸಂ.4ಕ್ಕೆ, ದಿ ಕನ್ವರ್ಷನ್ (ಹಿಂ): ರಾ.7ಕ್ಕೆ, ಮಕಲ್ (ಮ): ರಾ.9.50ಕ್ಕೆ.
ಸ್ಕ್ರೀನ್ 4	ಕೆಜಿಎಫ್ 2(ಕ): ಬೆ.10ಕ್ಕೆ, ಸಂ.6.35ಕ್ಕೆ, ರಾ.9.50ಕ್ಕೆ, ಐಂಗಾರನ್ (ತ): ಮ.1.15ಕ್ಕೆ, ಅವತಾರ ಪುರುಷ (ಕ): ಸಂ.4ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಬೆ.11ಕ್ಕೆ, ಮ.1.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕೆಜಿಎಫ್ 2(ಕ): ಬೆ.9.40ಕ್ಕೆ, ಮ.3.40ಕ್ಕೆ, ರಾ.9.50ಕ್ಕೆ, ಅವತಾರ ಪುರುಷ (ಕ): ಮ.12.55ಕ್ಕೆ, ರಾ.7.05ಕ್ಕೆ.
ಸ್ಕ್ರೀನ್ 3	ಡಾಕ್ಟರ್ ಸ್ಟ್ರೇಂಜ್(ಇಂ): ಬೆ.9.30ಕ್ಕೆ, ಮ.3.35ಕ್ಕೆ, ಕೆಜಿಎಫ್ 2 (ಕ): ಮ.12.10ಕ್ಕೆ, ಸಂ.6.15ಕ್ಕೆ, ಡಾಕ್ಟರ್ ಸ್ಟ್ರೇಂಜ್ (ಹಿಂ): ರಾ.9.40ಕ್ಕೆ.
ಸ್ಕ್ರೀನ್ 4	ಅವತಾರ ಪುರುಷ (ಕ): ಬೆ.10.15ಕ್ಕೆ, ಟಕ್ಕರ್ (ಕ): ಮ.1.05ಕ್ಕೆ, ಐಂಗಾರನ್ (ತ): ಮ.3.50ಕ್ಕೆ, ಪುರುಷೋತ್ತಮ (ಕ): ಸಂ.6.40ಕ್ಕೆ, ಸಿಬಿಐ (ಮ): ರಾ.9.50ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪುರುಷೋತ್ತಮ (ಕ): ಬೆ.10.30ಕ್ಕೆ, ಅವತಾರ ಪುರುಷ (ಕ): ಮ.1.30ಕ್ಕೆ, ಸಂ.4.10ಕ್ಕೆ, ಸಂ.6.55ಕ್ಕೆ.
ಸ್ಕ್ರೀನ್ 2	ಅವತಾರ ಪುರುಷ (ಕ): ಬೆ.10.30ಕ್ಕೆ.
ಸ್ಕ್ರೀನ್ 3	ಡಾಕ್ಟರ್ ಸ್ಟ್ರೇಂಜ್ (ಇಂ): ಬೆ.10.30ಕ್ಕೆ, ಸಂ.4.15ಕ್ಕೆ, ಸಂ.6.45ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಟಕ್ಕರ್ (ಕ): ಬೆ.10.30ಕ್ಕೆ, ಸಂ.4.05ಕ್ಕೆ, ಪುರುಷೋತ್ತಮ (ಕ): ಮ.1ಕ್ಕೆ, ಸಿಬಿಐ 5: ದಿ ಬ್ರೈನ್ (ಮ): ಸಂ.6.30ಕ್ಕೆ, ರಾ.9.45ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2 (ಕ): ಬೆ.8ಕ್ಕೆ, ಬೆ.9ಕ್ಕೆ, ಬೆ.10.30ಕ್ಕೆ, ಬೆ.11.15ಕ್ಕೆ, ಬೆ.11.30ಕ್ಕೆ, ಮ.12.30ಕ್ಕೆ, ಮ.2ಕ್ಕೆ, ಮ.2.45ಕ್ಕೆ, ಮ.3ಕ್ಕೆ, ಸಂ.4ಕ್ಕೆ, ಸಂ.5.30ಕ್ಕೆ, ಸಂ.6.15ಕ್ಕೆ, ಸಂ.6.30ಕ್ಕೆ, ರಾ.7.30ಕ್ಕೆ, ರಾ.9ಕ್ಕೆ, ರಾ.9.45ಕ್ಕೆ, ರಾ.10ಕ್ಕೆ, ಆರ್‌ಆರ್‌ಆರ್ (ಕ): ರಾ.9.30ಕ್ಕೆ, ಕೆಜಿಎಫ್ 2 (ಹಿಂ): ಬೆ.10.45ಕ್ಕೆ, ಸಂ.6ಕ್ಕೆ, ಆರ್‌ಆರ್‌ಆರ್ (ತೆ): ಮ.2.15ಕ್ಕೆ, ಬೀಸ್ಟ್ (ತ): ಬೆ.11.30ಕ್ಕೆ, ಮ.2.50ಕ್ಕೆ, ಸಂ.6.10ಕ್ಕೆ, ರಾ.9.30ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಆಚಾರ್ಯ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೆಜಿಎಫ್–2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕೆಜಿಎಫ್ 2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಜೇಮ್ಸ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೆಜಿಎಫ್–2(ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಜೇಮ್ಸ್ (ಕ)	4 ಪ್ರದರ್ಶನಗಳು
ಸಂಗಂ	
ಅವತಾರ ಪುರುಷ (ಕ)	4 ಪ್ರದರ್ಶನಗಳು
ಲಿಡೋ	
ಆರ್‌ಆರ್‌ಆರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಅವತಾರ ಪುರುಷ (ಕ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಟಕ್ಕರ್ (ಕ)	4 ಪ್ರದರ್ಶನಗಳು

ಲಖನೌ ವಿರುದ್ಧ ಗುಜರಾತ್‌ಗೆ ಗೆಲುವು



ಪುಣೆ, ಮೇ 10– ಶುಭಮನ್‌ಗಿಲ್ ಅರ್ಧ ಶತಕ ಹಾಗೂ ರಶೀದ್ ಖಾನ್ ಸಿನ್ ದಾಳಿಯ ನೆರವಿನಿಂದ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಗುಜರಾತ್ ಟೈಟನ್ಸ್ 62ರನ್‌ಗಳ ಅಂತರದ ಭರ್ಜರಿ ಗೆಲುವು ದಾಖಲಿಸಿತು. ಈ ಮೂಲಕ ಆಡಿದ 12 ಪಂದ್ಯಗಳಲ್ಲಿ 9ರಲ್ಲಿ ಗೆಲುವು ದಾಖಲಿಸಿ 18 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ಮೊದಲ ಸ್ಥಾನಕ್ಕೇರಿದೆ.

ಇಲ್ಲಿನ ಎಂಸಿಎ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಟೂರ್ನಿಯ 57ನೇ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 144ರನ್‌ಗಳ ಸ್ಪರ್ಧಾತ್ಮಕ ಮೊತ್ತ ದಾಖಲಿಸಿತು. ತಂಡದ ಪರವಾಗಿ ಶುಭಮನ್ ಗಿಲ್ 63, ಡೇವಿಡ್ ಮಿಲ್ಲರ್ 26, ರಾಹುಲ್ ತಿವಾಟಿ 22ರನ್ ಗಳಿಸಿದರು. ಬೌಲಿಂಗ್‌ನಲ್ಲಿ ಲಖನೌ ಪರವಾಗಿ ಆವೇಶ್‌ಖಾನ್ 2, ಮೊಹಸಿನ್ ಖಾನ್, ಜೇಸನ್ ಹೋಲ್ಡರ್ ತಲಾ ಒಂದೊಂದು ವಿಕೆಟ್ ಪಡೆದರು. 145ರನ್‌ಗಳ ಗುರಿ ಬೆನ್ನತ್ತಿದ್ದ ಲಖನೌ 13.5 ಓವರ್‌ಗಳಲ್ಲಿ ಕೇವಲ 82ರನ್‌ಗಳಿಗೆ ಆಲೌಟಾಯಿತು. ತಂಡದ ಪರವಾಗಿ ದೀಪಕ್ ಹೂಡ 27, ಕ್ವಿಂಟನ್ ಡಿಕಾಕ್ 11, ಆವೇಶ್‌ಖಾನ್ 12ರನ್ ಗಳಿಸಿದರು. ಬೌಲಿಂಗ್‌ನಲ್ಲಿ ಗುಜರಾತ್ ಪರವಾಗಿ ರಶೀದ್‌ಖಾನ್ 4, ಯಶ್‌ದಯಾಳ್, ಆರ್.ಸಾಯಿ ಕಿಶೋರ್ ತಲಾ 2, ಮಹಮ್ಮದ್ ಶಮಿ ಒಂದು ವಿಕೆಟ್ ಪಡೆದರು. ಉತ್ತಮ ಬ್ಯಾಟಿಂಗ್ ಮಾಡಿದ ಶುಭಮನ್ ಗಿಲ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.



ತಿ.ನರಸೀಪುರದ ಸಾಹಿತ್ಯ ಸಂಸ್ಕೃತಿ ವೇದಿಕೆಯಿಂದ ಬೆಂಗಳೂರಿನ ತಾತಗುಣಿಯಲ್ಲಿ ನಡೆದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ತಿ.ನರಸೀಪುರದ ಅನಾಥ ಶವಗಳ ಮುಕ್ತಿದಾತ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ ಆದ ಡಾ.ಮಾದೇಶ್ ಅವರಿಗೆ 'ಸಿದ್ಧಚಂದ್ರಕಿರಣ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ವೇಳೆ ಸಿದ್ಧಗಂಗಾಶ್ರೀಗಳಾದ ಶ್ರೀಸಿದ್ಧಲಿಂಗ ಸ್ವಾಮೀಜಿ, ಶಿವಗಂಗೆಯ ಶ್ರೀಮಲಯ ಶಾಂತಮುನಿ ದೇಶಿಕೇಂದ್ರ ಸ್ವಾಮೀಜಿ, ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, ಕಸಾಪ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್, ಪ್ರೊ.ಕೃಷ್ಣೇಗೌಡ, ಹಿರಿಯ ಸಾಹಿತಿ ಸದಾಶಿವಯ್ಯ, ಶಿಕ್ಷಣ ತಜ್ಞೆ ಗೀತಾ, ಕೃಷ್ಣೇಗೌಡರು, ಮಹಿಳಾ ಸಬಲೀಕರಣದ ಸವಿತಾ ಸೇರಿದಂತೆ ಇತರರಿದ್ದರು.

ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ಇವರು ದಿ:29.04.2022ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ **ವೈಕುಂಠ ಸಮಾರಾಧನೆಕಾರ್ಯ** ವನ್ನು ದಿ:11.05.2022 ಬುಧವಾರ ಶ್ರೀ ಹರಿಹರಾನಂದಭಾರತಿ ಸನ್ಯಾಸಾಶ್ರಮ, ಮಹಾಜನ ಕಾಲೇಜ್ ಹತ್ತಿರ, ಜಯಲಕ್ಷ್ಮೀಪುರಂ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಶ್ರೀ ಹೆಚ್.ಎನ್.ರಾಮರಾವ್
ನಿಧನ: 29-04-2022

ಭೋಜನ: ಮಧ್ಯಾಹ್ನ 1.00 ಘಂಟೆಗೆ

ದುಃಖತಪ್ತರು: ಶ್ರೀ ಹೆಚ್.ಆರ್.ಪುರುಷೋತ್ತಮ್ ಮತ್ತು ಕುಟುಂಬವರ್ಗದವರು
#67, ಜನನಿ, 3ನೇ ಮೇನ್, 3ನೇ ಬ್ಲಾಕ್, ಜಯಲಕ್ಷ್ಮೀಪುರಂ, ಮೈಸೂರು-12

ಒಂದನೇ ವರ್ಷದ ಸವಿನೆನಪು



ಲಾರಿ ಸುರೇಶ್ (ಸಿವಿಲ್ ಕಂಟ್ರಾಕ್ಟರ್)
ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ
ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ದುಃಖತಪ್ತರು:
ಪತ್ನಿ: ಸವಿತ, ಮಕ್ಕಳು: ಅವಿನಾಶ್, ಅಭಿಜಿತ್, ಪವಿತ್ರ ಹಾಗೂ ಕುಟುಂಬವರ್ಗ

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಇವರು ದಿ:01.05.2022ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ದಿ:12.05.2022 ನೇ ಗುರುವಾರ ಮಧ್ಯಾಹ್ನ 12-30 ಗಂಟೆಗೆ **ಹಾಲುತುಪ್ಪ ಮತ್ತು ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯ** ವನ್ನು ಶ್ರೀ ಮರಳೇಶ್ವರ ದೇವಸ್ಥಾನದ ಪಕ್ಕ, ಕಾವೇರಿ ಸ್ಕೂಲ್ ಹತ್ತಿರ, ಬಂಬೂಬಜಾರ್, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಶ್ರೀ ಸುರೇಶ್ ಎಸ್

ಭೋಜನ : ಸ್ವಗ್ರಾಮದಲ್ಲಿ

ದುಃಖತಪ್ತರು: ಶ್ರೀಮತಿ ತಾಯಮ್ಮ ಮತ್ತು ಶ್ರೀ ಸಿದ್ದಯ್ಯ.ಕೆ.
ಮೃತರ ಪತ್ನಿ ಶ್ರೀಮತಿ ಪ್ರತಿಮಾ ವಿ., ಹಾಗೂ ಕುಟುಂಬವರ್ಗ

4ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಹೆಚ್.ಜಿ.ಲಲಿತಾ ಮತ್ತು ಶ್ರೀ ಎನ್.ಮಣಿಕಂಠ
ಮರಣ: 11.05.2018 ಮರಣ: 24.10.2018
ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದಿದೆ. ಸದಾ ನಿಮ್ಮ ನೆನಪಿನಲ್ಲಿರುವ
ತಂದೆ ಗಣೇಶ್, ತಾಯಿ ಗೌರಿ, ಅಣ್ಣ ನವೀನ್, ತಮ್ಮ ಪ್ರವೀಣ್,ಅತ್ತಿಗೆಯಂದಿರು ಮಮತಾ, ಮಾನಸಾ, ಮಕ್ಕಳಾದ ಸಂಕೇತ್, ಸಂಜನಾ, ಮತ್ತು ಕುಟುಂಬಸ್ಥರು.
ಸುಣ್ಣದ ಬೀದಿ, ವಿರಾಜಪೇಟೆ ಪಟ್ಟಣ

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಮೈಸೂರು ವಿಭಾಗ,
ಅರಣ್ಯ ಭವನ, ಅಶೋಕಪುರಂ, ಮೈಸೂರು
ದೂ:0821-2483853, Email:dcfmdm@gmail.com
ಸಂಖ್ಯೆ:ಬಿ1/ಬಿಯುಡಿ/ಪಾ.ಚೀ/ಟೆಂಡರ್/ಸಿಆರ್-40/2022-23
ದಿನಾಂಕ: 05.05.2022

(ಇ-ಪ್ರೊಕ್ಯೂರ್‌ಮೆಂಟ್‌ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ಅರಣ್ಯ ಇಲಾಖೆ ಮೈಸೂರು ವೃತ್ತ ವ್ಯಾಪ್ತಿಯ ವಿಭಾಗಗಳಿಗೆ 2022-23ನೇ ಸಾಲಿಗೆ ಅಂದರೆ 1ನೇ ಜುಲೈ 2022 ರಿಂದ 31ನೇ ಮಾರ್ಚ್ 2023 ರವರೆಗೆ ವಿವಿಧ ಅಳತೆಯ HDPE ನೇಯ್ದ ಚೀಲಗಳನ್ನು ಸರಬರಾಜು ಮಾಡಲು ಇಚ್ಛೆ ಹೊಂದಿದ ಅಂಗೀಕೃತ ಉತ್ಪಾದಕರ/ ಸರಬರಾಜುದಾರರ ಸಂಭಾವ್ಯ ಪಟ್ಟಿಯನ್ನು ತಯಾರಿಸಲು ಉದ್ದೇಶಿಸಿರುವುದರಿಂದ ಆಸಕ್ತ HDPE ನೇಯ್ದ ಚೀಲಗಳ ಸರಬರಾಜುದಾರರು/ ಅಂಗೀಕೃತ ಉತ್ಪಾದ ಉದ್ದಿಮೆ ಘಟಕಗಳ ಗಮನವನ್ನು ಸೆಳೆಯುತ್ತಾ ಟೆಂಡರ್ ಪ್ರಕಟಣೆ ಹೊರಡಿಸಿದೆ. ಈ ಪ್ರಕಟಣೆಯಲ್ಲಿ ಮುಂದೆ ವಿಧಿಸಲಾಗುವ ಎಲ್ಲಾ ಷರತ್ತುಗಳನ್ನು **ಕರ್ನಾಟಕ ಸಾರ್ವಜನಿಕ ಸರಬರಾಜು ಸಂಗ್ರಹಣೆಗಳಿಗೆ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ** ಅರ್ಥೈಸಿಕೊಳ್ಳತಕ್ಕದ್ದು. ಅರ್ಜಿದಾರರು ಟೆಂಡರ್ ನಮೂನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ವೆಬ್‌ಸೈಟ್ https://www.eproc.karnataka.gov.in ಯಿಂದ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ತುಂಬಿದ ಟೆಂಡರ್ ಸವಾಲುಗಳನ್ನು ಅಪ್‌ಲೋಡ್ ಮಾಡಲು **ದಿನಾಂಕ: 03.06.2022** ರಂದು **ಸಂಜೆ: 4.00 ಗಂಟೆ**ತನಕ ಅವಕಾಶವಿರುತ್ತದೆ. ತಾಂತ್ರಿಕ ಸವಾಲುಗಳನ್ನು **ದಿನಾಂಕ: 06.06.2022**ರಂದು **ಸಂಜೆ: 4.00 ಗಂಟೆಗೆ** ಈ ಕಛೇರಿಯಲ್ಲಿ ತೆರೆಯಲಾಗುವುದು/ಡೌನ್‌ಲೋಡ್ ಮಾಡಲಾಗುವುದು. ತಾಂತ್ರಿಕ ಪರಿಶೀಲನೆ ಹಂತದಲ್ಲಿ, ಅರ್ಹರಾದ ಸವಾಲುದಾರರ ಆರ್ಥಿಕ ಸವಾಲುಗಳನ್ನು **ದಿನಾಂಕ: 07.06.2022**ರಂದು **ಸಂಜೆ: 4.30 ಗಂಟೆಗೆ** ಈ ಕಛೇರಿಯಲ್ಲಿ ತೆರೆಯಲಾಗುವುದು/ ಡೌನ್‌ಲೋಡ್ ಮಾಡಲಾಗುವುದು. ಸದರಿ ದಿನಾಂಕದಂದು ಟೆಂಡರ್ ಬಾರದ ಕಾಮಗಾರಿಗಳಿಗೆ ಇದೇ ಟೆಂಡರ್ ಪ್ರಕಟಣೆ ಷರತ್ತಿಗೆ ಒಳಪಟ್ಟು ಮರು ಟೆಂಡರ್ **ದಿನಾಂಕ: 14.06.2022 ರಂದು** ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 16.06.2022 ರಂದು ಸಂಜೆ 4.00 ಗಂಟೆಯ** ನಂತರ ಹಾಗೂ ಆರ್ಥಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 17.06.2022 ರ ಸಂಜೆ 4.00 ಗಂಟೆ.** ಒಂದು ವೇಳೆ ಮೇಲೆ ನಮೂದಿಸಿರುವ ದಿನಾಂಕಗಳು ಸಾರ್ವತ್ರಿಕ ರಜೆಗಳೆಂದು ಘೋಷಣೆಯಾದಲ್ಲಿ ಮುಂದಿನ ಕೆಲಸದ ದಿನವು ಟೆಂಡರ್ ಸಲ್ಲಿಸುವ ಅಥವಾ ತೆರೆಯುವ ಪ್ರಕ್ರಿಯೆ ನಡೆಸುವ ದಿನವಾಗಿರುತ್ತದೆ. ಉಳಿದಂತೆ ಯಾವುದೇ ಬದಲಾವಣೆಗಳಿರುವುದಿಲ್ಲ. ಟೆಂಡರ್ ಪ್ರಕ್ರಿಯೆ ಮತ್ತು ಷರತ್ತುಗಳ ಕುರಿತಾದ ಮಾಹಿತಿ/ಸ್ಪಷ್ಟೀಕರಣ ಅಥವಾ ಷರತ್ತುಗಳ ಬದಲಾವಣೆಯ ಬಗ್ಗೆ ಸವಾಲುದಾರರಿಗೆ ಮಾಹಿತಿ ನೀಡುವ ಸಲುವಾಗಿ ಸವಾಲು ಟೆಂಡರ್ ಪೂರ್ವ ಸಭೆಯನ್ನು **ದಿನಾಂಕ: 25.05.2022** ರಂದು ಬೆಳಿಗ್ಗೆ : **11.30 ಗಂಟೆಗೆ** ಮೈಸೂರು ವಿಭಾಗ, ಕಛೇರಿ, ಮೈಸೂರು ಇಲ್ಲಿ ನಿಗದಿಪಡಿಸಲಾಗಿದೆ. ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಈ ಸಹಿದಾರರ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು ವಿಭಾಗ, ಮೈಸೂರು.
DIPR/DDMYS/MCA/80/2022-23

ಜೆ.ಪಿ.ನಗರ ಬ್ರಾಹ್ಮಣ ಸಂಘ (ರಿ.)

ಜೆ.ಪಿ.ನಗರ, ಮೈಸೂರು - 570031

<u>ಚುನಾವಣಾ ಅಧಿಕಾರಿಗಳ ಕಾರ್ಯಾಲಯದಿಂದ ಚುನಾವಣಾ ನೋಟೀಸ್ ಹಾಗೂ ವೇಳಾ ಪಟ್ಟಿ</u>

ಜೆ.ಪಿ.ನಗರ ಬ್ರಾಹ್ಮಣ ಸಂಘ ರಿ. ಮೈಸೂರು ಇದರ ಪದಾಧಿಕಾರಿಗಳಿಗೆ 2022 ರಿಂದ 2025 ಮೂರು (3) ವರ್ಷಗಳ ಅವಧಿಗೆ ಚುನಾವಣೆ ನಡೆಸಲು ಈ ಸಂಘದ ಉಪನಿಯಮ ರೀತ್ಯಾ ದಿನಾಂಕ: 03-06-2022 ರ ಶುಕ್ರವಾರ ಬೆಳಿಗ್ಗೆ 8-00 ಗಂಟೆಯಿಂದ ಸಂಜೆ 6-00 ಗಂಟೆಯವರೆಗೆ ಸಂಘದ ಕಟ್ಟಡ, ಜೆ.ಪಿ.ನಗರ, ಮೈಸೂರು ಇದರ ಆವರಣದಲ್ಲಿ ಪದಾಧಿಕಾರಿಗಳ ಚುನಾವಣೆಯನ್ನು ನಡೆಸಲಾಗುವುದೆಂದು ನೋಟೀಸ್ ನೀಡಲಾಗಿದೆ. ಈ ನೋಟೀಸ್‌ನೊಂದಿಗೆ ಚುನಾವಣಾ ವೇಳಾಪಟ್ಟಿಯನ್ನು ಈ ಕೆಳಕಂಡಂತೆ ಪ್ರಕಟಿಸಿರುತ್ತೇನೆ.

ಕ್ರ.ಸಂ	ವಿವರಗಳು	ದಿನಾಂಕ / ವಾರ / ಸ್ಥಳ / ವೇಳೆ ಮತ್ತು ವಿವರ
1	ನಾಮಿನೇಷನ್ ಅರ್ಜಿಗಳನ್ನು ಪಡೆಯಲು / ಸಲ್ಲಿಸಲು ಪ್ರಾರಂಭ ಹಾಗೂ ಕೊನೆಯ ದಿನಾಂಕ	ದಿ:18-05-2022ನೇ ಬುಧವಾರದಿಂದ ದಿ:25-05-2022ನೇ ಬುಧವಾರ ಬೆಳಗ್ಗೆ 11-00 ರಿಂದ ಮಧ್ಯಾಹ್ನ 2-00 ಘಂಟೆ ಒಳಗೆ ಸಂಘದ ಕಛೇರಿಯಲ್ಲಿ ಚುನಾವಣಾಧಿಕಾರಿಗೆ ಅಥವಾ ಅವರಿಂದ ಅಧಿಕಾರ ಪಡೆದವರಿಗೆ
2	ನಾಮಿನೇಷನ್ ಅರ್ಜಿಗಳನ್ನು ಪರಿಶೀಲಿಸುವುದು.	ದಿ:26.05.2022ನೇ ಗುರುವಾರ ಬೆಳಗ್ಗೆ 11-00 ಗಂಟೆಗೆ ಸಂಘದ ಕಛೇರಿಯಲ್ಲಿ ಚುನಾವಣಾಧಿಕಾರಿರವರಿಂದ
3	ಅರ್ಹತೆ ಪಡೆದ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸುವುದು.	ದಿ:26.05.2022ನೇ ಗುರುವಾರ ನಾಮಪತ್ರಗಳ ಪರಿಶೀಲನೆಯ ನಂತರ ಸಂಘದ ನೋಟೀಸ್ ಬೋರ್ಡಿನಲ್ಲಿ ಚುನಾವಣಾಧಿಕಾರಿರವರಿಂದ
4	ನಾಮಿನೇಷನ್ ಅರ್ಜಿಯನ್ನು ವಾಪಸ್ಸು ಪಡೆಯಲು ದಿನಾಂಕ	ದಿ: 27-05-2022ನೇ ಶುಕ್ರವಾರ ಮಧ್ಯಾಹ್ನ 3-00 ಕೊನೆಯ ಗಂಟೆಯ ಒಳಗೆ ಚುನಾವಣಾಧಿಕಾರಿಗೆ ಅಥವಾ ಅವರಿಂದ ಅಧಿಕಾರ ಪಡೆದವರಿಗೆ ಸಂಘದ ಕಛೇರಿಯಲ್ಲಿ
5	ಅರ್ಹತೆ ಪಡೆದವರ ಅಂತಿಮ ಪಟ್ಟಿ ಪ್ರಕಟಿಸುವುದು	ದಿ: 27.05.2022ನೇ ಶುಕ್ರವಾರ ಮಧ್ಯಾಹ್ನ 3-00 ಗಂಟೆಯ ನಂತರ ಸಂಘದ ನೋಟೀಸ್ ಬೋರ್ಡಿನಲ್ಲಿ ಚುನಾವಣಾಧಿಕಾರಿರವರಿಂದ
6	ಚುನಾವಣೆ ನಡೆಸಬೇಕಾದಲ್ಲಿ ಅರ್ಹತೆ ಪಡೆದವರಿಗೆ ಚಿಹ್ನೆ ನೀಡುವುದು	ದಿ:27-05-2022ನೇ ಶುಕ್ರವಾರ ಮಧ್ಯಾಹ್ನ 3-00 ಗಂಟೆಯ ನಂತರ ಸಂಘದ ನೋಟೀಸ್ ಬೋರ್ಡಿನಲ್ಲಿ ಚುನಾವಣಾಧಿಕಾರಿರವರಿಂದ
7	ಚುನಾವಣೆಗೆ ಸ್ಪರ್ಧಿಸಲು ಕಣದಲ್ಲಿ ಉಳಿದಿರುವ ಅಭ್ಯರ್ಥಿಗಳ ಪಟ್ಟಿ ಚಿಹ್ನೆ ಸಮೇತ ಪ್ರಕಟಣೆ	ದಿ: 28-05-2022ನೇ ಶನಿವಾರ ಮಧ್ಯಾಹ್ನ 12-00 ಗಂಟೆ ನಂತರ ಚುನಾವಣಾಧಿಕಾರಿರವರಿಂದ ಸಂಘದ ನೋಟೀಸ್ ಬೋರ್ಡಿನಲ್ಲಿ ಪ್ರಕಟಣೆ
8	ಚುನಾವಣೆ ನಡೆಯುವ ದಿನಾಂಕ, ಸ್ಥಳ ಮತ್ತು ವೇಳೆ	ದಿ: 03-06-2022ನೇ ಶುಕ್ರವಾರ ಬ್ರಾಹ್ಮಣ ಸಂಘದ ಕಟ್ಟಡ, ಜೆ.ಪಿ.ನಗರ, ಮೈಸೂರು ಇಲ್ಲಿ ಬೆಳಗ್ಗೆ 8-00 ಗಂಟೆಯಿಂದ ಸಂಜೆ 6-00 ಗಂಟೆಯವರೆಗೆ
9	ಮತಗಳ ಎಣಿಕೆಯ ದಿನಾಂಕ ಹಾಗೂ ವೇಳೆ ನಂತರ ಚುನಾವಣಾ ಫಲಿತಾಂಶ ಪ್ರಕಟಣೆ	ದಿ:03-06-2022 ರಂದು ಮತದಾನ ಮುಕ್ತಾಯವಾದ ಬ್ರಾಹ್ಮಣ ಸಂಘದ ಕಟ್ಟಡ, ಜೆ.ಪಿ.ನಗರ, ಮೈಸೂರು ಇಲ್ಲಿ ಮತ ಎಣಿಕೆ ನಡೆಸಲಾಗುತ್ತದೆ. ಮತಗಳ ಎಣಿಕೆ ಮುಕ್ತಾಯವಾದ ನಂತರ ಫಲಿತಾಂಶ ಪ್ರಕಟಣೆ

ಸಹಿ/-
ಚುನಾವಣಾಧಿಕಾರಿ, ಜೆ.ಪಿ.ನಗರ ಬ್ರಾಹ್ಮಣ ಸಂಘ (ರಿ.)